ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 22 ಭಾನುವಾರ 2023


ಸಂಪುಟ: 43 | ಸಂಚಿಕೆ: 275 | ಪುಟಗಳು: 12

₹4

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

ಕೆಬಿಜಿಯವರ
ಛೂಮಂತ್ರ... ಛೂಮಂತ್ರ...



ಸನಾತನ ಧರ್ಮದ ಆಧ್ಯಾತ್ಮಿಕ ಗುರುಗಳ ಕಡೆಯ ದಿನಗಳ ಬಗ್ಗೆ ಒಂದು ಚಿಂತನೆ

■ ಪುಟ–4

ಬಿ.ಎಲ್.ಸಂತೋಷ್‌ಗೆ ಬಿಜೆಪಿ ಚುನಾವಣಾ ಉಸ್ತುವಾರಿ



- ಯಡಿಯೂರಪ್ಪರನ್ನು ಬಿಟ್ಟರೆ ಚುನಾವಣೆ 'ಚಾಣಾಕ್ಷ' ಪರಿಗಣನೆ
- ಇವರಿಗೆ ಸಂಘಟನಾ ಕಾರ್ಯದರ್ಶಿ ಅರುಣ್, ಸಚಿವ ಅಶ್ವತ್ಥನಾರಾಯಣ್ ಸಹಕಾರ
- ಹಳೇ ಮೈಸೂರು ಭಾಗದಲ್ಲಿ ಕಾಂಗ್ರೆಸ್, ಜೆಡಿಎಸ್ ವರ್ಚಸ್ವಿ ನಾಯಕರ ಸೆಳೆಯಲು ತಂತ್ರ

ಬೆಂಗಳೂರು, ಜ.21(ಕೆಎಂಶಿ)–ಮುಂಬರುವ ರಾಜ್ಯ ವಿಧಾನ ಸಭಾ ಚುನಾವಣೆಯ ಪೂರ್ಣ ಹೊಣೆಗಾರಿಕೆಯು ಬಿಜೆಪಿಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಹೆಗಲೇರಿದೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನಂತರ ರಾಜ್ಯದಲ್ಲಿ ಚುನಾವಣಾ ತಂತ್ರಗಾರಿಕೆ ರೂಪಿಸುವ, ಹೋರಾಟ ನಡೆಸುವ ನಾಯಕತ್ವ ರಾಜ್ಯದಲ್ಲಿ ಯಾರಿಗೂ ಇಲ್ಲದ ಕಾರಣ ಸಂತೋಷ್‌ಗೆ ಜವಾಬ್ದಾರಿ ವಹಿಸಿದ್ದಾರೆ. ವರಿಷ್ಠರ ತೀರ್ಮಾನದಂತೆ ಅವರು, ರಾಜ್ಯದಲ್ಲಿ ತಮ್ಮದೇ ಆದ ಪಡೆಯ ಮೂಲಕ ಚುನಾವಣಾ ಕಾರ್ಯತಂತ್ರ ರೂಪಿಸುತ್ತಿದ್ದಾರೆ. ಚುನಾವಣಾ ಪೂರ್ವ ಸಮೀಕ್ಷೆಯ ವರದಿ ಮುಂದಿಟ್ಟುಕೊಂಡು ಹಳೇ ಮೈಸೂರು ಭಾಗದಲ್ಲಿ ಅಭ್ಯರ್ಥಿಗಳ ಆಯ್ಕೆ ಮತ್ತು ಆಪರೇಷನ್ ಕಮಲಕ್ಕೆ ಸಂಬಂಧಿಸಿದಂತೆ ಚರ್ಚೆ ಪ್ರಾರಂಭಿಸಿದ್ದಾರೆ. ಕಾಂಗ್ರೆಸ್ ಮತ್ತು ಜೆಡಿಎಸ್‌ನಲ್ಲಿರುವ ಪ್ರಭಾವಿ ಹಾಗೂ ವೈಯಕ್ತಿಕ ವರ್ಚಸ್ಸುಳ್ಳ ನಾಯಕರನ್ನು ಸೆಳೆಯಲು ತೆರೆಮರೆಯಲ್ಲಿ ಮಾತುಕತೆ ನಡೆದಿದೆ. ಸಂತೋಷ್ ಅವರಿಗೆ ರಾಜ್ಯ ಸಂಘಟನಾ ಕಾರ್ಯದರ್ಶಿ ಅರುಣ್, ಸಚಿವ ಡಾ. ಅಶ್ವತ್ಥನಾರಾಯಣ ಅವರು ಸಹಕರಿಸಲಿದ್ದಾರೆ.

ಸಂತೋಷ್ ನಿಗದಿಪಡಿಸಿದ ವೇಳಾಪಟ್ಟಿ ಪ್ರಕಾರ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಸೇರಿದಂತೆ ಹಲವು ನಾಯಕರು ರಾಜ್ಯಾದ್ಯಂತ ಚುನಾವಣಾ ಪ್ರಚಾರವನ್ನು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕೈಗೊಳ್ಳುತ್ತಿದ್ದಾರೆ. ಒಬ್ಬರ ರಾಜ್ಯ ಪ್ರವಾಸ ಮುಗಿದ ಬೆನ್ನಲ್ಲೇ ಮತ್ತೊಬ್ಬರು ಬಂದು, ಒಂದಲ್ಲ ಒಂದು ▶ 9ನೇ ಪುಟಕ್ಕೆ

ರಾಜ್ಯದಲ್ಲಿ ಕಾಂಗ್ರೆಸ್‌ಗೆ ನಿಚ್ಚಳ ಬಹುಮತ ಖಚಿತ

- ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪೂರ್ಣವಿಶ್ವಾಸ
- ಬಿಜೆಪಿಗೆ ತಕ್ಕ ಪಾಠ ಕಲಿಸಲು ಕಾದಿರುವ ಜನತೆ



ಮೈಸೂರು,ಜ.21(ಎಂಟಿವೈ)–ಬಿಜೆಪಿ ಸರ್ಕಾರದ ಮಿತಿ ಮೀರಿದ ಭ್ರಷ್ಟಾಚಾರ ಹಾಗೂ ಲಂಚ ಗುಳಿತನದಿಂದ ರಾಜ್ಯದ ಜನತೆ ಬೇಸತ್ತಿದ್ದು, ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನಿಚ್ಚಳ ಬಹುಮತ ಗಳಿಸುವುದು ಖಚಿತ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭವಿಷ್ಯ ನುಡಿದಿದ್ದಾರೆ.

ಮೈಸೂರಿನ ರಾಮಕೃಷ್ಣನಗರದಲ್ಲಿರುವ ತಮ್ಮ ನಿವಾಸದ ಬಳಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಭ್ರಷ್ಟಾಚಾರದಿಂದ ಜನ ಭ್ರಮನಿರಸನಗೊಂಡಿದ್ದಾರೆ. ಅದರಲ್ಲೂ ರಾಜ್ಯದ ಬಿಜೆಪಿ ಸರ್ಕಾರ ಶೇ.40ರಷ್ಟು ▶ 9ನೇ ಪುಟಕ್ಕೆ

ಕೋಲಾರದಲ್ಲಿ ಸಿದ್ದು ಸೋಲಿಸಿ: ದಲಿತ ಸಿಎಂ ಅಭಿಯಾನ

ಕೋಲಾರ, ಜ.21–ಕೋಲಾರದಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಸ್ಪರ್ಧೆ ಘೋಷಣೆಯಾಗುತ್ತಿದ್ದಂತೆ ದಲಿತ ಸಿಎಂ ಕೂಗು ಮತ್ತೆ ಮುನ್ನೆಲೆಗೆ ಬಂದಿದೆ. ದಲಿತ ಮುಖಂಡರು ಕೋಲಾರದಲ್ಲಿ ದಲಿತ ಮತದಾರರ ಜಾಗೃತಿ ಅಭಿಯಾನದ ಮೂಲಕ ನಗರದೆಲ್ಲೆಡೆ ದಲಿತ ಮತದಾರರ ಜಾಗೃತಿ ಅಭಿಯಾನ ಕೈಗೊಂಡಿರುವುದಾಗಿ ತಿಳಿಸಿದ್ದಾರೆ. ಕೋಲಾರ ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಜೆಡಿಎಸ್ ಮುಖಂಡ ಬಾಲಾಜಿ ಚನ್ನಯ್ಯ, ದಲಿತ ಮುಖಂಡರು ದಲಿತ ಮತದಾರರ ಜಾಗೃತಿ ಅಭಿಯಾನ ಹಮ್ಮಿಕೊಂಡಿದ್ದಾರೆ. ಕರಪತ್ರಗಳ ಮೂಲಕ ಜಾಗೃತಿ ಮೂಡಿಸಲು ಮುಂದಾಗಿದ್ದೇವೆ. ಇದು ಬರೀ ಕೋಲಾರ ಮಾತ್ರವಲ್ಲದೆ ರಾಜ್ಯದೆಲ್ಲೆಡೆ ಅಭಿಯಾನ ಮಾಡುತ್ತೇವೆ. ದಲಿತರನ್ನು ಹಂತ ಹಂತವಾಗಿ ಮುಗಿಸಿದ ಸಿದ್ದರಾಮಯ್ಯ ಅವರನ್ನು ಸೋಲಿಸುವ ಮೂಲಕ ದಲಿತ ಮುಖ್ಯಮಂತ್ರಿ ಹಾದಿ ಸುಲಭಗೊಳಿಸುವುದು, ದಲಿತ ಮತದಾರರ ಜಾಗೃತಿ ಅಭಿಯಾನ ಮಾಡುವ ಮೂಲಕ ▶ 9ನೇ ಪುಟಕ್ಕೆ

ಮೂವರು ಬಲಿಯಾದ ಬೆನ್ನಲ್ಲೇ ಶನಿವಾರ ರಾತ್ರಿ ಬಾಲಕನ ಮೇಲೆ ದಾಳಿ ನಡೆಸಿ ಹೊತ್ತೊಯ್ದ ಚಿರತೆ

- ತಿ.ನರಸೀಪುರ ಸುತ್ತಮುತ್ತಲ ಗ್ರಾಮಸ್ಥರಲ್ಲಿ ಮತ್ತೆ ಭಾರೀ ಆತಂಕ
- ಸ್ಥಳಕ್ಕೆ ಅರಣ್ಯಾಧಿಕಾರಿಗಳು ದೌಡು: ಅಹೋರಾತ್ರಿ ಕಾರ್ಯಾಚರಣೆ
- ಊಟ ಮಾಡಿ ಅಂಗಡಿಯಲ್ಲಿ ಬಿಸ್ಕತ್ ತರಲು ಹೋದ ಬಾಲಕ ನಾಪತ್ತೆ
- ಹೊರಳಹಳ್ಳಿ ಗ್ರಾಮದ ಬೀದಿಯಲ್ಲಿ ರಕ್ತದ ಕಲೆ ಕಂಡು ಕಂಗಾಲಾದ ಗ್ರಾಮಸ್ಥರು

ತಿ.ನರಸೀಪುರ, ಜ.21(ಎಸ್‌ಕೆ)–ತಿ.ನರಸೀಪುರ ತಾಲೂಕಿನಲ್ಲಿ ಚಿರತೆಗಳು ಬೆನ್ನತ್ತಿದ ಬೇತಾಳದಂತೆ ಒಂದರ ಹಿಂದೊಂದು ಮಾನವ ಬಲಿ ಪಡೆಯುತ್ತಿವೆ. ತಾಲೂಕಿನ ಒಂದು ಭಾಗದ ಜನ ಕಳೆದ 6 ತಿಂಗಳಿಂದ ಚಿರತೆ ಭಯದಿಂದಾಗಿ ದಿಗ್ಭ್ರಾಂತರಾಗಿದ್ದಾರೆ.

ಈ ಮಧ್ಯೆ ಇಂದು ರಾತ್ರಿ ತಾಲೂಕಿನ ಹೊರಳಹಳ್ಳಿ ಗ್ರಾಮದಲ್ಲಿ ಬಾಲಕನ ಮೇಲೆ ದಾಳಿ ನಡೆಸಿ, ಹೊತ್ತೊಯ್ದಿರುವುದು ತಾಲೂಕಿನ ಗ್ರಾಮೀಣ ಜನರಲ್ಲಿ ತೀವ್ರ ಆತಂಕ ಮೂಡಿಸಿದೆ. ತಾಲೂಕಿನಲ್ಲಿ ಚಿರತೆಯು ಮೊಟ್ಟಮೊದಲ ಬಲಿ ಪಡೆದದ್ದು 6 ತಿಂಗಳ ಹಿಂದೆ. ಆಗಸ್ಟ್ 30ರಂದು ಎಂ.ಎಲ್. ಹುಂಡಿ ಗ್ರಾಮದಲ್ಲಿ ಚಿರತೆ ವ್ಯಕ್ತಿಯೋರ್ವನನ್ನು ಬಲಿ ಪಡೆದಿತ್ತು. ಈ ವೇಳೆ ಅರಣ್ಯ ಇಲಾಖೆ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಕಾರ್ಯೋನ್ಮುಖರಾಗಿ ತೀವ್ರ ಕಾರ್ಯಾಚರಣೆ ನಡೆಸಿದರಾದರೂ, ಚಿರತೆಯ ಸುಳಿವು ದೊರೆತಿರಲಿಲ್ಲ.



ಇದಾದ 4 ತಿಂಗಳ ಕಾಲ ಚಿರತೆಯ ಭಯವಿಲ್ಲದೇ ಜನರು ನೆಮ್ಮದಿಯಿಂದಿದ್ದರು. ಡಿ.1ರಂದು ಕೆಬ್ಬೆಹುಂಡಿಯಲ್ಲಿ ಪದವೀಧರೆ ಯುವತಿಯನ್ನು ಚಿರತೆ ದಾಳಿ ನಡೆಸಿ, ಆಕೆಯ ಕೊಂದು ಹಾಕಿತ್ತು. ಮತ್ತೆ ಅರಣ್ಯ ಸಿಬ್ಬಂದಿ ಸೂಕ್ಷ್ಮ ಪ್ರದೇಶಗಳಲ್ಲಿ ಬೋನ್‌ಗಳನ್ನಿಟ್ಟು ಚಿರತೆ ಸೆರೆಗೆ ಮುಂದಾದರು. ಕೊನೆಗೂ 2 ಚಿರತೆಗಳು ಬೋನಿಗೆ ಬಿದ್ದಿದ್ದವು. ಚಿರತೆಗಳು ಸೆರೆಯಾಗಿರುವುದರಿಂದ ಇನ್ನೇನು ಭಯವಿಲ್ಲವೆಂದು ಗ್ರಾಮಸ್ಥರು ಸಹಜ ಜೀವನಕ್ಕೆ ಮರಳುತ್ತಿದ್ದಂತೆಯೇ ಜನವರಿ 20 (ನಿನ್ನೆ)ರಂದು ಕನ್ನಾಯಕನಹಳ್ಳಿಯಲ್ಲಿ ಸೌದೆ ತರಲು ಹೋಗಿದ್ದ ವೃದ್ಧೆಯನ್ನು ಚಿರತೆ ಬಲಿ ಪಡೆದು ಮತ್ತೆ ಆತಂಕವನ್ನು ಹೆಚ್ಚಿಸಿದೆ. ಜನರ ಆತಂಕ ಮಾಸುವ ಮುನ್ನವೇ ಇಂದು ರಾತ್ರಿ ಹೊರಳಹಳ್ಳಿ ಗ್ರಾಮದಲ್ಲಿ ಬಿಸ್ಕತ್ ತರಲು ಅಂಗಡಿಗೆ ಹೋಗಿದ್ದ 12 ವರ್ಷದ ಬಾಲಕನ ಮೇಲೆ ದಾಳಿ ನಡೆಸಿರುವ ಚಿರತೆ, ಆತನ ಹೊತ್ತೊಯ್ದಿದೆ.

ರಾತ್ರಿ 8.30ರಲ್ಲಿ ಊಟ ಮಾಡಿ ಬಿಸ್ಕತ್ ತರಲು ಅಂಗಡಿಗೆ ಹೋದ ಬಾಲಕ ಎಷ್ಟು ಹೊತ್ತಾದರೂ ಬಾರದಿದ್ದಾಗ ಪೋಷಕರು ಹುಡುಕಾಟ ನಡೆಸಿದ ವೇಳೆ ರಸ್ತೆಯಲ್ಲಿ ರಕ್ತದ ಕಲೆಗಳು ಕುರುಚಲು ಅರಣ್ಯದತ್ತ ಸಾಗುವ ಮಾರ್ಗ ▶ 6ನೇ ಪುಟಕ್ಕೆ

ಯೋಗದ ಮಾಹಿತಿಯುಳ್ಳ ಕ್ಯಾಲೆಂಡರ್ ಬಿಡುಗಡೆ



ಮೈಸೂರು,ಜ.21(ಎಂಟಿವೈ)–ಹಿಮಾಲಯ ಪ್ರತಿಷ್ಠಾನ ಹೊರ ತಂದಿರುವ ಯೋಗಾಭ್ಯಾಸದ ಮಾಹಿತಿಯುಳ್ಳ ನೂತನ ವರ್ಷದ ಕ್ಯಾಲೆಂಡರನ್ನು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಿಡುಗಡೆ ಮಾಡಲಾಯಿತು. ಇದೇ ವೇಳೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿ, ಮೈಸೂರು, ವಿಶ್ವದಾದ್ಯಂತ ಈಗಾಗಲೇ ಯೋಗಕ್ಕೆ ಪ್ರಸಿದ್ಧಿ ಪಡೆದಿದೆ. ಹೀಗಾಗಿಯೇ ಒಮ್ಮೆ ಪ್ರಧಾನಿ ಮೋದಿ ಸಹ ನಗರಕ್ಕೆ ಭೇಟಿ ನೀಡಿ, ಇಲ್ಲಿ ಯೋಗಾಭ್ಯಾಸ ಮಾಡಿ ಹೋಗಿದ್ದಾರೆ. ಅಲ್ಲದೆ, ರಾಜ ಮಹಾರಾಜರ ಕಾಲದಿಂದಲೂ ನಗರದಲ್ಲಿ ಯೋಗಕ್ಕೆ ಪ್ರೋತ್ಸಾಹ ನೀಡುತ್ತ ಬಂದಿದ್ದರು. ನಂತರ ಹಲವರು ಅದನ್ನು ವಿಶ್ವಮಟ್ಟಕ್ಕೆ ಕೊಂಡೊಯ್ದರು. ಯೋಗಾಭ್ಯಾಸದ ಸರಳ ಆಸನಗಳ ಮಾಹಿತಿಯುಳ್ಳ ಈ ಕ್ಯಾಲೆಂಡರ್ ಉಪಯುಕ್ತವಾಗಿದೆ ಎಂದರು. ಈ ವೇಳೆ ಜಿಎಸ್‌ಎಸ್ ಫೌಂಡೇಷನ್ ಮುಖ್ಯಸ್ಥ ಶ್ರೀಹರಿ, ಸಮಾಜಸೇವಕ ಕೆ.ರಘುರಾಂ ವಾಜಪೇಯಿ, ಶಶಿಕುಮಾರ್, ನಂದಿನಿ ಮೂರ್ತಿ, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತು ಉಪಸ್ಥಿತರಿದ್ದರು.



ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಯುವ ಜನತಾದಳದ ರಾಜ್ಯಾಧ್ಯಕ್ಷರಾದ ನಿಖಿಲ್ ಕುಮಾರಸ್ವಾಮಿ ಅವರನ್ನು ಮೈಸೂರು ನಗರ ಜೆಡಿಎಸ್ ಪ್ರಧಾನ ಕಾರ್ಯದರ್ಶಿಗಳಾದ ಒಂಟಿಕೊಪ್ಪಲ್ ಸತೀಶ್, ಮುದ್ದು ರಾಜು, ಪಂಚಲಿಂಗ ಸ್ವಾಮಿ ದೇವಸ್ಥಾನದ ವಕ್ತಾರರು ಅಭಿನಂದಿಸಿ, ಶುಭಾಶಯ ಕೋರಿದರು.

ಎಸ್.ಬಾಲಾಜಿಗೆ ಉತ್ತಮ ಶಿಕ್ಷಕ ಪ್ರಶಸ್ತಿ



ಮೈಸೂರು, ಜ.21(ಆರ್‌ಕೆ)– ಬೆಂಗಳೂರಿನ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯು ಕೊಡಮಾಡುವ ಜನಸ್ನೇಹಿ ಐಎಎಸ್ ಅಧಿಕಾರಿ ದಿ. ಅನಿತಾ ಕೌಲ್ ನೆನಪಿನ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲಾ ಪ್ರಾಂಶುಪಾಲ ಎಸ್.ಬಾಲಾಜಿ ಆಯ್ಕೆಯಾಗಿದ್ದಾರೆ.

ಬೆಂಗಳೂರಿನ ಬಸವನಗುಡಿ ನ್ಯಾಷನಲ್ ಕಾಲೇಜು ಮಲ್ಟಿ ಮೀಡಿಯಾ ಸಭಾಂಗಣದಲ್ಲಿ ನಾಳೆ (ಭಾನುವಾರ) ಬೆಳಗ್ಗೆ 11ಕ್ಕೆ ನಡೆಯಲಿರುವ ಸಮಾರಂಭದಲ್ಲಿ ಎಸ್.ಬಾಲಾಜಿ ಸೇರಿದಂತೆ ರಾಜ್ಯಾದ್ಯಂತ ಇಬ್ಬರು ಕಾಲೇಜು ಪ್ರಾಂಶುಪಾಲರು, 16 ಪ್ರೌಢಶಾಲಾ ಶಿಕ್ಷಕರು, 18 ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ ಮೂವರು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ.

ಸಿದ್ದಪ್ಪಾಜಿಗೆ ಪಿಎಚ್.ಡಿ ಪದವಿ



ಮೈಸೂರು, ಜ.21– ಡಾ. ಅಕ್ಕಮಹಾದೇವಿ ಅವರ ಮಾರ್ಗದರ್ಶನದಲ್ಲಿ ಎನ್.ಸಿದ್ದಪ್ಪಾಜಿ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ, ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನಿಧನ



ಎಂ.ನಾಗಭೂಷಣ ಆರಾಧ್ಯ

ಮೈಸೂರು, ಜ.21–ನಗರದ ಗಂಗೋತ್ರಿ ಬಡಾವಣೆಯಲ್ಲಿ ವಾಸವಾಗಿದ್ದ ನಿವೃತ್ತ ಶಿಕ್ಷಕರಾದ ಎಂ.ನಾಗಭೂಷಣ ಆರಾಧ್ಯ (95) ವಯೋಸಹಜ ಕಾಯಿಲೆಯಿಂದ ಶನಿವಾರ ಬೆಳಗ್ಗೆ ಸ್ವಗೃಹದಲ್ಲಿ ನಿಧನ ಹೊಂದಿದರು. ಮೂಲತಃ ಹುಣಸೂರು ತಾಲೂಕಿನ ಬಿಳಿಕೆರೆ ಹೋಬಳಿ ದಳ್ಳಾಳು ಗ್ರಾಮದ ನಾಗಭೂಷಣ ಆರಾಧ್ಯ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ, ಮುಖ್ಯೋಪಾಧ್ಯಾಯರಾಗಿ ನಿವೃತ್ತರಾಗಿದ್ದರು. ಇವರಿಗೆ ಪತ್ನಿ ಲಲಿತಾಂಬಿಕ, ಮಹಾರಾಣಿ ಕಾಲೇಜಿನ ನಿವೃತ್ತ ಕನ್ನಡ ಉಪನ್ಯಾಸಕ ಮಹೇಶ್ ಕುಮಾರ್ ಸೇರಿದಂತೆ ಇಬ್ಬರು ಗಂಡು ಮಕ್ಕಳು ಹಾಗೂ ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಇಂದು ವಿದ್ಯಾರಣ್ಯಪುರಂನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು.

ಎಕ್ಸ್‌ಪೋರ್ಟ್ ಹಬ್ ಆಗಿ ಮೈಸೂರು ಅಭಿವೃದ್ಧಿ

ಮೈಸೂರಿನ ಭೌಗೋಳಿಕ ವಿಶೇಷತೆಗಳಾದ ಅಗರ್‌ಬತ್ತಿ, ಸಿಲ್ಕ್, ಸ್ಯಾಂಡಲ್ ಸೋಪ್, ರೋಸ್‌ವುಡ್ ಇನ್‌ಲೇಯಂತಹ ಉತ್ಪನ್ನಗಳ ರಫ್ತಿಗೆ ಕೈಗಾರಿಕೋದ್ಯಮಿಗಳ ಉತ್ಸಾಹ

ಮೈಸೂರು,ಜ.21(ಆರ್‌ಕೆ)–ಕೈಗಾರಿಕಾ ವಲಯವನ್ನು ಅಭಿವೃದ್ಧಿಪಡಿಸಿ, ಮೈಸೂರನ್ನು ಪ್ರಮುಖ ರಫ್ತು ಕೇಂದ್ರ (Export Hub)ವನ್ನಾಗಿಸಲು ಕೈಗಾರಿಕೋದ್ಯಮಿಗಳು ಮುಂದಾಗಿದ್ದಾರೆ.

ಭಾರತ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಾಲಯ, ಜಿಲ್ಲಾ ಕೈಗಾರಿಕಾ ಕೇಂದ್ರ (DIC), ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (MCCI) ಹಾಗೂ ದಿ ಫೆಡರೇಷನ್ ಆಫ್ ಇಂಡಿಯನ್ ಎಕ್ಸ್‌ಪೋರ್ಟ್ ಆರ್ಗನೈಸೇಷನ್ಸ್ (FIEO) ಜಂಟಿ ಆಶ್ರಯದೊಂದಿಗೆ ಮೈಸೂರಿನ ಪೈವಿಸ್ಟಾ ಹೋಟೆಲ್‌ನಲ್ಲಿ ಆಯೋಜಿಸಿದ್ದ 'ಎಕ್ಸ್‌ಪೋರ್ಟ್ ಹಬ್' ಆಗಿ ಮೈಸೂರನ್ನು ಅಭಿವೃದ್ಧಿಪಡಿಸುವ ಸಂಬಂಧ ಗೋಷ್ಠಿಯಲ್ಲಿ ಹಲವು ಕೈಗಾರಿಕೋದ್ಯಮಿಗಳು ಶುಕ್ರವಾರ ಸುದೀರ್ಘ ಚರ್ಚೆ ನಡೆಸಿದರು.

ಮೈಸೂರು ಜಿಲ್ಲೆಯನ್ನು ರಫ್ತು ಕೇಂದ್ರವಾಗಿ ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರವು ಆಸಕ್ತಿ ವಹಿಸಿರುವುದರಿಂದ ರಫ್ತು ಉತ್ತೇಜನ, ಉತ್ಪಾದನೆ ಹಾಗೂ ಉದ್ಯೋಗ ಸೃಷ್ಟಿಸುವ ಉದ್ದೇಶದಿಂದ ಕೈಗಾರಿಕೆಗಳ ಪುನಶ್ಚೇತನಕ್ಕೆ ಒತ್ತು ನೀಡಿದೆ. ಜಿಎಸ್‌ಟಿಯಂತಹ ಹಲವು ಅಡೆತಡೆಗಳನ್ನು ನಿವಾರಿಸಿ ರಫ್ತು ಉತ್ಪನ್ನಗಳಿಗೆ ಆದ್ಯತೆ ನೀಡಬೇಕೆಂಬ ಅಭಿಪ್ರಾಯ ಗೋಷ್ಠಿಯಲ್ಲಿ ವ್ಯಕ್ತವಾಗಿದೆ. ಮೈಸೂರಿನ ಭೌಗೋಳಿಕ ವಿಶೇಷಗಳಾದ ಮೈಸೂರು ಸಿಲ್ಕ್, ಕರಕುಶಲ ವಸ್ತುಗಳು, ಮೈಸೂರು ಪಾಕ್, ಗಂಧದೆಣ್ಣೆ ಸ್ಯಾಂಡಲ್ ಸಾಬೂನುಗಳಂತಹ ಸಾಂಪ್ರದಾಯಿಕ ವಸ್ತುಗಳನ್ನು ರಫ್ತು ಮಾಡುವ ಬಗ್ಗೆಯೂ ಗೋಷ್ಠಿಯಲ್ಲಿ ತೀವ್ರ ಚರ್ಚೆಯಾಯಿತು. ಗ್ರಾಮೀಣ ಪ್ರದೇಶದಲ್ಲಿನ ಉತ್ಪನ್ನಗಳನ್ನು ವಿಶ್ವದಾದ್ಯಂತ ಪರಿಚಯಿಸಲು ರಫ್ತು ಉದ್ಯಮಗಳನ್ನು ಪ್ರೋತ್ಸಾಹಿಸಬೇಕೆಂದು ಕೈಗಾರಿಕಾ ಪರಿಣಿತರು ಅಭಿಪ್ರಾಯಪಟ್ಟರು.



ಮೈಸೂರಿನ ಪೈವಿಸ್ಟಾ ಹೋಟೆಲ್‌ನಲ್ಲಿ ಶುಕ್ರವಾರ ಆಯೋಜಿಸಿದ್ದ 'ಮೈಸೂರನ್ನು ಎಕ್ಸ್‌ಪೋರ್ಟ್ ಹಬ್' ಆಗಿ ಪರಿವರ್ತಿಸುವ ಸಂಬಂಧಿತ ಗೋಷ್ಠಿಯಲ್ಲಿ ಎಕ್ಸ್‌ಪೋರ್ಟ್ ಪ್ರೊಮೋಷನ್ ಸೆಲ್ ಮೈಸೂರು ಕಸ್ಟಮ್ಸ್ ಅಸಿಸ್ಟೆಂಟ್ ಕಮಿಷ್ನರ್ ಜಿ.ಶ್ರೀನಾಥ್ ಮಾತನಾಡಿದರು.

'ಆತ್ಮ ನಿರ್ಭರ' ಮಿಷನ್ ಮೂಲಕ ಗ್ರಾಮೀಣ ಭಾಗದ ಉತ್ಪನ್ನಗಳಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾರುಕಟ್ಟೆ ಕಲ್ಪಿಸಲು ಕೇಂದ್ರ ಸರ್ಕಾರ ಮುಂದಾಗಿರುವುದರಿಂದ ಅಲ್ಲಿನ ಆರ್ಥಿಕ ಹಾಗೂ ಕೈಗಾರಿಕಾ ಬೆಳವಣಿಗೆಗೆ ಸಹಕಾರ ನೀಡಬೇಕೆಂದು ಗೋಷ್ಠಿಯಲ್ಲಿ ಪಾಲ್ಗೊಂಡಿದ್ದ ಕೈಗಾರಿಕೋದ್ಯಮಿಗಳು ಅಭಿಪ್ರಾಯಪಟ್ಟರು.

ವ್ಯಾಪಾರ ಮತ್ತು ರಫ್ತು ಉತ್ತೇಜನ ಹೆಚ್ಚಿಸಿ ಉತ್ಪಾದನಾ ಚಟುವಟಿಕೆ, ಗೂಡ್ಸ್ ಅಂಡ್ ಸರ್ವೀಸ್ ಎಕ್ಸ್‌ಪೋರ್ಟ್ಸ್, ಎಂಎಸ್‌ಎಂಇ ಪ್ರೋತ್ಸಾಹ, ಸ್ಥಳೀಯ ಕಲೆ, ಮೈಸೂರಿನ ಭೌಗೋಳಿಕ ವಿಶೇಷತೆಗಳನ್ನು ವಿದೇಶಗಳಿಗೆ ಪರಿಚಯಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ ಎಂಬುದೂ ಕಾರ್ಯಕ್ರಮದಲ್ಲಿ ಚರ್ಚೆಯಾಯಿತು. ಮೈಸೂರು ಅಗರ್‌ಬತ್ತಿ, ಮೈಸೂರು ಸಿಲ್ಕ್, ಮೈಸೂರು ರೋಸ್‌ವುಡ್ ಇನ್‌ಲೇ, ಮೈಸೂರು ಗಂಧದೆಣ್ಣೆ, ಮೈಸೂರು ಸ್ಯಾಂಡಲ್ ಸೋಪ್, ಮೈಸೂರು ಸಾಂಪ್ರದಾಯಿಕ ಬಣ್ಣಗಳಂತಹ ಸಾಂಸ್ಕೃತಿಕ ನಗರಿಯ ಉತ್ಪನ್ನಗಳನ್ನು ಇ–ಕಾಮರ್ಸ್ ಮೂಲಕ ರಫ್ತು ಮಾಡಲಾಗುತ್ತಿದೆ ಎಂದು ಫೆಡರೇಷನ್ ಆಫ್ ಇಂಡಿಯನ್ ಎಕ್ಸ್‌ಪೋರ್ಟ್ ಆರ್ಗನೈಸೇಷನ್ಸ್‌ನ ಜಂಟಿ ನಿರ್ದೇಶಕಿ ಹಾಗೂ ಕರ್ನಾಟಕ ಮುಖ್ಯಸ್ಥೆ ಸೋಮಾ ಚೌಧುರಿ ತಿಳಿಸಿದರು.

ರಫ್ತಿಗೆ ಮೈಸೂರು ಜಿಲ್ಲೆ ಪ್ರಶಸ್ತವಾಗಿದೆಯಾದರೂ, ಮೂಲ ಸೌಕರ್ಯ, ಲಾಜಿಸ್ಟಿಕ್ಸ್, ಕಾರ್ಮಿಕರುಗಳಂತಹ ಹಲವು ಸವಾಲುಗಳೂ ಇವೆ. ಅವುಗಳನ್ನು ಎದುರಿಸಿದ್ದೇ ಆದರೆ, ರಫ್ತು ಉದ್ಯಮವನ್ನು ಇಲ್ಲಿ ಅಭಿವೃದ್ಧಿಪಡಿಸುವ ಸಾಧ್ಯತೆಗಳು ನಿಚ್ಚಳವಾಗಿವೆ ಎಂದರು.

2021–22ಕ್ಕೆ ಹೋಲಿಸಿದರೆ ಕರ್ನಾಟಕದಲ್ಲಿ 2022–23ನೇ ಸಾಲಿನಲ್ಲಿ ಸೇವಾ ರಫ್ತುಗಳಾದ ಪೆಟ್ರೋಲಿಯಂ, ಏರೋಸ್ಪೇಸ್, ಜೆಮ್ ಮತ್ತು ಜುವೆಲರಿ, ಕಾಫಿ ಆಗ್ರೋ ಆಹಾರಗಳು, ಬೀಜ ಉತ್ಪನ್ನಗಳಲ್ಲಿ ಗುಜರಾತ್, ಮಹಾರಾಷ್ಟ್ರ ಮತ್ತು ತಮಿಳುನಾಡು ನಂತರ ಕರ್ನಾಟಕ ರಾಜ್ಯವು ದೇಶದಲ್ಲಿ ನಾಲ್ಕನೇ ಸ್ಥಾನದಲ್ಲಿದೆ ಎಂದು ನುಡಿದರು.

ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಗೌರವ ಕಾರ್ಯದರ್ಶಿ ಎ.ಕೆ.ಶಿವಾಜಿ ರಾವ್ ಮಾತನಾಡಿ, ರಫ್ತು ಉದ್ಯಮ ಉತ್ತೇಜಿಸುವ ಸಲುವಾಗಿ ಚೇಂಬರ್ ವತಿಯಿಂದ ವಿಚಾರ ಸಂಕಿರಣ, ಕಾರ್ಯಾಗಾರಗಳಂತಹ ಕಾರ್ಯಕ್ರಮಗಳನ್ನು ಆಯೋಜಿಸಿ ಕೈಗಾರಿಕೋದ್ಯಮಿಗಳಿಗೆ ಜಾಗೃತಿ ಮೂಡಿಸುತ್ತಿದೆ ಎಂದು ಹೇಳಿದರು.

ವಿದೇಶ ವ್ಯಾಪಾರದ ಡೈರೆಕ್ಟೊರೇಟ್ ಜನರಲ್ ಹೆಚ್.ಡಿ.ಲೋಕೇಶ್, ಎಂಸಿಸಿಐ ಅಧ್ಯಕ್ಷ ಕೆ.ಬಿ.ಲಿಂಗರಾಜು, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಟಿ.ದಿನೇಶ್, ಎಕ್ಸ್‌ಪೋರ್ಟ್ ಪ್ರಮೋಷನ್ ಸೆಲ್, ಮೈಸೂರು ಕ್ಲಸ್ಟರನ್ ಅಸಿಸ್ಟೆಂಟ್ ಕಮಿಷ್ನರ್ ಜಿ.ಶ್ರೀನಾಥ್, ವಾಣಿಜ್ಯ ತೆರಿಗೆ ಜಂಟಿ ಆಯುಕ್ತ ಡಿ.ಕಂಬಣ್ಣ, ಲೀಡ್ ಬ್ಯಾಂಕ್ ಮ್ಯಾನೇಜರ್ ಪಿ.ದಿನೇಶ್, ಇಂಡಿಯನ್ ಎಂಟರ್‌ಪ್ರೈಸಸ್ ಡೆವಲಪ್‌ಮೆಂಟ್ ಸರ್ವೀಸ್ ಉಪ ನಿರ್ದೇಶಕ ಗೋಪಿನಾಥ್ ರಾವ್, ವಾಣಿಜ್ಯ ತೆರಿಗೆ ಉಪ ಆಯುಕ್ತ ರಮೇಶ್ ನರಸಯ್ಯ, ಎಸ್‌ಬಿಐ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಎಸ್.ಎಂ.ಮಾತಾಡ್, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಸೇರಿದಂತೆ ಹಲವರು ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಸ್ಯಾಂಟ್ರೋ ರವಿ ಪ್ರಕರಣ ಮುಚ್ಚಿ ಹಾಕಲು ಯತ್ನ

●ವಿಪಕ್ಷ ನಾಯಕ ಸಿದ್ದರಾಮಯ್ಯ ಅನುಮಾನ ●ಪೊಲೀಸ್ ಕಸ್ಟಡಿಗೆ ಪಡೆಯದೇ ಇರುವುದೇ ಇದಕ್ಕೆ ಸಾಕ್ಷಿ



ಮೈಸೂರು, ಜ.21 (ಎಂಟಿವೈ)– ನಟೋರಿಯಸ್ ಕ್ರಿಮಿನಲ್ ಆಗಿರುವ ಸ್ಯಾಂಟ್ರೋ ರವಿಯನ್ನು ಕಸ್ಟಡಿಗೆ ತೆಗೆದುಕೊಳ್ಳದಿರುವುದು, ಆತನ ರಕ್ಷಣೆಗೆ ಮಾಡುತ್ತಿರುವ ತಂತ್ರವನ್ನು ತೋರ್ಪಡಿಸುತ್ತದೆ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಇಂದಿಲ್ಲಿ ಕಿಡಿಕಾರಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸ್ಯಾಂಟ್ರೋ ರವಿ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸುವ ಮೂಲಕ ಮುಚ್ಚಿ ಹಾಕುವ ಪ್ರಯತ್ನ ನಡೆಯುತ್ತಿದೆ. ಈ ಪ್ರಕರಣದಲ್ಲಿ ಸರಿಯಾಗಿ ವಿಚಾರಣೆ ನಡೆಸಿದರೆ ಬಿಜೆಪಿಯವರ ನಿಜ ಬಣ್ಣ ಬಯಲಾಗುತ್ತದೆ. ಸ್ಯಾಂಟ್ರೋ ರವಿಯನ್ನು ಸರ್ಕಾರ ರಕ್ಷಣೆ ಮಾಡುತ್ತಿದೆ. ಈತ ಒಬ್ಬ ಕುಖ್ಯಾತ ಕ್ರಿಮಿನಲ್. ಅತ್ಯಾಚಾರ ಪ್ರಕರಣದಲ್ಲಿ ಭಾಗಿಯಾಗಿದ್ದಾನೆ. ಪಿಂಪ್ ಆಗಿ ಕೆಲಸ ಮಾಡಿದ್ದಾನೆ. ವರ್ಗಾವಣೆ ದಂಧೆ ನಡೆಸಿದ್ದಾನೆ. ಆತನ ವಿರುದ್ಧ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ಇಷ್ಟೆಲ್ಲಾ ಇದ್ದರೂ ಆತನನ್ನು ಪೊಲೀಸ್ ಕಸ್ಟಡಿಗೆ ಪಡೆದು ವಿಚಾರಣೆ ಯಾಕೆ ಮಾಡಿಲ್ಲ ಎಂದು ಪ್ರಶ್ನಿಸಿದರು.

ಎಲ್ಲಾ ಪ್ರಕರಣದಲ್ಲೂ ಆರೋಪಿಗಳನ್ನು ಕಸ್ಟಡಿಗೆ ತೆಗೆದುಕೊಳ್ಳುತ್ತಾರೆ. ಈ ಕೇಸ್‌ನಲ್ಲಿ ಯಾಕೆ ಪಡೆಯಲಿಲ್ಲ. ನ್ಯಾಯಾಧೀಶರ ಮನೆಯಲ್ಲಿ ಹಾಜರುಪಡಿಸಲಾಗಿದೆ. ಅದಕ್ಕಾಗಿ ಕಸ್ಟಡಿಗೆ ತೆಗೆದುಕೊಳ್ಳಲು ಸಾಧ್ಯವಾಗಿಲ್ಲ ಎಂದು ಸರ್ಕಾರ ಸುಳ್ಳು ಹೇಳಿ ಜನರನ್ನು ದಿಕ್ಕು ತಪ್ಪಿಸುತ್ತಿದೆ. ನ್ಯಾಯಾಧೀಶರ ಮನೆಯಲ್ಲಾದರೂ ಸರಿ, ನ್ಯಾಯಾಲಯದಲ್ಲಾದರೂ ಸರಿ ಆರೋಪಿಯನ್ನು ಹಾಜರುಪಡಿಸಿದಾಗ ಒಂದೇ ರೀತಿಯ ಕಾನೂನು ಅನ್ವಯಿಸುತ್ತದೆ. ಉದ್ದೇಶಪೂರ್ವಕವಾಗಿಯೇ ಕಸ್ಟಡಿಗೆ ತೆಗೆದುಕೊಂಡಿಲ್ಲ. ಈ ಪ್ರಕರಣದಲ್ಲಿ ಸರ್ಕಾರ ನೇರವಾಗಿ ಹಸ್ತಕ್ಷೇಪ ಮಾಡಿ, ಮುಜುಗರ ತಪ್ಪಿಸಿಕೊಳ್ಳಲು ತಂತ್ರಗಾರಿಕೆ ರೂಪಿಸಿದೆ. ಈ ಸಂಚು ಜನಸಾಮಾನ್ಯರಿಗೂ ಅರ್ಥವಾಗುತ್ತದೆ ಎಂದು ಸಿದ್ದರಾಮಯ್ಯ ಹೇಳಿದರು.

ನಾನೂ ಕೂಡ ಲಾಯರ್ ಆಗಿ ಕೆಲಸ ಮಾಡಿದ್ದವನೇ. ಬೇಲ್ ಅಪ್ಲಿಕೇಷನ್ ಹೇಗೆ ಹಾಕಬೇಕು. ಕಸ್ಟಡಿಗೆ ಪಡೆಯಲು ಏನು ಮಾಡಬೇಕು ಎಂದು ಬಲ್ಲವನಾಗಿದ್ದೇನೆ. ವಕೀಲರಿಗೆ ಸಂಪೂರ್ಣ ಮಾಹಿತಿ ಇರುತ್ತದೆ. ನಟೋರಿಯಸ್ ಕ್ರಿಮಿನಲ್ ಅಪರಾಧ ಮಾಡಿರುವ ವ್ಯಕ್ತಿಯನ್ನು ರಕ್ಷಣೆ ಮಾಡಲು ಮುಂದಾಗಿರುವುದು ತಲೆ ತಗ್ಗಿಸುವ ಸಂಗತಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಿಐಡಿ ಸ್ವತಂತ್ರ ಸಂಸ್ಥೆಯಲ್ಲ: ಸಿಐಡಿ ಸ್ವತಂತ್ರ ಸಂಸ್ಥೆಯಲ್ಲ. ಅದು ಕ್ರೈಂಗೆ ಸಂಬಂಧಿಸಿದ ಒಂದು ವಿಭಾಗ. ಇದು ರಾಜ್ಯ ಸರ್ಕಾರದ ಅಧೀನದಲ್ಲಿರುವ ಸಂಸ್ಥೆ. ಇವರು ಸರ್ಕಾರದ ಕೈಗೊಂಬೆಗಳಾಗಿ ಕೆಲಸ ಮಾಡುತ್ತಾರೆ. ಹಾಗಾಗಿ ಸ್ಯಾಂಟ್ರೋ ರವಿ ಪ್ರಕರಣವನ್ನು ಸರ್ಕಾರ ಸಿಐಡಿಗೆ ವಹಿಸಿ, ತಮ್ಮಿಷ್ಟಕ್ಕೆ ಅನುಗುಣವಾಗಿ ಕಥೆಕಟ್ಟಿ ಮುಚ್ಚಿ ಹಾಕುತ್ತಾರೆ ಎಂದರು.

ಜ.25ರಂದು ಪಿಸಿ, ಪಿಎಸ್‌ಐ ಪರೀಕ್ಷಾ ಉಚಿತ ತರಬೇತಿ ಶಿಬಿರಾರ್ಥಿಗಳಿಗೆ ಶುಭ ಹಾರೈಕೆ

ಮೈಸೂರು, ಜ.21– ಜ್ಞಾನಬುತ್ತಿ ಸಂಸ್ಥೆಯ ವತಿಯಿಂದ ಲಕ್ಷ್ಮೀಪುರಂ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜಿನ ಆವರಣದಲ್ಲಿರುವ ಜ್ಞಾನಬುತ್ತಿ ಸಂಸ್ಥೆಯಲ್ಲಿ ಜನವರಿ 25ರಂದು ಪಿಸಿ ಮತ್ತು ಪಿಎಸ್‌ಐ ಪರೀಕ್ಷಾ ಉಚಿತ ತರಬೇತಿ ಶಿಬಿರಾರ್ಥಿಗಳಿಗೆ ಶುಭ ಹಾರೈಕೆ ಕಾರ್ಯಕ್ರಮವನ್ನು ಮೈಸೂರು ಮಹಾನಗರಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ ಅವರು ಉದ್ಘಾಟಿಸುವರು.



ಲಕ್ಷ್ಮೀಕಾಂತ ರೆಡ್ಡಿ



ಗೀತಾ ಪ್ರಸನ್ನ

ಇದೇ ಸಂದರ್ಭದಲ್ಲಿ ಸಂಸ್ಥೆ ಹೊರ ತಂದಿರುವ ಪಿಸಿ ಮತ್ತು ಪಿಎಸ್‌ಐ ಅಧ್ಯಯನ ಪುಸ್ತಕವನ್ನು ಮೈಸೂರು ನಗರ ಪೊಲೀಸ್ ಉಪ ಆಯುಕ್ತೆ ಐಪಿಎಸ್ ಅಧಿಕಾರಿ ಗೀತಾ ಪ್ರಸನ್ನ ಬಿಡುಗಡೆ ಮಾಡುವರು. ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಗಳಾಗಿ ಮೈಸೂರು ವಿಭಾಗದ ಹೆಚ್ಚುವರಿ ಪ್ರಾದೇಶಿಕ ಆಯುಕ್ತ ಪಿ.ಶಿವರಾಜು ಜ್ಞಾನಬುತ್ತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ವಿಭಾಗದ ಅಧ್ಯಕ್ಷರು, ಜಿಲ್ಲಾಧಿಕಾರಿ ಕಚೇರಿಯ ಯೋಜನಾ ನಿರ್ದೇಶಕ ಆಶಾದ್ ರೆಹಮಾನ್ ಶರೀಫ್, ಡಾ.ಎಸ್.ನಾಗಾಚಾರಿ, ಡಾ.ಉಮೇಶ್ ಬೇವಿನಹಳ್ಳಿ, ಡಾ. ಪಳನಿಸ್ವಾಮಿ ಮೂಡಗೂರು, ಹಾಲಪ್ಪ, ಪ್ರೊ.ಹೊನ್ನಯ್ಯ, ಪ್ರೊ.ವಿ.ಜಯಪ್ರಕಾಶ್, ಎಸ್.ಗಣೇಶ್, ಪ್ರೊ. ಸಿ.ಕೆ.ಕಿರಣ್‌ಕೌಶಿಕ್, ಡಾ. ಈ.ಶಿವಪ್ರಸಾದ್, ರೋಹನ್ ರವಿಕುಮಾರ್, ವಿಭಾವಸು, ಯು.ಎಂ.ಶರದ್‌ರಾವ್, ವೈ.ಎನ್.ರಾಜೇಶ್ ಭಾಗವಹಿಸುವರು ಎಂದು ಜ್ಞಾನಬುತ್ತಿ ಕಾರ್ಯದರ್ಶಿ ಹೆಚ್.ಬಾಲಕೃಷ್ಣ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜ.27ರಂದು ಸಮಾಲೋಚನಾ ಸಭೆ

ಮೈಸೂರು,ಜ.21–ಹೂಟಗಳ್ಳಿ ನಗರಸಭೆಯ 2023–24ನೇ ಸಾಲಿನ ಆಯವ್ಯಯ ತಯಾರಿಸುವ ಸಂಬಂಧ ಜ.27ರಂದು ಮಧ್ಯಾಹ್ನ 3 ಗಂಟೆಗೆ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹೂಟಗಳ್ಳಿ ನಗರಸಭೆ ಕಚೇರಿಯ ಆವರಣದಲ್ಲಿ ಎರಡನೇ ಸುತ್ತಿನ ಸಾರ್ವಜನಿಕ ಸಮಾಲೋಚನೆ ಸಭೆಯನ್ನು ನಿಗದಿಪಡಿಸಲಾಗಿದೆ. ಸದರಿ ಸಭೆಗೆ ಹೂಟಗಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಬರುವ ಹಿರಿಯ ನಾಗರಿಕರು, ಸಂಘ ಸಂಸ್ಥೆಗಳು, ವ್ಯಾಪಾರಸ್ಥರು, ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಆಸಕ್ತ ಸಾರ್ವಜನಿಕರು ಸಭೆಗೆ ಆಗಮಿಸಿ ಆಯವ್ಯಯ ಸಂಬಂಧ ಸಲಹೆಗಳನ್ನು ನೀಡುವಂತೆ ಪೌರಾಯುಕ್ತರು ಕೋರಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಸಮರ್ಪಣಾ ಶ್ರೀಮತಿ ರಾಧಮ್ಮ ಸ್ಮಾರಕ ಟ್ರಸ್ಟ್:** 10ನೇ ವರ್ಷದ ರಾಜ್ಯ ಮಟ್ಟದ ಸಮರ್ಪಣಾ ಗಾಯನ ಸ್ಪರ್ಧೆ, ಉದ್ಘಾಟನೆ: ವೀಣಾವಾದಕ ಡಾ.ಸುಚೇತನ್ ರಂಗಸ್ವಾಮಿ, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್, ನಗರಪಾಲಿಕೆ ಸದಸ್ಯೆ ಎಂ.ಲಕ್ಷ್ಮಿ ಕಿರಣ್ ಮಾದೇಗೌಡ, ಶ್ರೀ ಶಾರದಾ ಪಬ್ಲಿಕ್ ಸ್ಕೂಲ್ ಕಾರ್ಯದರ್ಶಿ ಮಂಜುನಾಥ್ ಶ್ರೀವತ್ಸ, ಸಮರ್ಪಣಾ ಅಧ್ಯಕ್ಷ ಎನ್.ವಿ.ಫಣೀಶ್, ಸ್ಥಳ: ಶ್ರೀ ಶಾರದಾ ಪಬ್ಲಿಕ್ ಶಾಲೆ, ಆರ್.ಟಿ.ನಗರ, ಬೆಳಗ್ಗೆ 9.30ಕ್ಕೆ.

■ **ಸಮರ್ಥ ಸಾಹಿತ್ಯ–ಸಾಂಸ್ಕೃತಿಕ ಪ್ರತಿಷ್ಠಾನ, ವಾಸವಿ ಯುವಜನ ಸಂಘ:** ಹಿರಿಯ ರಂಗಕರ್ಮಿ ಡಿ.ವಿ.ಎಸ್.ಗುಪ್ತಾ ಅವರ ನೇತೃತ್ವದಲ್ಲಿ ಸಾಂಸ್ಕೃತಿಕ ವೈಭವ, ಬೆಳಗ್ಗೆ 9.30ಕ್ಕೆ ಉದ್ಘಾಟನೆ: ಪ್ರಾಥಮಿಕ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಶುಭ ನುಡಿ: ಹಿರಿಯ ರಂಗಕರ್ಮಿ ಡಿ.ವಿ.ಎಸ್.ಗುಪ್ತಾ, ಮುಖ್ಯ ಅತಿಥಿಗಳು: ಶಾಸಕ ಎಲ್.ನಾಗೇಂದ್ರ, ವನ್ಯಜೀವಿ ಛಾಯಾಗ್ರಾಹಕ ತಿಪ್ಪೇಸ್ವಾಮಿ, ಸಂಜೆ 5ಕ್ಕೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ಶಾಸಕ ಹೆಚ್.ಪಿ.ಮಂಜುನಾಥ್, ಉದ್ಯಮಿ ಆರ್.ಎಲ್.ರಮೇಶ್ ಬಾಬು, ವಿನೋದಾ ವರದರಾಜ್, ಡಾ.ಆರ್.ಎಸ್.ರಾಜೇಶ್, ಸ್ಥಳ: ಕಲಾಮಂದಿರ.

■ **ಗಾನಭಾರತೀ :** ಭಕ್ತಿ ಸಂಗೀತೋತ್ಸವ ಮತ್ತು ಪುರಂದರ–ತ್ಯಾಗರಾಜರ ಗೋಷ್ಠಿ ಗಾಯನ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10ರಿಂದ.

■ **ಶ್ರೀ ಪತ್ಯಾಂಗೀರಾ ಭಗವತಿ ಯೋಗೇಶ್ವರಿ ದೇವಸ್ಥಾನ :** ವಾರ್ಷಿಕ ಕೋಲ ಉತ್ಸವ, ಬೆಳಗ್ಗೆ 2ಕ್ಕೆ ಸ್ಮಶಾನಕಾಳಿ ತೆರ, 4ಕ್ಕೆ ನಾಗಕಾಳಿ ತೆರ, 5ಕ್ಕೆ ಕುಟ್ಟಿಚಾತ್ತನ್ ತೆರ, 6ಕ್ಕೆ ಗುಳಿಕನ್ ತೆರ, 8ಕ್ಕೆ ಭಗವತಿ ತೆರ, ಬೆಳಗ್ಗೆ 10ಕ್ಕೆ ಗುರಥಿ, ಸ್ಥಳ: ದೇವಸ್ಥಾನ, ಗದ್ದಿಗೆ ರಸ್ತೆ.

■ **ಕಲಾಧಾರೆ ಕಲ್ಚರಲ್ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆ, ನೃತ್ಯ, ಸಂಗೀತ (ಹಾಡುಗಾರಿಕೆ), ಚಿತ್ರಕಲೆ, ನಾಟಕ (ಏಕಪಾತ್ರಾಭಿನಯ), ವೇಷಭೂಷಣ ಸ್ಪರ್ಧೆ, ಸ್ಥಳ: ರಮಾಗೋವಿಂದ ಕಲಾಮಂದಿರ, ನೃಪತುಂಗ ಶಾಲೆ ಸಮೀಪ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.


■ **ಮೈಸೂರು ಲಿಟರರಿ ಅಸೋಸಿಯೇಷನ್ :** ಮೈಸೂರು ಸಾಹಿತ್ಯ ಹಬ್ಬ, ಉದ್ಘಾಟನೆ : ಉದ್ಯಮಿ ಕ್ಯಾಪ್ಟನ್ ಜಿ.ಆರ್. ಗೋಪಿನಾಥ್, ಅಧ್ಯಕ್ಷತೆ : ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ. ಕೆ.ಸಿ.ಬೆಳ್ಳಿಯಪ್ಪ ವಿಚಾರ ಮಂಡನೆ : ಡಾ. ದೀಪ್ತಿ ನವರತ್ನ, ಪ್ರಕಾಶ್ ಬೆಳವಾಡಿ, ಪ್ರೊ ಹೆಚ್.ಎಸ್. ಶಿವಪ್ರಕಾಶ್, ಅಭಿಮನ್ಯು ಆಚಾರ್ಯ, ಸ್ಥಳ : ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಬೆಳಗ್ಗೆ 10ಕ್ಕೆ

■ **ಮೈಸೂರು ಜಿಲ್ಲಾ ಗಮಕ ಕಲಾ ಪರಿಷತ್ತು :** ಕಾವ್ಯ ವ್ಯಾಸಂಗ ಗೋಷ್ಠಿ–34, ಕಾವ್ಯ : ಪು.ತಿ.ನ. ಅವರ 'ಶ್ರೀಹರಿಚರಿತೆ', ಕಾವ್ಯವಾಚನ: ಲಕ್ಷ್ಮೀ ಕೇಶವ ಮತ್ತೂರು, ವ್ಯಾಖ್ಯಾನ : ವಿದ್ವಾನ್ ನಾರಾಯಣ ದೇಸಾಯಿ, ಸ್ಥಳ: 1315/2, ಹರಿಪ್ರಿಯ 3ನೇ ಅಡ್ಡ ರಸ್ತೆ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ರಾಮಕೃಷ್ಣ ಆಶ್ರಮ:** ವಿವೇಕಾನಂದ ಸೇವಾ ಕೇಂದ್ರ ಉದ್ಘಾಟನೆ, ಫಲಕ ಅನಾವರಣ, ಸ್ಥಳ: 996, 2ನೇ ಮೇನ್, ವಿದ್ಯಾರಣ್ಯಪುರಂ, ಬೆಳಗ್ಗೆ 10.30ಕ್ಕೆ

■ **ರಾಜು ಕ್ಷತ್ರಿಯ ಟ್ರಸ್ಟ್:** 86ನೇ ವಜ್ರ ಮಹೋತ್ಸವ ಕಾರ್ಯಕ್ರಮ, ಅಧ್ಯಕ್ಷತೆ: ಟ್ರಸ್ಟ್ ಅಧ್ಯಕ್ಷ ಎಂ.ಎನ್.ನಾಗರಾಜು, ಉದ್ಘಾಟನೆ: ನ್ಯಾಯವಾದಿ ಸಿ.ಭೀಮರಾಜು, ಸ್ಮರಣ ಸಂಚಿಕೆ ಬಿಡುಗಡೆ: ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್, ಮುಖ್ಯ ಅತಿಥಿಗಳು: ಹಿರಿಯ ನ್ಯಾಯವಾದಿ ಡಾ.ಆರ್.ಡಿ.ಕುಮಾರ್, ಆರ್‌ಕೆಎಸ್‌ಎಸ್ ಅಧ್ಯಕ್ಷ ಎನ್.ಸತೀಶ್‌ರಾಜು, ಎಂ.ಆರ್.ಯತೀಂದ್ರರಾಜು, ಸ್ಥಳ: ರಾಜು ಕ್ಷತ್ರಿಯ ಟ್ರಸ್ಟ್ ಆವರಣ, ಬೆಳಗ್ಗೆ 10.30ಕ್ಕೆ

■ **ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, ಜಿಲ್ಲಾಡಳಿತ, ನೆಹರು ಯುವ ಕೇಂದ್ರ ಸಂಘಟನೆ, ಮೈಸೂರು ವಿಶ್ವವಿದ್ಯಾನಿಲಯ :** 14ನೇ ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮ, ಸ್ಥಳ: ಲಲಿತ ಕಲಾ ಕಾಲೇಜು ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.



ಇಂದಿನ ಪಂಚಾಂಗ

22.1.2023 ಭಾನುವಾರ, ಮಳೆ ನಕ್ಷತ್ರ: ಉತ್ತರಾಷಾಢ, 11.01.2022ರಿಂದ 23.01.2023 ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಉಷಾ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಶ್ರೀ ಯೋಗಿ ನಾರೇಯಣ ಬಣಜಿಗ ಸಂಘ:** ಡಾ.ಎಂ.ಎಸ್.ರಾಮಯ್ಯ ವಿದ್ಯಾರ್ಥಿನಿಯರ ವಸತಿ ನಿಲಯ ಉದ್ಘಾಟನೆ, ಪ್ರತಿಭಾ ಪುರಸ್ಕಾರ ಸಮಾರಂಭ, ಉದ್ಘಾಟನೆ: ಮಾಜಿ ಸಚಿವ ಎಂ.ಆರ್.ಸೀತಾರಾಮ್, ವಸತಿನಿಲಯ ಉದ್ಘಾಟನೆ: ಶೃತಿ ಸೀತಾರಾಮ್, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಂ.ನಾರಾಯಣ, ಮುಖ್ಯ ಅತಿಥಿಗಳು: ಜಗದೀಶ್‌ಬಾಬು, ಸೋಮಶೇಖರ್, ವೆಂಕಟೇಶ್ ಬಾಬು, ಶ್ರೀನಿವಾಸ ಶೆಟ್ಟಿ, ಪ್ರಾಸ್ತಾವಿಕ ನುಡಿ: ಮೈಲ್ಯಾಕ್ ಮಾಜಿ ಅಧ್ಯಕ್ಷ ಎಚ್.ಎ.ವೆಂಕಟೇಶ್, ಸ್ಥಳ: ವಿದ್ಯಾರ್ಥಿನಿಲಯದ ಆವರಣ, ಬೆಳಗ್ಗೆ 11ಕ್ಕೆ

■ **ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘ :** ಶ್ರೀ ಸಿದ್ದೇಶ್ವರ ಶ್ರೀಗಳಿಗೆ ನುಡಿನಮನ ಮತ್ತು ವಾರ್ಷಿಕ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಲ್. ರೇವಣ್ಣಸಿದ್ದಯ್ಯ, ನುಡಿನಮನ : ಬೆಂಗಳೂರು ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ. ಎಸ್. ಸಿದ್ದಪ್ಪ, ಮುಖ್ಯ ಅತಿಥಿಗಳು : ಡಾ.ಡಿ.ಬಿ. ನಟೇಶ್, ಸನ್ಮಾನಿತರು : ನಿವೃತ್ತ ಪ್ರಾಚಾರ್ಯರಾದ ಡಾ. ಬಿ.ಎಸ್. ಬಸವರಾಜಯ್ಯ, ಡಾ. ಎಂ. ನಂಜುಂಡಪ್ಪ, ಸ್ಥಳ: ಅಲ್ಲಮಪ್ರಭು ಸಭಾಂಗಣ (ಶಾಲೆಯ ಆವರಣ), ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ದೇಹದಾರ್ಢ್ಯ ಮತ್ತು ಫಿಟ್ನೆಸ್ ಸಂಸ್ಥೆ :** ಅಂತರ ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆ, ಸ್ಥಳ: ಪುರಭವನ, ಬೆಳಗ್ಗೆ 11ಕ್ಕೆ.

■ **ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಜಿಲ್ಲಾ ಪ್ರಾಣಿ ದಯಾ ಸಂಘ :** ಜಿಲ್ಲಾ ಸರ್ಕಾರಿ ಗೋಶಾಲೆ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು :ಪಶು ಸಂಗೋಪನೆ ಸಚಿವ ಪ್ರಭು ಬಿ. ಚವ್ಹಾಣ್, ಮುಖ್ಯ ಅತಿಥಿಗಳು : ಸಂಸದರಾದ ವಿ. ಶ್ರೀನಿವಾಸ್ ಪ್ರಸಾದ್, ಪ್ರತಾಪ್ ಸಿಂಹ, ಸುಮಲತಾ ಅಂಬರೀಷ್, ಸಚಿವ ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ : ಶಾಸಕ ಡಾ. ಯತೀಂದ್ರ, ಸ್ಥಳ: ಆಯರಹಳ್ಳಿ, ಬೆಳಗ್ಗೆ 11.30ಕ್ಕೆ.

■ **ಪಶು ಚಿಕಿತ್ಸಾಲಯ, ಸುತ್ತೂರು :** ಪಶು ಚಿಕಿತ್ಸಾಲಯ ಸುತ್ತೂರು, ನೂತನ ಕಟ್ಟಡ ಉದ್ಘಾಟನಾ ಕಾರ್ಯಕ್ರಮ, ಉಪಸ್ಥಿತರು: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಉದ್ಘಾಟನೆ: ಪಶು ಸಂಗೋಪನೆ ಸಚಿವ ಪ್ರಭು ಬಿ.ಚವ್ಹಾಣ್, ಅಧ್ಯಕ್ಷತೆ : ಶಾಸಕ ಡಾ.ಯತೀಂದ್ರ, ಮುಖ್ಯ ಅತಿಥಿಗಳು : ಸಂಸದ ವಿ.ಶ್ರೀನಿವಾಸಪ್ರಸಾದ್, ಶಾಸಕರಾದ ಹರ್ಷವರ್ಧನ್, ಮರಿತಿಬ್ಬೇಗೌಡ, ಡಾ.ಡಿ.ತಿಮ್ಮಯ್ಯ, ಹೆಚ್.ವಿಶ್ವನಾಥ್, ಮಧು ಜಿ.ಮಾದೇಗೌಡ, ಸಿ.ಎನ್.ಮಂಜೇಗೌಡ, ಸ್ಥಳ: ಸುತ್ತೂರು, ಮಧ್ಯಾಹ್ನ 3ಕ್ಕೆ.

■ **ಗಾನಲಹರಿ ಸಂಸ್ಥೆ :** ಸುಮಧುರ ಗೀತೆಗಳ ಚಿತ್ರಮಂಜರಿ ಕಾರ್ಯಕ್ರಮ, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 6 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇದಾನಂದ ಅವರಿಂದ ಸತ್ಯ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.


■ **ಚಿನ್ಮಯ ಮಿಷನ್:** ಜ್ಞಾನ ಯಜ್ಞದ ಅಂಗವಾಗಿ ಸ್ವಾಮೀಜಿಯವರಿಂದ ನಾರದ ಭಕ್ತಿಸೂತ್ರ ಕುರಿತು ಸಂಜೆ 6:30ರಿಂದ 8ರವರೆಗೆ ಕನ್ನಡದಲ್ಲಿ ಪ್ರವಚನ, ಸಂಜೆ 6 ರಿಂದ 6.30 ವರೆಗೆ ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ, ಸ್ಥಳ: ಚಿನ್ಮಯ ಮಿಷನ್ ಕೇಂದ್ರ ಶ್ರೀ ಗುರುದೇವ ದತ್ತ ಸನ್ನಿಧಿ, ಗೋಕುಲಂ.

■ **ನಟನ ರಂಗಶಾಲೆ :** ನಟನ ರೆಪರ್ಟರಿ ತಂಡದ ಕಲಾವಿದರಾದ ಮನೋಜ ಅವರ 'ತ್ರಿಪುರಾಣ' ನಾಟಕ ಪ್ರದರ್ಶನ, ನಿರ್ದೇಶನ : ಮೇಘ ಸಮೀರ, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಅಭಿಯಂತರರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು :** 30ನೇ ವಾರ್ಷಿಕೋತ್ಸವ ಸಂಭ್ರಮದ ಅಂಗವಾಗಿ ರಾಷ್ಟ್ರೀಯ ರಂಗ ಉತ್ಸವ, ಬೆಂಗಳೂರಿನ ಅಭಿಜ್ಞಾ ತಂಡದಿಂದ ಚೋರ ಪುರಾಣ ನಾಟಕ ಪ್ರದರ್ಶನ, ರಚನೆ : ನಿಸರ್ಗ ಪ್ರಿಯ, ನಿರ್ದೇಶನ : ಮಂಜುನಾಥ್ ಎಲ್. ಬಡಿಗೇರ, ಸ್ಥಳ: ಕಿರುರಂಗ ಮಂದಿರ, ಸಂಜೆ 7ಕ್ಕೆ

ಸುತ್ತೂರು ಜಾತ್ರಾ ಮಹೋತ್ಸವ

ಕರ್ತೃ ಗದ್ದುಗೆಯಲ್ಲಿ ಪೂಜಾ ಉತ್ಸವ



ಬೆಳಗ್ಗೆ 4ಕ್ಕೆ ಮಹಾರುದ್ರಾಭಿಷೇಕ, ಫಲಾಲಂಕಾರ, ಮಹಾಮಂಗಳಾರತಿ, ಬೆಳ್ಳಿರಥ ಪ್ರಾಕಾರೋತ್ಸವ, ಬೆಳಗ್ಗೆ 6.30ಕ್ಕೆ ತುಮ್ಮನೇರಳೆ –ಸ್ನೇಹ ಸೌಹಾರ್ದ ಶಾಂತಿ ಪಥಸಂಚಲನ, ಷಟ್‌ಸ್ಥಳ ಧ್ವಜಾರೋಹಣ: ಬೇಬಿಬೆಟ್ಟದ ಶ್ರೀ ರಾಮಯೋಗೀಶ್ವರ ಮಠದ ಶ್ರೀ ಶಿವಬಸವ ಸ್ವಾಮಿಗಳು, ಧರ್ಮ ಸಂದೇಶ : ಶ್ರೀ ಗುರುಮಲ್ಲೇಶ್ವರ ಪಟ್ಟದ ಮಠದ ಶ್ರೀ ಬಸವಣ್ಣ ಸ್ವಾಮಿಗಳು, ಬೆಳಗ್ಗೆ 7ಕ್ಕೆ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 36ನೇ ಸಂಸ್ಮರಣೋತ್ಸವ, ಬೆಳಗ್ಗೆ 10ಕ್ಕೆ ಶ್ರೀ ಸೋಮೇಶ್ವರ ಮತ್ತು ಶ್ರೀ ಅಮೃತೇಶ್ವರಿ ಅಮ್ಮನವರಿಗೆ ರುದ್ರಾಭಿಷೇಕ (ಕಪಿಲಾ ನದಿ ತೀರ), ಬೆಳಗ್ಗೆ 11ಕ್ಕೆ ಗ್ರಾಮದೇವತೆಗಳಾದ ಶ್ರೀ ಸುತ್ತೂರಮ್ಮ ಹಾಗೂ ಶ್ರೀ ದೊಡ್ಡಮ್ಮತಾಯಿ ಉತ್ಸವ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ಸಂಜೆ 6ಕ್ಕೆ ಮಹಾರುದ್ರಾಭಿಷೇಕ, ಸಂಜೆ 6.30ಕ್ಕೆ ಶ್ರೀ ವೀರಭದ್ರೇಶ್ವರ ಕೊಂಡೋತ್ಸವ, ರಾತ್ರಿ 7.30ಕ್ಕೆ ಮಹಾಮಂಗಳಾರತಿ, ರಾತ್ರಿ 8.30ಕ್ಕೆ ತೆಪ್ಪೋತ್ಸವದ ಉತ್ಸವಮೂರ್ತಿಗೆ ರಾಜೋಪಚಾರ, ರಾತ್ರಿ 9ಕ್ಕೆ ತೆಪ್ಪೋತ್ಸವ, ಬಾಣ ಬಿರುಸುಗಳ ಪ್ರದರ್ಶನ.

ಭಜನಾ ಮೇಳ ಸಮಾರೋಪ (ಬೆಳಗ್ಗೆ 10.30ಕ್ಕೆ)

ಸಮ್ಮುಖ : ಶ್ರೀ ಗೋಸಾಯಿ ಮಹಾಸಂಸ್ಥಾನ ಮಠದ ಶ್ರೀ ಮಂಜುನಾಥ ಸ್ವಾಮಿಗಳು, ಶ್ರೀ ಕ್ಷೇತ್ರ ಆರಾತ್ರಿಪುರ ಜೈನ ಮಠದ ಶ್ರೀ ಸಿದ್ಧಾಂತಕೀರ್ತಿ ಭಟ್ಟಾರಕ ಸ್ವಾಮಿಗಳು, ಅಧ್ಯಕ್ಷತೆ: ವಸತಿ ಸಚಿವ ವಿ.ಸೋಮಣ್ಣ, ಸಮಾರೋಪ ಭಾಷಣ: ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಬಹುಮಾನ ವಿತರಣೆ: ಪೌರಾಡಳಿತ ಸಚಿವ ಎನ್. ನಾಗರಾಜು, ಪ್ರಾಥಮಿಕ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಕೈಮಗ್ಗ ಮತ್ತು ಜವಳಿ ಸಚಿವ ಶಂಕರ್ ಬಿ.ಪಾಟೀಲ್ ಮುನೇನಕೊಪ್ಪ, ಮಾಜಿ ಸಚಿವ ಆರ್.ವಿ. ದೇಶಪಾಂಡೆ, ಮುಖ್ಯ ಅತಿಥಿಗಳು ಶಾಸಕ ತನ್ವೀರ್ ಸೇಠ್, ಸಂಸದ ಪ್ರತಾಪ್ ಸಿಂಹ, ಚಾರ್ಟರ್ಡ್ ಸಿವಿಲ್ ಸಲಹೆಗಾರ ಸ್ವಪನ್ ಸರ್ಕಾರ್, ಜಗದೀಶ್ ಎಸ್. ಗುಡಗುಂಟಿ, ಸಮಾಜ ಸೇವಕರಾದ ಶ್ರೀಮತಿ ಅಶ್ವಿನಿ ಸಿದ್ದರಾಮಯ್ಯ.

ಕುಸ್ತಿ ಪಂದ್ಯಾವಳಿ (ಮಧ್ಯಾಹ್ನ 2ಕ್ಕೆ)

ಸಮ್ಮುಖ: ಶ್ರೀ ಆರ್ಯ ಈಡಿಗರ ಮಹಾಸಂಸ್ಥಾನ ಮಠದ ಶ್ರೀ ವಿಖ್ಯಾತಾನಂದ ಸ್ವಾಮಿಗಳು, ಶ್ರೀ ಮರಳೇಗವಿ ಮಠದ ಶ್ರೀ ಮುಮ್ಮಡಿ ಶಿವರುದ್ರ ಸ್ವಾಮಿಗಳು, ಅಧ್ಯಕ್ಷತೆ: ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಎ.ನಾರಾಯಣಸ್ವಾಮಿ, ಉದ್ಘಾಟನೆ: ಗೃಹ ಸಚಿವ ಆರಗ ಜ್ಞಾನೇಂದ್ರ, ಪ್ರಶಸ್ತಿ ವಿತರಣೆ: ಅಬಕಾರಿ ಸಚಿವ ಕೆ.ಗೋಪಾಲಯ್ಯ, ರೇಷ್ಮೆ ಮತ್ತು ಕ್ರೀಡಾ ಸಚಿವ ಡಾ.ಕೆ.ಸಿ.ನಾರಾಯಣಗೌಡ, ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಮುಖ್ಯ ಅತಿಥಿಗಳು: ಶಾಸಕರಾದ ಬಿ.ಹರ್ಷವರ್ಧನ್, ಡಾ.ಡಿ. ತಿಮ್ಮಯ್ಯ, ರಾಜನ್ ಸಿನ್ಹ ಚಾವ್ಡ, ಶ್ರೀ ಸುರೇಂದ್ರ ಸಿಂಗ್ ತೋಮರೆ, ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ, ಚಾಮುಲ್ ಅಧ್ಯಕ್ಷ ವೈ.ಸಿ.ನಾಗೇಂದ್ರ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಋಷಿ ಮನೀಷಿಗಳು, ಲೇಖನ ದಾ. ಶ್ರೀರಾಮ್‌ಭಟ್, ಪ್ರಸ್ತುತಿ–ದಿವಾಕರ ಹೆಗಡೆ, 6.40 ಹಾಡು ಹೇಳಿದ ಕಥೆ, ಲೇಖನ ಶ್ರೀನಿವಾಸ್‌ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 10.00 ಎಂ.ಡಿ.ಸುಮತಿ ಮುರಾರಿ–ಹಾಡುಗಾರಿಕೆ **ಮಧ್ಯಾಹ್ನ:** 12.30 ದೇವರನಾಮ–ಎಂ..ಎಸ್. ಶೀಲ, ನರಸಿಂಹನಾಯಕ್, 12.45 ಜನಪದ ಸಂಗೀತ–ನಿಂಗಶೆಟ್ಟಿ ಮತ್ತು ತಂಡ–ಸಿದ್ಧಾಪ್ಪಾಜಿ ಕಥೆ, 1.20 ಭಾವಗೀತೆ, 3.30 ಮಕ್ಕಳ ಮಂಟಪ–ನಂದಗೋಕುಲ, ಪ್ರಸ್ತುತಿ–ಕೆ.ಬಿ.ಮೀನಾ, 4.00 ನೆನಪಿನಂಗಳ–ವಿವಿಧ ಕ್ಷೇತ್ರಗಳಲ್ಲಿ ಸೇವೆಗೈದ ಬಿ.ಎಂ.ಶಿವರಾಮಯ್ಯ ಅವರೊಂದಿಗೆ ಹೂಗೊಪ್ಪಲು ಕೃಷ್ಣಮೂರ್ತಿ ನಡೆಸಿದ್ದ ಸಂವಾದ, 6.50ಕೃಷಿರಂಗ–"ತೋರಣ ಹೂರಣ", ಪ್ರಸ್ತುತಿ–ಎಸ್.ಸುಬ್ರಹ್ಮಣ್ಯ, 8.00 ಯುವವಾಣಿ, 9.15 ಶಿಲ್ಪಿ–ಅರುಣ್ ಯೋಗಿರಾಜ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ದಿವಾಕರ ಹೆಗಡೆ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಬಹಾವುದ್ದೀನ್ ಡಾಗರ್–ರುದ್ರವೀಣಾ

ದೇಸಿ ಆಟಗಳು, ಸಾಂಸ್ಕೃತಿಕ ಮೇಳ: ಸಮಾರೋಪ (ಸಂಜೆ 4.30ಕ್ಕೆ)

ಸಮ್ಮುಖ: ಶ್ರೀ ದತ್ತ ಆಶ್ರಮ, ಗೌರಿಗದ್ದೆ ಅವಧೂತ ಶ್ರೀ ವಿನಯ್ ಗುರೂಜಿ, ಬಸವ ಧರ್ಮ ಪೀಠದ ಡಾ.ಮಾತೆ ಗಂಗಾದೇವಿ, ಅಧ್ಯಕ್ಷತೆ: ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಸಮಾರೋಪ ಭಾಷಣ: ಕೇಂದ್ರ ರಾಸಾಯನಿಕ ಸಚಿವ ಭಗವಂತ್ ಖೂಬಾ, ಬಹುಮಾನ ವಿತರಣೆ: ಜಲಸಂಪನ್ಮೂಲ ಸಚಿವ ಗೋವಿಂದ ಎಂ.ಕಾರಜೋಳ, ತೋಟಗಾರಿಕೆ ಸಚಿವ ಎನ್. ಮುನಿರತ್ನ, ಪಶು ಸಂಗೋಪನಾ ಸಚಿವ ಪ್ರಭು ಬಿ. ಚವ್ಹಾಣ್, ಶಾಸಕ ಈಶ್ವರ ಭೀಮಣ್ಣ ಖಂಡ್ರೆ, ಮುಖ್ಯ ಅತಿಥಿಗಳು : ಮಾಜಿ ಸಚಿವ ಸಿ.ಎಂ. ಇಬ್ರಾಹಿಂ, ಶಾಸಕರಾದ ಸಿ.ಎಸ್. ಪುಟ್ಟರಾಜು, ಸಾ.ರಾ. ಮಹೇಶ್, ವಿಸ್ತಾರ ನ್ಯೂಸ್ ಸಿಇಒ ಹರಿಪ್ರಕಾಶ್ ಕೋಣೆಮನೆ, ಸಮಾಜ ಸೇವಕರಾದ ಶ್ರೀಮತಿ ಭಾರತೀ ಅನಿಲ್ ಪಾಟೀಲ್.

ಸಾಂಸ್ಕೃತಿಕ ಕಾರ್ಯಕ್ರಮಗಳು

ಗದ್ದುಗೆ ಆವರಣ : ಬೆಳಗ್ಗೆ 8ಕ್ಕೆ ನಾದಸ್ವರ, 9ಕ್ಕೆ ಭಕ್ತಿ ಸಂಗೀತ : ಶ್ರೀಕಾಂತ ಬಾಕಳೆ, ಹುಬ್ಬಳ್ಳಿ; ಮಧ್ಯಾಹ್ನ 2ಕ್ಕೆ ಜನಪದ ಗೀತೆ ಹಾಗೂ ವಚನ ಗಾಯನ : ಜಿ. ಅಮ್ಮ ರಾಮಚಂದ್ರ, ದೇವಲಾಪುರ; 3ಕ್ಕೆ ಯೋಗ ಪ್ರಾತ್ಯಕ್ಷಿಕೆ : ಪತಂಜಲಿ ಯೋಗ ಶಿಕ್ಷಣ ಸಮಿತಿ, ನಂಜನಗೂಡು; ರಾತ್ರಿ 7ಕ್ಕೆ ಜಲತರಂಗ : ವಿದುಷಿ ಶಶಿಕಲಾ ದಾನಿ, ಹುಬ್ಬಳ್ಳಿ; ರಾತ್ರಿ 7ಕ್ಕೆ ನಾಟಕ : ಸಾರ್ಥಕತೆ, ಕಾನೂನು ಸೇವೆಗಳ ಅರಿವು (ವಸ್ತುಪ್ರದರ್ಶನ ಆವರಣ), ಅಭಿನಯ : ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮೈಸೂರು; ರಾತ್ರಿ 8ಕ್ಕೆ ಭರತನಾಟ್ಯ : ಆರ್. ಐಶ್ವರ್ಯ, ಬೆಂಗಳೂರು; ರಾ. 9ಕ್ಕೆ : ಜಾನಪದವೇ ಸತ್ಯ ಜಾನಪದವೇ ನಿತ್ಯ : ಡಾ. ಕಾ. ರಾಮೇಶ್ವರಪ್ಪ ಮತ್ತು ತಂಡ, ಮೈಸೂರು.

ನಾಟಕಗಳು (ರಾತ್ರಿ 10ಕ್ಕೆ)

ಹಿರಿಯರ ಮನೆ ಆವರಣ : ದಾನಶೂರ ಕರ್ಣ ಅಥವಾ ಕುರುಕ್ಷೇತ್ರ – ಶ್ರೀ ದೇವತಾ ಸಪ್ತ ಕನ್ಯೆಯರ ಕನ್ನಡ ಕಲಾ ಸಂಘ, ಸುತ್ತೂರು.

ಶ್ರೀ ಸಿದ್ದನಂಜ ದೇಶಿಕೇಂದ್ರ ಮಂಗಳ ಮಂಟಪ : ಸತ್ಯ ಹರಿಶ್ಚಂದ್ರ – ಶ್ರೀ ಕಪಿಲೇಶ್ವರ ರೈತ ಸ್ವಸಹಾಯ ಸಂಘ, ಹೊಸಕೋಟೆ.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಕ್ಕದ ಆವರಣ : ದಕ್ಷಯಜ್ಞ–ಶ್ರೀ ಸೋಮೇಶ್ವರ ಕಲಾ ಸಂಘ, ಮೂಡಹಳ್ಳಿ.

ಶ್ರೀ ಘನಲಿಂಗ ಶಿವಯೋಗಿ ಅತಿಥಿಗೃಹದ ಹಿಂಭಾಗ : ಕುರುಕ್ಷೇತ್ರ – ಶ್ರೀ ದೊಡ್ಡಮ್ಮತಾಯಿ ಕೃಪಾಪೋಷಿತ ನಾಟಕ ಮಂಡಳಿ, ಅರಕಲಗೂಡು.

ಕಿವೀಸ್ ವಿರುದ್ಧ ಭಾರತಕ್ಕೆ ಜಯ: ಸರಣಿ ಗೆಲುವು



ರಾಯಪುರ, ಜ.21– ಬೌಲರ್‌ಗಳ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಭಾರತ ನ್ಯೂಜಿಲೆಂಡ್ ವಿರುದ್ಧದ 2ನೇ ಏಕದಿನ ಪಂದ್ಯದಲ್ಲಿ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ 3 ಪಂದ್ಯಗಳ ಏಕದಿನ ಸರಣಿಯಲ್ಲಿ ಇನ್ನೂ ಒಂದು ಪಂದ್ಯ ಬಾಕಿ ಉಳಿದಿರುವಂತೆಯೇ 2–0 ಅಂತರ ದಲ್ಲಿ ಸರಣಿಯನ್ನು ತನ್ನದಾಗಿಸಿಕೊಂಡಿದೆ. ಅಲ್ಲದೇ ಬ್ಯಾಟು ಬ್ಯಾಕ್ ಒಡಿಐ ಸರಣಿ ಗೆಲುವಿನೊಂದಿಗೆ ಈ ವರ್ಷ ನಡೆಯುವ ಐಸಿಸಿ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಗೆ ಭರ್ಜರಿ ತಾಲೀಮು ಕೈಗೊಂಡಿದೆ.

ಇಲ್ಲಿನ ಶಹೀದ್ ವೀರ್ ನಾರಾಯಣ ಸಿಂಗ್ ಅಂತಾರಾಷ್ಟ್ರೀಯ ಕ್ರೀಡಾಂಗಣ ದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ಭಾರತೀಯ ಬೌಲರ್‌ಗಳ ಸಾಂಘಿಕ ದಾಳಿಗೆ ತತ್ತರಿಸಿ 34.3 ಓವರ್‌ಗಳಲ್ಲಿ 108 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಗ್ಲೆನ್ ಫಿಲಿಪ್ಸ್ 36, ಮೈಕಲ್ ಬ್ರೇಸ್‌ವೆಲ್ 22 ಮತ್ತು ಮಿಚೆಲ್ ಸ್ಯಾಂಟ್ನರ್ 27 ರನ್ ಗಳಿಸಿದ್ದು ಬಿಟ್ಟರೇ ಉಳಿದವರಿಂದ ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು. ಭಾರತದ ಪರ ಮೊಹಮ್ಮದ್ ಶಮಿ 3, ವಾಷಿಂಗ್ಟನ್ ಸುಂದರ್ ಹಾಗೂ ಹಾರ್ದಿಕ್ ಪಾಂಡ್ಯ ತಲಾ 2 ಮತ್ತು ಮೊಹ ಮ್ಮದ್ ಸಿರಾಜ್, ಶಾರ್ದೂಲ್ ಠಾಕೂರ್ ಹಾಗೂ ಕುಲದೀಪ್ ಯಾದವ್ ತಲಾ ಒಂದು ವಿಕೆಟ್ ಗಳಿಸಿ ಮಿಂಚಿದರು.

ಬಳಿಕ ಸಾಧಾರಣ ಗುರಿ ಬೆನ್ನತ್ತಿದ ಭಾರತ, ನಾಯಕ ರೋಹಿತ್ ಶರ್ಮಾ ಅವರ ಅರ್ಧಶತಕದ ನೆರವಿನಿಂದ 20.1 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 111 ರನ್ ಗಳಿಸುವ ಮೂಲಕ ಗೆಲುವಿನ ನಗೆ ಬೀರಿತು. ರೋಹಿತ್ ಶರ್ಮಾ 50 ಎಸೆತಗಳಲ್ಲಿ 7 ಬೌಂಡರಿ, 2 ಸಿಕ್ಸ್ ಒಳಗೊಂಡ 51ರನ್ ಗಳಿಸಿ ಔಟಾದರು. ಉದಯೋನ್ಮುಖ ಆಟಗಾರ ಶುಭಮನ್ ಗಿಲ್ 40 ರನ್ ಗಳಿಸಿ ಔಟಾಗದೆ ಉಳಿದರು. ಮಾಜಿ ನಾಯಕ ವಿರಾಟ್ ಕೊಹ್ಲಿ 11 ಮತ್ತು ಇಶಾನ್ ಕಿಶನ್ ಅಜೇಯ 8 ರನ್ ಗಳಿಸಿದರು. ನ್ಯೂಜಿಲೆಂಡ್ ಪರ ಹೆನ್ರಿ ಶಿಪ್ಲಿ ಹಾಗೂ ಮಿಚೆಲ್ ಸ್ಯಾಂಟ್ನರ್ ತಲಾ ಒಂದೊಂದು ವಿಕೆಟ್ ಪಡೆದರು. ಮೊಹಮ್ಮದ್ ಶಮಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಸಮಸ್ಯೆ ಪರಿಹಾರಕ್ಕಾಗಿಯೇ ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ





ಮೈಸೂರು,ಜ.21– ಜಿಲ್ಲಾಡಳಿತ ಮತ್ತು ತಾಲೂಕು ಆಡಳಿತ ಜನರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಸದಾ ಸಿದ್ಧವಾಗಿರುತ್ತದೆ ಮತ್ತು ಜನರ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಿಯೇ ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ ಕಾರ್ಯಕ್ರಮವನ್ನು ರೂಪಿಸಲಾಗಿದೆ ಎಂದು ಶಾಸಕ ಎಚ್.ಪಿ.ಮಂಜುನಾಥ್ ತಿಳಿಸಿದರು.

ಹುಣಸೂರು ತಾಲೂಕಿನ ಹನ ಗೋಡು ಹೋಬಳಿಯ ನೇರಳಕುಪ್ಪೆ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಗ್ರಾಮ ವಾಸ್ತವ್ಯ ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳುವಲ್ಲಿ ಜನರು ಮುಂದಾಗಬೇಕು. ಕೆಲವು ಸಮಸ್ಯೆ ಗಳನ್ನು ಈ ಮಟ್ಟದಲ್ಲಿ ಪರಿಹರಿಸಲು ಸಾಧ್ಯವಿಲ್ಲವಾದರೂ ಅವುಗಳನ್ನು ಸರ್ಕಾರದ ಗಮನಕ್ಕೆ ತರುವ ಕೆಲಸ ಮಾಡುತ್ತೇವೆ ಎಂದರು.

ಕೋವಿಡ್ ನಂತರದ ದಿನಗಳಲ್ಲಿ ಸಂಚರಿಸುವ ಬಸ್‌ಗಳ ಸಂಖ್ಯೆ ಶೇ.48 ರಷ್ಟಿದೆ ಇದರಿಂದ ನಿಜಕ್ಕೂ ಬಹಳ ತೊಂದರೆ ಉಂಟಾಗಿದ್ದು, ಈ ಗ್ರಾಮ ದಲ್ಲಿಯೂ ಬಸ್‌ನ ಸಮಸ್ಯೆ ಇರುವ ದಾಗಿ ಪ್ರೌಢಶಾಲಾ ಮಕ್ಕಳು ತಿಳಿಸಿದ್ದು, ಸಮಸ್ಯೆಯನ್ನು ಪರಿಹರಿಸುವಲ್ಲಿ ಕೆಲಸ ಮಾಡುತ್ತೇವೆ ಸಲ್ಲಿಸುವ ಅರ್ಜಿಗಳ ಕುರಿತು ನಿಮ್ಮ ನಿಮ್ಮಲ್ಲಿಯೇ ಆಕ್ಷೇಪ, ಗಲಾಟೆಗಳು ಬೇಡ. ನೇರವಾಗಿ ನಿಮ್ಮ ಸಮಸ್ಯೆಗಳನ್ನು ಜಿಲ್ಲಾಧಿಕಾರಿಗಳ ಮತ್ತು ಉಪವಿಭಾಗಾಧಿಕಾರಿಗಳ ಮುಂದೆ ತನ್ನಿ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಕೆ.ವಿ. ರಾಜೇಂದ್ರ ಮಾತನಾಡಿ, ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ಈ ಮಹತ್ತರ ಕಾರ್ಯಕ್ರಮದ ಮೂಲಕ, ಬಸ್ ಸಮಸ್ಯೆ ಇರುವ ಇಂತಹ ಹಳ್ಳಿಯಿಂದ ತಮ್ಮ ಸಮಸ್ಯೆಗಳನ್ನು ಹೊತ್ತು ಜಿಲ್ಲಾ ಕಚೇರಿಗಳಿಗೆ ಬರಲು ಎಷ್ಟು ಕಷ್ಟ ಎಂದು ತಿಳಿದಿದೆ. ಆದ್ದರಿಂದ ರಾತ್ರಿ 12 ಗಂಟೆಯಾದರೂ ಪರವಾಗಿಲ್ಲ ಎಲ್ಲರ ಸಂಪೂರ್ಣ ಸಮಸ್ಯೆಗಳನ್ನು ಆಲಿಸಿಯೇ ಕಾರ್ಯಕ್ರಮದಿಂದ ತೆರಳುವುದಾಗಿ ತಿಳಿಸಿದರು.

ಹಾಡಿ, ಆಶ್ರಮ ಶಾಲೆ, ಪ್ರೌಢಶಾಲೆ ಹಾಗೂ ಕೆರೆ ವೀಕ್ಷಣೆ ಮಾಡಿದ ಅವರು ಕೆರೆ ಒತ್ತುವರಿ, ಸ್ಮಶಾನದ ಒತ್ತುವರಿ, ಗೋಮಾಳದ ಒತ್ತುವರಿ ಮುಂತಾದ ಸಮಸ್ಯೆಗಳು ತಮ್ಮ ಗಮನಕ್ಕೆ ಬಂದಿರುವುದಾಗಿ ತಿಳಿಸಿದರು. ಪ್ರೌಢ ಶಾಲಾ ಮಕ್ಕಳೊಟ್ಟಿಗೆ ಚರ್ಚಿಸಿ ಮಕ್ಕಳಿಂದ ಅವರ ಸಮಸ್ಯೆಗಳ ಕುರಿತು ಮಾಹಿತಿಯನ್ನು ಪಡೆದುಕೊಂಡರು.

ಎಲ್ಲಾ ಸಮಸ್ಯೆಗಳಿಗೂ ತಕ್ಷಣವೇ ಪರಿಹಾರ ಕಲ್ಪಿಸಲಾಗದಿದ್ದರೂ ಸಮಸ್ಯೆಗೆ ಸೂಕ್ತ ಮಾರ್ಗದರ್ಶನ ನೀಡುವುದೂ ಸಹ ಒಂದು ರೀತಿಯ ಪರಿಹಾರವೇ ಎಂದರು. ರಸ್ತೆ ಕಾಮಗಾರಿಗೆ ಸಂಬಂಧಿಸಿದಂತೆ ಸಾಮಾನ್ಯ ರಸ್ತೆಗಳಿಗೆ ಒಂದು ಕಿಲೋ ಮೀಟರ್‌ಗೆ 60 ಸಾವಿರ ಅನುದಾನದ ಅವಕಾಶವಿದ್ದು, ರಾಷ್ಟ್ರೀಯ ಹೆದ್ದಾರಿಗಳಿಗೆ ಒಂದು ಕಿಲೋಮೀಟರ್‌ಗೆ ಒಂದು ಲಕ್ಷದವರೆಗೆ ಅವಕಾಶವಿದೆ ಎಂದು ತಿಳಿಸಿದರು. ಸಾರ್ವಜನಿಕ ಸಮಸ್ಯೆಗಳಿಗೆ ಮೊದಲು ಆದ್ಯತೆ ನೀಡಿದ ಅವರು ಸಾರ್ವಜನಿಕ ಸಮಸ್ಯೆಗಳ ಪಟ್ಟಿಯನ್ನು ಪಡೆದುಕೊಂಡು, ನಂತರ ವೈಯಕ್ತಿಕ ಸಮಸ್ಯೆಯ ಅರ್ಜಿಗಳನ್ನು ಸ್ವೀಕರಿಸಿದರು.

ನಂತರ ಫಲಾನುಭವಿಗಳಿಗೆ ಮಾಸಾಶನ, ವೃದ್ಧಾಪ್ಯ ವೇತನ, ಹೊಸ ಪಡಿತರ ಚೀಟಿ ಹಾಗೂ ಇತರೆ ಸವಲತ್ತುಗಳ ವಿತರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿಗಳಾದ ರುಚಿ ಜಿಂದಾಲ್, ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳಾದ ನಂದ, ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ.ಪ್ರಸಾದ್, ಹುಣಸೂರಿನ ತಹಸಿಲ್ದಾರ್, ತಾಲೂಕು ಪಂಚಾಯಿತಿಯ ಕಾರ್ಯನಿರ್ವಹಣಾಧಿಕಾರಿಗಳು, ಗ್ರಾಪಂ ಅಧ್ಯಕ್ಷ ಉದಯನ್, ಉಪಾಧ್ಯಕ್ಷರಾದ ಜವರಮ್ಮ ಹಾಗೂ ಇತರ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಜಿ20: ಫೆ.9ರಿಂದ ಬೆಂಗಳೂರಿನಲ್ಲಿ ಪರಿಸರ ಸಭೆ

ನವದೆಹಲಿ, ಜ.21– ಭಾರತವು ಆತಿಥ್ಯ ವಹಿಸಿರುವ ಜಿ20 ಶೃಂಗಸಭೆಯ ಮೊದಲ ಪರಿಸರ ಸಭೆಯು ಬೆಂಗಳೂರಿನಲ್ಲಿ ಫೆ 9ರಿಂದ 11ರವರೆಗೆ ನಡೆಯಲಿದೆ. ಪರಿಸರ ವ್ಯವಸ್ಥೆಗಳ ಮರುಸ್ಥಾಪನೆ, ಜೀವವೈವಿಧ್ಯ ವರ್ಧನೆ, ಆರ್ಥಿಕ ಪ್ರಗತಿಗಾಗಿ ಸಾಗರ ಸಂಪನ್ಮೂಲಗಳನ್ನು ಸುಸ್ಥಿರವಾಗಿ ಬಳಸುವುದು ಸೇರಿದಂತೆ ಹಲವು ವಿಷಯಗಳು ಸಭೆಯಲ್ಲಿ ಚರ್ಚೆಯಾಗಲಿವೆ.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷೀದಾರರು ಅದರ ಮಾಲೀಕರಾದ, ಮೈಸೂರು ನಗರ, ಪುಲಕೇಶಿ ರಸ್ತೆ, ಮನೆ ನಂಬರ್: 2626, ರಲ್ಲಿ ವಾಸವಾಗಿರುವ ಶ್ರೀ. ಅಬ್ದುಲ್ ಸುಭಾನ್ ರವರ ಮಗನಾದ ಶ್ರೀ.ರಹಮತುಲ್ಲ, ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಅದರ ಮಾಲೀಕರಾದ ಶ್ರೀ.ರಹಮತುಲ್ಲ ರವರನ್ನು ಹೊರತು ಪಡಿಸಿ ಇತರ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಹತ್ತು (10) ದಿನಗಳ ಒಳಗೆ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ಸಹಿ ಮಾಡಿದವರನ್ನು, ಸಂಪರ್ಕಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಮೈಸೂರು ನಗರ, ಎನ್.ಆರ್. ಮೊಹಲ್ಲಾ, ಕೆಸರೆ 2 ನೇ ಹಂತ, ಇಲ್ಲಿರುವ ಪೂರ್ವ–ಪಶ್ಚಿಮ: 60 ಅಡಿಗಳು, ಉತ್ತರ–ದಕ್ಷಿಣ: 40 ಅಡಿಗಳು, ಒಟ್ಟು ವಿಸ್ತೀರ್ಣ: 2400 ಚದರ ಅಡಿ ಅಳತೆಯ ನಿವೇಶನ ಸಂಖ್ಯೆ: ನಾಲ್ಕುನೂರ ನಾಲ್ಕು (404) ಇದಕ್ಕೆ ಚಕ್ಕುಬಂದಿ:

ಪೂರ್ವಕ್ಕೆ:– 9 ಮೀಟರ್ ರಸ್ತೆ
ಪಶ್ಚಿಮಕ್ಕೆ:– ನಿವೇಶನ ಸಂಖ್ಯೆ: 399
ಉತ್ತರಕ್ಕೆ: – ನಿವೇಶನ ಸಂಖ್ಯೆ: 405
ದಕ್ಷಿಣಕ್ಕೆ:– ನಿವೇಶನ ಸಂಖ್ಯೆ: 403

ಸಹಿ/– ಎಂ.ಎನ್.ಪ್ರಕಾಶ್ ಕಾಳಪ್ಪ
Advocate & Legal Consultant
2-3, First Floor, PRI Complex, 67/7A, New Sayyajirao Road, Fort Mohalla, Mysore 570004 India
Cell: 93431 12535. E-mail: mnprakashkalappa@gmail.com
ಮೈಸೂರು: 21/01/2023

Before the Hon'ble I Addl. Senior Civil Judge, at Mysuru

O.S. No. 399 / 2022

Plaintiffs: Sri S.J. Sunil Kumar and others.

Vs

Defendants: Smt. Shanthi and others

1) Smt. Shanthi, aged about 42 years, W/o Late Siddaraju,
2) Sri Dhanaraj, aged about 22 years, S/o Late Siddaraju,
Def. Nos. 1 and 2 are residing at Chikkegowdana Koppal, Yelwala Hobli, Mysuru Taluk.
Also at: Lala Band Street, Kalkunike, Hunsuru Town, Mysuru District.

NOTICE

Take notice of the fact that the Plaintiffs have filed the present suit on the file of the Hon'ble I Addl. Senior Civil Judge, at Mysuru. The said case stands posted to 6-2-2023.

You are hereby required to appear before the Hon'ble I Addl. Senior Civil Judge, at Mysuru on the date fixed at 11.00 am on 6-2-2023 either personally or through Advocate. Failure results both of you being placed ex-parte and proceeds with the matter on merits.

Given under my hand and seal of the Court on this the 21st day of Jan., 2023.

By Order of the Court
Sd/- Chief Ministerial Officer,
Hon'ble Senior Civil Judge, Mysuru.

Sd/- O. Shama Bhat, Advocate
No. 20/C, 2nd Floor, Jayalakshmivilasa Road, Chamarajapuram, Mysuru.
Place: Mysuru
Date: 6-1-2023

BEFORE THE HON'BLE FIRST ADDITIONAL DISTRICT JUDGE AT MYSURU

R.A.No.470/2018

Appellants :
1. Smt. Indira Thimmaiah W/o Sri. C.A.Thimmaiaih, Aged about 51 years, R/at No.E-2, East Trinity Acres, Sarjapur Road, Bengaluru - 560 102. And Two others

V/s

Respondents :
1. Sri. Jayaram Pathak
3. Smt. M.T. Naveena, Aged about 37 years, W/o Sri. M.N. Somesh.
4. Sri. M.N.Somesh, Aged about 39 years, S/o Sri. Narayanappa.R3 & R4 are R/at No.570, 1st Floor, 15th Cross, II Main, Aravindanagar, Mysuru. (Proposed Respondent No.3 & 4) (Flat No.G3)
5. Smt. Kavitha, Aged about 36 years, W/o Sri. Prashanth K Nagaraj.
6. Sri. Prashanth K Nagaraj, Aged about 51 years S/o Sri. K V Nagaraj. R5 & R6 are R/at D.No.303, 3rd Floor, Brigade Elite -2, KRS Road, Yadavagiri, Mysuru - 570 020. (Proposed Respondents 5 & 6) (Flat No.F-002)
8. Miss. G.Sumakumari, Aged about 36 years D/o Sri.K.Ganesh, R/at No.2952, 18th Cross, Hebbal, Near Kaveri Circle, Vijayanagar Post, Mysuru - 16. (Proposed Respondent No.8)

NOTICE

Take notice of the fact that the Appellants have filed the above Regular Appeal challenging the order dated: 27-09-2018 passed by the Court of IV Additional Senior Civil Judge at Mysuru in O.S. No.1169/2014 amounting to a decree of dismissal of the Suit.

The Proposed Respondent No.3 to 6 and 8 mentioned above are hereby called upon to appear before the Hon'ble Court on 10-02-2023 at 11 A.M., failing which the matter would be adjudicated by placing the Proposed Respondents exparte.

Given under my hand and seal of the court on this day 18th day of January 2023.

By order of the Court
Sd/- Chief Administrative officer
District Court, Mysuru.

Sd/- P.D.Medappa
P.Mahesh, Advocates,
No.1432/A, New No.D-9/1, "Ambasutha Sadana", Seebaiah Road, Devaraja Mohalla, Mysuru - 570 001.

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಸಂಖ್ಯೆ : ಅಂ.ಅ.ಪಂ.ಹಾ/06/2022–23

ಕಾರ್ಯದರ್ಶಿಗಳ ಕಾರ್ಯಾಲಯ
ಅಂಬಳೆ ಅಣ್ಣಯ್ಯ ಪಂಡಿತರ ಧರ್ಮಶಾಲೆ,
ಚಾಮರಾಜ ಜೋಡಿ ರಸ್ತೆ, ದಿನಾಂಕ: 21–01–2023.

ಪ್ರಕಟಣೆ

ಮೈಸೂರು ಮಹಾನಗರ ಪಾಲಿಕೆಯ Poor Student Feeding Committee, ಚಾಮರಾಜ ಜೋಡಿ ರಸ್ತೆ, ಮೈಸೂರು ಇಲ್ಲಿನ ಅಂಬಳೆ ಅಣ್ಣಯ್ಯ ರವರ ಹೆಸರಿನಲ್ಲಿ ವಿದ್ಯಾರ್ಥಿನಿಲಯವನ್ನು ನಡೆಸಿಕೊಂಡು ಬರುತ್ತಿದ್ದು, ಸದರಿ ವಿದ್ಯಾರ್ಥಿ ನಿಲಯದಲ್ಲಿರುವ ಸುಮಾರು 50 ವಿದ್ಯಾರ್ಥಿಗಳಿಗೆ ಬೆಳಿಗ್ಗೆ ಕಾಫಿ, ಟೀ ಮತ್ತು ತಿಂಡಿ ಮಧ್ಯಾಹ್ನ ಊಟ, ರಾತ್ರಿ ಊಟವನ್ನು ರುಚಿ – ಶುಚಿಯಿಂದ ಸಿದ್ಧಪಡಿಸಿ ವಿದ್ಯಾರ್ಥಿಗಳಿಗೆ ನೀಡಲು ಇಚ್ಛಿಸುವ ಸಂಸ್ಥೆ ಅಥವಾ ಅಡುಗೆಯವರು ಈ ಕೆಳಕಂಡ ಕೋಷ್ಟಕದಲ್ಲಿ ಇರುವಂತೆ ದರಪಟ್ಟಿ ಸಲ್ಲಿಸಲು ತಿಳಿಸಿದೆ.

ಕ್ರ.ಸಂ.	ತಿಂಡಿ, ಊಟದ ವಿವರ	ವಿದ್ಯಾರ್ಥಿನಿಯರಿಗೆ ಊಟ ತಿಂಡಿ ಬಡಿಸುವ ಸಮಯ	ನಮೂದಿಸಬೇಕಿರುವ ಒಬ್ಬ ವಿದ್ಯಾರ್ಥಿಗೆ ಮಾಸಿಕ ಮೊಬಲಗು
1.	ತಿಂಡಿ	ಬೆಳಿಗ್ಗೆ 7:30 ರಿಂದ 9:30	
2.	ಮಧ್ಯಾಹ್ನ ಊಟ	ಮಧ್ಯಾಹ್ನ 12:30 ರಿಂದ 3:00	
3.	ರಾತ್ರಿ ಊಟ	ರಾತ್ರಿ 8:00 ರಿಂದ 9:30	

ಕಾರ್ಯದರ್ಶಿಗಳು ಹಾಗೂ
ಉಪ ಆಯುಕ್ತರು (ಕಂದಾಯ)
ಅಂಬಳೆ ಅಣ್ಣಯ್ಯ ಪಂಡಿತರ ಧರ್ಮಶಾಲೆ
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ಸೂಚನೆ:
1. ದರಪಟ್ಟಿಯನ್ನು ದಿನಾಂಕ: 27–1–2023 ರಂದು ಸಂಜೆ 4.30 ರೊಳಗೆ ಸಲ್ಲಿಸುವುದು.
2. ವಿದ್ಯಾರ್ಥಿಗಳಿಗೆ ನೀಡುವ ತಿಂಡಿ, ಊಟ, ಕಾಫಿ / ಟೀ ರುಚಿ – ಶುಚಿಯಾಗಿರಬೇಕು.
3. ವಿದ್ಯಾರ್ಥಿನಿಯಲದ ವಿದ್ಯಾರ್ಥಿನಿಯರೊಂದಿಗೆ ಅನ್ಯೋನ್ಯತೆಯಿಂದ ನಡೆದುಕೊಳ್ಳುವುದು.
4. ಪ್ರತಿದಿನ ವಿದ್ಯಾರ್ಥಿನಿಯಲದ ವಾರ್ಡನ್ ರವರು ಸೂಚಿಸಿದ ತಿಂಡಿ, ಊಟಗಳನ್ನು ಸಿದ್ಧಪಡಿಸಿ ನೀಡುವುದು.
5. ಸರಬರಾಜಿನಲ್ಲಿ ಯಾವುದೇ ನ್ಯೂನತೆ ಮತ್ತು ದೂರು ಇಲ್ಲದಂತೆ ಪ್ರತಿದಿನ ವಿದ್ಯಾರ್ಥಿನಿಯರಿಗೆ ನಿಗಧಿತ ವೇಳೆಯವರೆಗೆ ನೀಡುವುದು.
6. ನಮೂದಿಸಿರುವ ದರವು ಎಲ್ಲಾ ತೆರಿಗೆ ಸೇರಿದಂತೆ ದರ ನಮೂದಿಸಬೇಕು.

ನಕ್ಕರೆ ಅದೇ ಸ್ವರ್ಗ

ಅಭ್ಯರ್ಥಿ : ಸಾರ್ ಸಂದರ್ಶನದಲ್ಲಿ ನನ್ನನ್ನು ಏಕೆ ಆಯ್ಕೆ ಮಾಡಲಿಲ್ಲ? ಎಷ್ಟೊಂದು ಡಿಗ್ರಿಗಳನ್ನು ನಾನು ಪಡೆದಿದ್ದೇನೆ. ಸರ್ಟಿಫಿಕೇಟ್ ನೋಡಿದಿರಲ್ಲಾ

ಸಂದರ್ಶಕರು : ನೀವು ಪ್ರಶ್ನೆಗಳಿಗೆ ಸಮರ್ಪಕ ಉತ್ತರವನ್ನೇ ನೀಡಲಿಲ್ಲ. ಥರ್ಮಾಮೀಟರ್‌ನಲ್ಲೂ ಡಿಗ್ರಿ ಇದೆ!

ಮೈಸೂರು ಮಿತ್ರ

ಭಾನುವಾರ, 22 ಜನವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಸಂತೋಷ ಎನ್ನುವುದು ನಿಮ್ಮಲ್ಲಿ ಏನಿದೆ ಅಥವಾ ನೀವು ಯಾರು ಎನ್ನುವುದರ ಮೇಲೆ ಅವಲಂಬಿತವಾಗಿಲ್ಲ. ಅದು ನೀವು ಏನು ಯೋಚಿಸುತ್ತೀದ್ದೀರಿ ಎನ್ನುವುದನ್ನು ಅವಲಂಬಿಸಿದೆ. – ಗೌತಮ ಬುದ್ಧ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತಿನ್ನಲು ಉಣ್ಣಲು ಇದ್ದರೆ ಯಾವತ್ತೂ ನೆಂಟರು

ನಿಮ್ಮ ಪತ್ರಗಳು

ರಾಷ್ಟ್ರೀಯ ಹೆದ್ದಾರಿಯ ಸರ್ವಿಸ್ ರಸ್ತೆ ಏಕ ರೀತಿ ಇರುವಂತೆ ಕ್ರಮ ಕೈಗೊಳ್ಳಿ...

ಮಾನ್ಯರೆ,

ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಮೈಸೂರು–ಹುಣಸೂರು ಮುಖ್ಯ ರಸ್ತೆ ಹಿನಕಲ್ ಫ್ಲೈ ಓವರ್ ಗ್ರ್ಯಾಂಡ್ ಮೌರ್ಯ ಹೋಟೆಲ್‌ನಿಂದ ಇಲವಾಲದವರೆಗೆ ಸರ್ವಿಸ್ ರಸ್ತೆ ಮಾಡುತ್ತಿದ್ದು, ಇದರ ಅಳತೆ, ವಿಸ್ತೀರ್ಣದಲ್ಲಿ ತುಂಬಾ ವ್ಯತ್ಯಾಸವಿರುವುದು ಕಂಡು ಬರುತ್ತಿದೆ. ಇದರ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರಿಂದ ದಾಖಲಾತಿಗಳನ್ನು ಪಡೆದಿದ್ದು, ಅದು ಅರ್ಥವಾಗದ ಕಾರಣ ಜಿ.ಜಿ. ಬ್ಲಾಕ್ ಬಳಿ ಕಾಮಗಾರಿ ನಡೆಯುತ್ತಿರುವ ಸ್ಥಳದಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಉಸ್ತುವಾರಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನಿಯರ್ ಭೇಟಿ ಮಾಡಿದ್ದು, ಇದರ ಬಗ್ಗೆ ಅವರು ರಸ್ತೆ ಡಿವೈಡರ್‌ನಿಂದ ಬಲ ಭಾಗಕ್ಕೆ 15 ಮೀಟರ್, ಎಡಭಾಗಕ್ಕೆ 15 ಮೀಟರ್ ತೆಗೆದುಕೊಂಡು ಸರ್ವಿಸ್ ರಸ್ತೆ ನಿರ್ಮಾಣ ಮಾಡುತ್ತೇವೆಂದು ಹೇಳಿರುತ್ತಾರೆ. ಆದರೆ ಕೆಲವು ಜಾಗದಲ್ಲಿ ಅಳತೆಯಲ್ಲಿ ಭಾರೀ ವ್ಯತ್ಯಾಸ ಮಾಡಿದ್ದು, ಇದರ ಬಗ್ಗೆ ಕೇಳಲಾಗಿ ಉಸ್ತುವಾರಿ ಸಚಿವರ ಕಡೆಯವರು, ಸಂಸದರ ಕಡೆಯವರು, ಸ್ಥಳೀಯ ಶಾಸಕರ ಕಡೆಯವರದೆಂದು ವಿನಾಯ್ತಿ ನೀಡುತ್ತಾ ಹೋಗಿರುವುದರಿಂದ ಕೆಲವು ಭಾಗದಲ್ಲಿ ವ್ಯತ್ಯಾಸ ಕಂಡು ಬಂದಿರುವುದು ನಿಜ ಎಂಬ ಮಾಹಿತಿ ನೀಡಿದ್ದಾರೆ. ಹಾಗಾಗಿ ರಾಷ್ಟ್ರೀಯ ಹೆದ್ದಾರಿಯ ಸರ್ವಿಸ್ ರಸ್ತೆ ಕಾಮಗಾರಿ ಸಮರ್ಪಕವಾಗಿ ನಡೆಯುತ್ತಿಲ್ಲದ ಕಾರಣ, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸರ್ವಿಸ್ ರಸ್ತೆ ಅಳತೆ ಎಲ್ಲೆಡೆ ಏಕ ಪ್ರಕಾರವಾಗಿರುವಂತೆ ಕ್ರಮ ಕೈಗೊಳ್ಳಬೇಕು. ಈ ರಸ್ತೆ ಸಂಚಾರಕ್ಕೆ ಅನುಕೂಲಕಾರಿಯಾಗಿರುವಂತೆ ಮಾಡಿಕೊಡಬೇಕೆಂದು ಮನವಿ.

–ಎಸ್. ಭೈರಪ್ಪ, ಹೂಟಗಳ್ಳಿ, ಹುಣಸೂರು ರಸ್ತೆ.

ಕನ್ನಡದಲ್ಲಿ ಕೇಂದ್ರದ ಪರೀಕ್ಷೆ ಸ್ವಾಗತಾರ್ಹ

ಮಾನ್ಯರೆ,

ಎಸ್‌ಎಸ್‌ಸಿ ಸಿಬ್ಬಂದಿ ನೇಮಕ ಕುರಿತು ಆಯೋಗ ನಡೆಸುವ ಕೇಂದ್ರ ಸರ್ಕಾರದ ಪರೀಕ್ಷೆಯನ್ನು ಕನ್ನಡದಲ್ಲಿ ನಡೆಸುವ ಕೇಂದ್ರ ಸರ್ಕಾರದ ಕ್ರಮ ಸ್ವಾಗತಾರ್ಹವಾಗಿದೆ. ಇದುವರೆವಿಗೂ ಆಯೋಗದ ಪರೀಕ್ಷೆಗಳು ಹಿಂದಿ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಮಾತ್ರ ನಡೆಯುತ್ತಿತ್ತು.

ಇದಕ್ಕೆ ವಿರುದ್ಧವಾಗಿ ದೇಶಾದ್ಯಂತ ಪ್ರಾದೇಶಿಕ ಭಾಷೆಯಲ್ಲಿ ಎಸ್‌ಎಸ್‌ಸಿ ಪರೀಕ್ಷೆಯನ್ನು ನಡೆಸಬೇಕೆಂದು ಕನ್ನಡ ಹೋರಾಟಗಾರರು ಸೇರಿದಂತೆ ದೇಶದ 13 ಭಾಷೆಗಳ ಹೋರಾಟಗಾರರ ಹೋರಾಟಕ್ಕೆ ಮಣಿದ ಕೇಂದ್ರ ಸರ್ಕಾರ ಕನ್ನಡ ಸೇರಿದಂತೆ ದೇಶದ 13 ಪ್ರಾದೇಶಿಕ ಭಾಷೆಯಲ್ಲಿ ಎಸ್‌ಎಸ್‌ಸಿ ಪರೀಕ್ಷೆಯನ್ನು ನಡೆಸಲು ಸಮ್ಮತಿ ಸೂಚಿಸಿ, ಪ್ರಾದೇಶಿಕ ಭಾಷೆಯಲ್ಲಿ ನಡೆಸಲು ನಿರ್ಧರಿಸಿರುವುದು ಉತ್ತಮ ಬೆಳವಣಿಗೆಯಾಗಿದೆ.

ಕೇಂದ್ರ ಸರ್ಕಾರದ ಪರೀಕ್ಷೆಗಳು ಹಿಂದಿ ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಡೆಸುವ ಕಾರಣ ಸ್ಥಳೀಯವಾಗಿ ಈ ಭಾಷೆಗಳನ್ನು ಕಲಿಯುವುದು ಅನಿವಾರ್ಯ. ದಕ್ಷಿಣ ರಾಜ್ಯಗಳಲ್ಲಿ ಈ ಎರಡು ಭಾಷೆಗಳಿಂತ ಪ್ರಾದೇಶಿಕ ಭಾಷೆಗಳ ಮೇಲೆ ಒಲವು ಮತ್ತು ಅಭಿಮಾನ ಹೆಚ್ಚಿದ್ದು, ಕರ್ನಾಟಕದಲ್ಲಿ ಕನ್ನಡ, ತಮಿಳುನಾಡಿನಲ್ಲಿ ತಮಿಳು, ಆಂಧ್ರಪ್ರದೇಶದಲ್ಲಿ ತೆಲುಗು, ಕೇರಳದಲ್ಲಿ ಮಲಯಾಳಂ ಹೀಗೆ ಸ್ಥಳೀಯ ಭಾಷೆಗಳನ್ನು ಜನರು ಆರಾಧಿಸುತ್ತಾರೆ ಮತ್ತು ಈ ರಾಜ್ಯದ ಜನರು ತಾವು ಮಾತನಾಡುವ ಭಾಷೆಯನ್ನು ತಮ್ಮ ಅಸ್ಮಿತೆ ಎಂದೂ ಪರಿಗಣಿಸುತ್ತಾರೆ.

ಸ್ವಾತಂತ್ರ್ಯ ಪೂರ್ವದಿಂದಲೂ ಉತ್ತರ ಮತ್ತು ದಕ್ಷಿಣದ ರಾಜ್ಯಗಳಲ್ಲಿ ಭಾಷೆಗಳು ಕುರಿತು ಹೋರಾಟ ಸಾಮಾನ್ಯವಾಗಿತ್ತು, ಆದರೆ ಇತ್ತೀಚಿನ ದಶಕದಲ್ಲಿ ಕೇಂದ್ರದ ಸರ್ಕಾರದ ಹಿಂದಿ ಹೇರಿಕೆ ಮಾಡುವ ಧೋರಣೆಯಿಂದ ಪ್ರಾದೇಶಿಕ ಭಾಷೆಗಳ ಹೋರಾಟಕ್ಕೆ ಕಿಚ್ಚು ಹಚ್ಚಿದಂತಾಗಿ ಪ್ರಾದೇಶಿಕ ಹೋರಾಟ ಉಗ್ರರೂಪ ತಾಳಿ ಈ ಹೋರಾಟಕ್ಕೆ ಬಲ ತುಂಬುವ ಮೂಲಕ ಕೇಂದ್ರ ಸರ್ಕಾರದ ಪರೀಕ್ಷೆಗಳಲ್ಲಿ ಕನ್ನಡ ಸೇರಿದಂತೆ ಹಲವು ಭಾಷೆಗಳಿಗೆ ಪ್ರಾತಿನಿಧ್ಯ ದೊರಕುವಂತಾಗಿದೆ.

ಕೇಂದ್ರ ಸರ್ಕಾರದ ಪ್ರತಿಯೊಂದು ಪರೀಕ್ಷೆಗಳು ಪ್ರಾದೇಶಿಕ ಭಾಷೆಯಲ್ಲಿ ನಡೆಯುವಂತಾಗಬೇಕು ಮತ್ತು ಕೇಂದ್ರ ಸರ್ಕಾರದ ಈ ನಿರ್ಧಾರ ಸ್ವಾಗರ್ತಾಹವಾಗಿದೆ ಮತ್ತು ಕೇಂದ್ರ ಸರ್ಕಾರಕ್ಕೆ ಅಭಿನಂದನೆಗಳು. **–ರಾಸುಮ ಭಟ್, ಚಿಕ್ಕಮಗಳೂರು.**

ಉತ್ತಮ ಕವಿ, ಉತ್ತಮ ವ್ಯಕ್ತಿ

ಮಾನ್ಯರೆ,

ಕವಿ ಸುಬ್ಬಣ್ಣ ರಂಗನಾಥ ಎಕ್ಕುಂಡಿ (ಎಸ್.ಆರ್. ಎಕ್ಕುಂಡಿ)ಯವರ ಜನ್ಮ ಶತಮಾನೋತ್ಸವ ವರ್ಷ 2022).

'ಹಾವಾಡಿಗರ ಹುಡುಗ' ಎಂಬುದು ಎಕ್ಕುಂಡಿಯವರ ಒಂದು ಕವನ ಸಂಕಲನ. ಅವರ ಕಾವ್ಯವೆಲ್ಲ ನಾಡಿನ ಪಾಲಿಗೊಂದು ಪುಂಗಿಯಾಗಿ ಪರಿಣಮಿಸಿತು!

ವಿಸ್ಮಯ, ಕುತೂಹಲ ಪ್ರವೃತ್ತಿ, ರಸಪರ ನಿಲುವು, ಪುರಾಣ ಪ್ರಜ್ಞೆ, ಭಾಗವತ ದೃಷ್ಟಿ ಎಕ್ಕುಂಡಿಯವರ ವ್ಯಕ್ತಿತ್ವ, ಕವಿತ್ವಗಳಲ್ಲಿ ಹಾಸು ಹೊಕ್ಕಾಗಿವೆ. ಆದರೆ ಅವರ ಪುರಾಣ ಪ್ರಜ್ಞೆ ಅವರನ್ನು ವರ್ತಮಾನಕ್ಕೆ ವಿಮುಖರನ್ನಾಗಿಸಿಲ್ಲ; ಅಂತರ್ಮುಖತೆ ವಾಸ್ತವಿಕತೆಗೆ ಬೆನ್ನು ತಿರುಗಿಸಿಲ್ಲ. ದಟ್ಟ, ಸಾಮಾಜಿಕ ಕಳಕಳಿಯಿದೆ. ಅವರ ಕವಿತೆಯಲ್ಲಿ; ಬಂಡಾಯದ ಒಲವನ್ನೂ ಗುರುತಿಸಬಹುದು. ಬಂಡಾಯಕ್ಕೆ ಎರಡು ಮುಖಗಳಿವೆ : ಒಂದು ನೇತ್ಯಾತ್ಮಕ ಮುಖ– ಪ್ರತಿಭಟನೆ, ರೊಚ್ಚು, ಪ್ರತಿಭಟನೆ ಅದರ ಶಿಕ್ಷಣಗಳು. ಮತ್ತೊಂದು ಇತ್ಯಾತ್ಮಕ ಮುಖ : ಮಾನವೀಯತೆ, ಅನುಕಂಪ, ಜನಪರ ಧೋರಣೆ ಅದರ ಚಿಹ್ನೆಗಳು. ಎಕ್ಕುಂಡಿಯವರಲ್ಲಿ ನಾವು ಕಾಣುವುದು ಇತ್ಯಾತ್ಮಕ ಮುಖ. ಇದು ಕವಿಯ ದಿವ್ಯ ವಿಷಾದ:

ಮುಗಿಲಿನ ತುಂಬ ಮುತ್ತಿನ ಬೀಜ ಬಿತ್ತುವವರೆ ಇಲ್ಲ:
ನಂದನವನದಲಿ ರೆಕ್ಕೆಯ ಕುದುರೆಯ ಹತ್ತುವವರೆ ಇಲ್ಲ!


ಈ 'ರೊಮ್ಯಾಂಟಿಕ್' ನೆಲೆಯಲ್ಲೆ ತಂಗದೆ ಬಂಡಾಯದ ನಿಲುವಿನತ್ತ ಸಹಜವಾಗಿ ಹೊರಳುತ್ತಾರೆ, ಕವಿ : "ಹಣೆಯಲಿ ಹಸಿವಿನ ಕಣ್ಣನು ತೆರೆದರೆ, ಉಳಿದವರೇ ಇಲ್ಲ!"

'ಕಾಣಿಕೆ'ಯಲ್ಲಿ ಕವಿ ಪ್ರಶ್ನೆಯೊಂದನ್ನು ಹಾಕಿಕೊಂಡು, ತಾನೇ ಉತ್ತರಿಸುತ್ತಾರೆ:

"ಯಾವ ಕಾಣಿಕೆ ಕೊಡಲಿ ನಿನಗೆ ತಾನಿಂದು,
ಓ ನನ್ನ ನಾಡೆ, ಜನ್ಮ ದಿನವೆಂದು ।
ಏನೇನು ಮಾಡಿದರೂ ನಿನ್ನ ಋಣ ತೀರದು ।
ನನ್ನೊಳೇನೂ ಇಲ್ಲ ನನ್ನದೆಂದು ।
ಓ ನನ್ನ ಪ್ರಿಯ ನಾಡೆ, ಅಂತೆಯೇ ಸ್ವೀಕರಿಸು ।
ಪ್ರೀತಿಯೆಸಳಿನ ನನ್ನ ಹಾಡನೊಂದು !"

ಎಕ್ಕುಂಡಿಯವರ 'ಹಾಡು'ಗಳಲ್ಲಿ ಉದ್ರೇಕ, ಆಕ್ರೋಶಗಳಿಲ್ಲ; ಕೆರಳಿಸುವ ದ್ರವ್ಯವಿಲ್ಲ; ಅದು ಸಂತೋಷ, ಶಾಂತಿ, ಸಮಾಧಾನಗಳನ್ನೀಯುವ ಸತ್ ಕವಿತೆ!


–ಸಿಪಿಕೆ, ದತ್ತಪೀಠ ಆಸ್ಥಾನ್ ವಿದ್ವಾನ್, ಮೈಸೂರು.




ಕೆಬಿಜಿಯವರ

ಛೂಮಂತ್ರ... ಛೂಮಂತ್ರ... ಛೂಮಂತ್ರ...


ಸನಾತನ ಧರ್ಮದ ಆಧ್ಯಾತ್ಮಿಕ ಗುರುಗಳ ಕಡೆಯ ದಿನಗಳ ಬಗ್ಗೆ ಒಂದು ಚಿಂತನೆ



ಓಶೋ ರಜನೀಶ್



ಸ್ವಾಮಿ ಚಿನ್ಮಯಾನಂದ



ಶ್ರೀ ಸಿದ್ದೇಶ್ವರ ಸ್ವಾಮೀಜಿ

ಮನು ಕುಲವನ್ನು ಕಾಡುವ ಆದಿಸ್ವರೂಪದ ಪ್ರಶ್ನೆ ಋಗ್ವೇದದಲ್ಲಿ (8,000 ವರ್ಷಗಳಷ್ಟು ಹಳೆಯದು) ದೊರಕುತ್ತದೆ.

ಆ ಪ್ರಶ್ನೆಯೆಂದರೆ : ಸೃಷ್ಟಿಯು ಎಲ್ಲಿಂದ ಮತ್ತು ಹೇಗೆ ಉಂಟಾಯಿತು ಎಂಬುದು ಯಾರಿಗೆ ಗೊತ್ತು ಮತ್ತು ಯಾರು ಇವುಗಳ ಬಗ್ಗೆ ಹೇಳಬಲ್ಲರು?

ಈ ಜಿಜ್ಞಾಸೆಯ ಪ್ರಶ್ನೆಯು ಉತ್ತರದೊಂದಿಗೆ ಮುಕ್ತಾಯ ಗೊಳ್ಳುವುದಿಲ್ಲ. ಆದರೆ ಮತ್ತೊಂದು ಪ್ರಶ್ನೆಯನ್ನು ಹುಟ್ಟು ಹಾಕುತ್ತದೆ. "ನಾವೆಲ್ಲಾ ಪೂಜಿಸುವ ದೇವರುಗಳೇ ಸೃಷ್ಟಿಯ ನಂತರದವರು. ಹಾಗಾಗಿ ಇವು ಯಾರಿಂದ ಉದ್ಭವಿಸಿದವು ಎಂಬುದನ್ನು ಯಾರು ಬಲ್ಲರು?"

ಇಲ್ಲಿ 'ಇವು' ಎಂದರೆ ಸೃಷ್ಟಿ. ಇದು ಅನಿವಾರ್ಯ. ಇದುವೇ ಹಿಂದೂ ಧರ್ಮವನ್ನು 'ಸನಾತನ ಧರ್ಮ' (ಸರ್ವಕಾಲಿಕ ಸತ್ಯ) ಎಂದು ಕರೆಯಲು ಕಾರಣವಿರಬಹುದು, ಹಾಗೂ ಈ ಧರ್ಮವು ಪ್ರಪಂಚದ ಇತರ ಎಲ್ಲಾ ಧರ್ಮಗಳಿಗಿಂತ ಭಿನ್ನವಾದುದು. ಈ ಧರ್ಮದ ನಂಬಿಕೆ, ಪೂಜಾ ವಿಧಾನ, ಧಾರ್ಮಿಕ ವಿಧಿಗಳು, ಲೌಕಿಕತೆ, ವಿಗ್ರಹಾರಾಧನೆ ಇವೆಲ್ಲವೂ ಸಹ ಬೇರೆ ಧರ್ಮಗಳಿಗಿಂತ ಭಿನ್ನವಾಗಿದೆ. ಸ್ವತಃ ದೇವರುಗಳೇ ಸೃಷ್ಟಿಯ ನಂತರದವರಾದರೆ, ನಾವು ಪೂಜಿಸುವ ಹಲವಾರು ದೇವರುಗಳು ಮನುಷ್ಯನ ಸೃಷ್ಟಿಯೇ ಆಗಿರಬಹುದು!

ಇದು ಸಾಧ್ಯವಿದೆ. ಫ್ರೆಂಚ್ ದೇಶದ ತತ್ವಜ್ಞಾನಿ (ದಾರ್ಶನಿಕ) ಹಾಗೂ ಬರಹಗಾರರಾಗಿದ್ದ ವಾಲ್ಟೇರ್ ಅವರು ಘೋಷಿಸುತ್ತಾರೆ: 'ಈ ಸಮಾಜದಲ್ಲಿ ದೇವರಿಲ್ಲದೆ ಹೋಗಿದ್ದರೆ, ನಾವೇ ಒಬ್ಬ ದೇವರನ್ನು ಸೃಷ್ಟಿಸುವ ಅಗತ್ಯವಿರುತ್ತಿತ್ತು'. ಬೈಬಲಿನ ಪ್ರಕಾರ ದೇವರು ತನ್ನದೇ ರೂಪದಲ್ಲಿ (image) ಮನುಷ್ಯನ್ನು ಸೃಷ್ಟಿಸಿದ.........' ಇಲ್ಲ ಸ್ವಾಮಿ. ಋಗ್ವೇದದ ಪ್ರಕಾರ, ಮನುಷ್ಯ ತನ್ನ ಸ್ವಂತ ರೂಪದಂತೆ ದೇವರನ್ನು ಸೃಷ್ಟಿಸಿದ! ವಾಲ್ಟೇರ್ ಅವರು ಮನುಷ್ಯನ ವ್ಯವಹಾರಗಳಲ್ಲಿ ದೇವರ ಪಾತ್ರವನ್ನು ಈ ದೃಷ್ಟಿಯಿಂದಲೇ ಅರ್ಥಮಾಡಿಕೊಂಡಿದ್ದಿರಬೇಕು.

ಒಮ್ಮೆ ದೇವರನ್ನು ಸೃಷ್ಟಿಸಿದ ಮೇಲೆ, ಜಾತಿ–ಧರ್ಮಗಳು, ಅಗತ್ಯವಾಗಿ ಇರಲೇಬೇಕು. ಜೊತೆಗೆ ಆ ಧರ್ಮಕ್ಕೆ ಒಬ್ಬ ಗುರು, ಮಠಾಧಿಪತಿ ಇರಬೇಕು.

ಅವರನ್ನು ಗುರುಗಳೆಂದು ಕರೆಯಿರಿ, ದೇವಮಾನವರೆನ್ನಿ, ಮಠಾಧಿಪತಿಗಳೆನ್ನಿ, ಋಷಿಮುನಿಗಳೆನ್ನಿ ಅಥವಾ ಸನ್ಯಾಸಿಗಳೆನ್ನಿ, ನಾವು ಸಾಮಾನ್ಯ ಜನರು ಅವರನ್ನು ಭಕ್ತಿಭಾವದಿಂದ ಗೌರವಿಸುತ್ತೇವೆ. ಪೂಜಿಸುತ್ತೇವೆ. ಅವರು ತಮ್ಮ ನಿರ್ದಿಷ್ಟ ಜಾತಿ ಅಥವಾ ಧರ್ಮದ ಮುಖ್ಯಸ್ಥರಾಗಿ ಅನುಯಾಯಿಗಳಿಗೆ ದೇವರು ಮತ್ತು ಧರ್ಮದ ಬಗ್ಗೆ ಮಾರ್ಗದರ್ಶನ ಮಾಡುತ್ತಾರೆ, ಸಾರ್ವಜನಿಕ ಪ್ರವಚನಗಳನ್ನು ನೀಡುತ್ತಾರೆ.

ಇದೇ ತಿಂಗಳ ಎರಡರಂದು ಅಸ್ತಂಗತರಾದ ವಿಜಯಪುರದ ಜ್ಞಾನ ಯೋಗಾಶ್ರಮದ ಮುಖ್ಯಸ್ಥರಾಗಿದ್ದ **ಶ್ರೀ ಸಿದ್ದೇಶ್ವರ ಸ್ವಾಮೀಜಿ** ಅವರನ್ನು ಈ ವರ್ಗಕ್ಕೆ ಸೇರಿಸಬಹುದು. ಶ್ರೀ ಸಿದ್ದೇಶ್ವರ ಸ್ವಾಮೀಜಿಯವರಂತೆ ಸ್ವಾಮಿ ಚಿನ್ಮಯಾನಂದ ಮತ್ತು **ಓಶೋ ರಜನೀಶ್** ಅವರು ಸಹ ತಮ್ಮ ವೈಯಕ್ತಿಕ ಮುಕ್ತಿಗೆ ಮಾತ್ರವಲ್ಲದೇ ಬೇರೆಯವರಿಗೆ ಮುಕ್ತಿ ಮಾರ್ಗ ತೋರಲು ಶ್ರಮಿಸಿದರು.

ನಾನು ಈ ಮೂವರು ಆಧ್ಯಾತ್ಮಿಕ ಗುರುಗಳನ್ನು ನೋಡಿದ್ದೇನೆ ಮತ್ತು ಅವರ ಪ್ರವಚನಗಳನ್ನು ಕೇಳಿದ್ದೇನೆ. ಇತ್ತೀಚೆಗೆ ಸಿದ್ದೇಶ್ವರ ಸ್ವಾಮೀಜಿಗಳು ಇಹಲೋಕ ತ್ಯಜಿಸಿದಾಗ, ಅವರ ಬದುಕಿನ ಕಡೆಯ ದಿನಗಳ ಬಗ್ಗೆ ವಿಚಾರ ಮಾಡಲಾರಂಭಿಸಿದೆ. ಅವರು ಯಾವ ರೀತಿ ನಿಧನರಾದರು, ಅವರ ಅಂತ್ಯಕ್ರಿಯೆ ಹೇಗೆ ನಡೆಯಿತು ಹಾಗೂ ಅವರ ಪಾರ್ಥಿವ ಶರೀರದ ಅಂತ್ಯಸಂಸ್ಕಾರ–ಅಗ್ನಿಗರ್ಪಿತ. ಈಗ ಅವರದೆಂಬುದು ಏನು ಉಳಿದಿದೆ?

ಈ ಮೂವರು ಮಹನೀಯರ ಪೈಕಿ ಒಂದು ಸಮಾನವಾದ ಅಂಶವನ್ನು ನಾನು ಕಂಡುಕೊಂಡಿದ್ದೇನೆ. ಇವರೆಲ್ಲರೂ ನಿಜವಾದ ಜ್ಞಾನಿಗಳು, ಸಾಗರದಷ್ಟು ಆಳವಾದ ಜ್ಞಾನವನ್ನು ಹೊಂದಿದಂತಹ ಮೇಧಾವಿಗಳು, ಅಖಂಡ ಜ್ಞಾನಿಗಳು ಆಗಿದ್ದರು. ಆದರೆ, ಪ್ರತಿಯೊಬ್ಬರೂ ತಮ್ಮದೇ ಆದ ವೈಯಕ್ತಿಕ ಬದುಕಿನ ಮಾರ್ಗ ಅನುಸರಿಸಿದ್ದರು.

ಓಶೋ ರಜನೀಶ್ ಅವರು ಪವಾಡ ಪುರುಷನ ರೀತಿಯಲ್ಲಿ ತಮ್ಮದೇ ಆದ ಅನುಯಾಯಿಗಳ ಜೊತೆ (ಬಹುತೇಕ ಪಾಶ್ಚಿಮಾತ್ಯರು) ಆರಾಧನಾ ವ್ಯಕ್ತಿಯಂತೆ (Cult Figure) ಕಂಡು ಬಂದರೆ, ಸ್ವಾಮಿ ಚಿನ್ಮಯಾನಂದರು ಹಾಗೂ ಶ್ರೀ ಸಿದ್ದೇಶ್ವರ ಸ್ವಾಮಿಗಳು ಸಾಮಾನ್ಯರಂತಿದ್ದರು. ಭಕ್ತರು ಅರ್ಥ ಮಾಡಿಕೊಳ್ಳಬಲ್ಲ ಧಾಟಿಯಲ್ಲಿ ಮಾತನಾಡುವ ಸಾಮರ್ಥ್ಯವನ್ನು ಅವರು ಹೊಂದಿದ್ದರು.

ಸ್ವಾಮಿ ಚಿನ್ಮಯಾನಂದರು ಆಂಗ್ಲ ಭಾಷೆಯಲ್ಲಿ ಮಾತನಾಡುತ್ತಿದ್ದರು. ಅವರು ತಮ್ಮ "ಗೀತ ಜ್ಞಾನ ಯಜ್ಞ"ದ ಮೂಲಕ ಪ್ರಸಿದ್ಧರಾಗಿದ್ದರು. ಶ್ರೀ ಸಿದ್ದೇಶ್ವರ ಸ್ವಾಮಿಗಳು ಬದುಕಿನ ಪಾಠ ಅಥವಾ ಜೀವನ ಕಲೆ ಬಗ್ಗೆ ಸ್ಥಳೀಯ ಭಾಷೆ ಕನ್ನಡದಲ್ಲಿ ಶರಣ ಬಸವಣ್ಣ, ಶರಣ ಸಾಹಿತ್ಯ, ವೇದಗಳು, ಹಿಂದೂ ಮಹಾಕಾವ್ಯಗಳು, ನೀತಿ ಕಥೆಗಳು, ದಂತ ಕಥೆಗಳು ಮುಂತಾದವುಗಳನ್ನು ಉದ್ಧರಿಸಿ ಉಪನ್ಯಾಸ ನೀಡುತ್ತಿದ್ದರು. ಹಾಗೂ ದಕ್ಷಿಣ ಕರ್ನಾಟಕದಲ್ಲಿ ಮಾತನಾಡುವ ಕನ್ನಡಕ್ಕಿಂತ ಭಿನ್ನ ಧಾಟಿಯಲ್ಲಿ ಉತ್ತರ ಕರ್ನಾಟಕ ಭಾಷೆಯಲ್ಲಿ ಮಾತನಾಡುತ್ತಿದ್ದರು. ಸ್ಥಳೀಯ ಪಾಳಿ ಭಾಷೆಯಲ್ಲಿ ಬೋಧಿಸುತ್ತಿದ್ದ ಬುದ್ಧನ ಹಾಗೆ.

ನಮ್ಮ ಕೆಲವು ದೇವ ಮಾನವರು ಹಾಗೂ ಆಧ್ಯಾತ್ಮಿಕ ಗುರುಗಳ ಕಡೆಯ ದಿನಗಳನ್ನು ಹಾಗೂ ಅವರ ಸಾವಿನ ಬಗ್ಗೆ ಓದಿದ ಮೇಲೆ ದೇವರು ಅವರ ಆರೋಗ್ಯ ಮತ್ತು ಸಾವಿನ ವಿಚಾರದಲ್ಲಿ ಮಧ್ಯೆ ಪ್ರವೇಶಿಸಿಲ್ಲ ಎಂಬ ಭಾವನೆ ನನಗೆ ಉಂಟಾಯಿತು. ವಿಶ್ವಾದ್ಯಂತ ಇರುವ ಈ ಧಾರ್ಮಿಕ ಮುಖಂಡರ ಹಾಗೂ ಆಧ್ಯಾತ್ಮಿಕ ಗುರುಗಳ, ಅವರು ಕ್ರೈಸ್ತರ ಪೋಪ್ ಇರಬಹುದು ಅಥವಾ ಹಿಂದುಗಳ ಮಠಾಧಿಪತಿಗಳು, ಶಂಕರಾಚಾರ್ಯರಿರಬಹುದು, ಭಕ್ತರು ಮರಣ ಶಯ್ಯೆಯಲ್ಲಿರುವ ಈ ಧಾರ್ಮಿಕ ಗುರುಗಳನ್ನು ಗುಣಪಡಿಸಲು ಮಧ್ಯೆ ಪ್ರವೇಶಿಸಬೇಕೆಂದು ತಮ್ಮ ಇಷ್ಟ ದೇವರಲ್ಲಿ ಪ್ರಾರ್ಥನೆ ಸಲ್ಲಿಸಿರುವುದನ್ನು ನಾವು ಕೇಳಿದ್ದೇವೆ ಹಾಗೂ ಓದಿದ್ದೇವೆ. ಆದರೆ ಕೊನೆಗೂ ಗೆದ್ದಿದ್ದು ಸಾವೇ. ಸಾವು ರಹಸ್ಯ ರೀತಿಯಲ್ಲಿ ಅಥವಾ ಕೆಲವೊಮ್ಮೆ ಹಿಂಸಾತ್ಮಕ ರೀತಿ ಇಲ್ಲವೆ ಅತೀವ ನೋವಿನ ರೂಪದಲ್ಲಿ ಬಂದೆರಗುತ್ತದೆ. ಉದಾಹರಣೆಗೆ, ಓಶೋ ರಜನೀಶ್ ಅವರು, ಸದಾ ಅತ್ಯಂತ ಸಂವೇದನಾಶೀಲವಾದ ಹಾಗೂ ಸೂಕ್ಷ್ಮ ಆರೋಗ್ಯ ಸ್ಥಿತಿಯನ್ನು ಹೊಂದಿದ್ದರು. ವರದಿಗಳ ಪ್ರಕಾರ ಅವರ ಸಾವಿಗೆ ಕಾರಣವಾದದ್ದು ಹೃದಯ ಸ್ತಂಭನ (Heart Attack). ಕೇವಲ 59 ವರ್ಷದ ಚಿಕ್ಕ ವಯಸ್ಸಿನಲ್ಲಿಯೇ ಅವರು ಸಾವಿಗೀಡಾದರು. ರಜನೀಶ್ ಆಶ್ರಮದ ಮೂಲಗಳ ಪ್ರಕಾರ, ಅವರು ಅಮೇರಿಕಾದ ಜೈಲಿನಲ್ಲಿದ್ದ ಸಂದರ್ಭದಲ್ಲಿ ಅವರಿಗೆ ವಿಷಪ್ರಾಶನ ಮಾಡಿದ ಕಾರಣ ಅವರ ದೇಹ ಸ್ಥಿತಿ ನರಕಸದೃಶವಾಯಿತು ಎಂದು ಆರೋಪಿಸಲಾಗುತ್ತಿತ್ತು.

ಅದಾಗ್ಯೂ, ಅವರ ಸಾವು ಸಾಮಾನ್ಯವಲ್ಲದ ಹಾಗೂ ಜಿಜ್ಞಾಸೆಯಿಂದ ಕೂಡಿದೆ. ಯಾವುದೋ ಕಾರಣಕ್ಕಾಗಿ ಅವರು ಸತ್ತ ಒಂದು ಗಂಟೆಯೊಳಗೆ ಅವರ ದೇಹದ ಅಂತ್ಯಕ್ರಿಯೆ ಮಾಡಿ ಮುಗಿಸಲಾಯಿತು. ಅದು ಅವರ ಅಂತಿಮ ಇಚ್ಛೆಯಾಗಿರಬಹುದು ಕೂಡ. ಅವರ ಗೋರಿ ಮೇಲೆ ಈ ರೀತಿ ಬರೆಯಲಾಗಿದೆ : ಹುಟ್ಟಲೂ ಇಲ್ಲ, ಸಾಯಲೂ ಇಲ್ಲ, ಈ ಭೂಮಿಗೆ ಡಿಸೆಂಬರ್ 11, 1931 ರಿಂದ ಜನವರಿ 19, 1990 ರವರೆಗೆ ಒಮ್ಮೆ ಭೇಟಿ ನೀಡಿದೆ.' ಇದರ ಪೂರ್ಣಪಾಠ (text) ರಜನೀಶ್ ಅವರೇ ಸ್ವತಃ ಬರೆದಿದ್ದಾರೆ ಎಂದು ಮತ್ತೆ ಹೇಳುವ ಅಗತ್ಯವೇ ಇಲ್ಲ. ಆಶ್ಚರ್ಯಕರವಾದ ವಿಷಯವೆಂದರೆ, ದೇಹವಿಲ್ಲದೆ ಈ ಭೂಗ್ರಹಕ್ಕೆ ಭೇಟಿ ನೀಡಲು ಹೇಗೆ ಸಾಧ್ಯ? ಈ ಭೂಗ್ರಹಕ್ಕೆ ಅವರ ಎರಡನೇ ಭೇಟಿಯನ್ನು ನಿರೀಕ್ಷಿಸೋಣವೇ?

ಸ್ವಾಮಿ ಚಿನ್ಮಯಾನಂದರ ಬಗ್ಗೆ ಹೇಳುವುದಾದರೆ, ಅವರು 77 ವರ್ಷಗಳ ಕಾಲ ಬದುಕಿದ್ದರು. ಹಾಗೂ ಅವರು ದೀರ್ಘಕಾಲ ಹೃದಯದ ಸಮಸ್ಯೆಯಿಂದ(ಹೃದ್ರೋಗದಿಂದ) ಬಳಲುತ್ತಿದ್ದರು ಹಾಗೂ ಅವರು ಅದೇ ಸಮಸ್ಯೆಯಿಂದ ಅಸುನೀಗಿದರು. ಅಮೇರಿಕಾದಲ್ಲಿ ಬೈಪಾಸ್ ಸರ್ಜರಿಯ ನಂತರ ಅವರು ನಿಧನರಾದರು. ಅವರ ಪಾರ್ಥಿವ ಶರೀರದ ಅಂತ್ಯ ಸಂಸ್ಕಾರ ನಡೆದ ಹಿಮಾಚಲ ಪ್ರದೇಶದಲ್ಲಿ ಅವರ ಮಹಾ ಸಮಾಧಿಯ ಸ್ಮಾರಕವನ್ನು ನಿರ್ಮಿಸಲಾಗಿದೆ.

ಈಗ ಸರಳ ಜೀವನ ಹೊಂದಿದ್ದ ಹಾಗೂ 82ನೇ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದ ಶ್ರೀ ಸಿದ್ದೇಶ್ವರ ಸ್ವಾಮಿಗಳ ವಿಚಾರದಲ್ಲಿ ಹೇಳುವುದಾದರೆ, ಅವರು ಅನಾರೋಗ್ಯ ಪೀಡಿತರಾಗಿದ್ದಾಗ ವಿರಕ್ತರು ಹಾಗೂ ಸ್ಥಿತಪ್ರಜ್ಞರಂತೆ ಕಂಡು ಬರುತ್ತಿದ್ದರು. ಕೆಲವು ದಿನಗಳು ಮಾತ್ರ ಆಸ್ಪತ್ರೆಯಲ್ಲಿ ಇದ್ದರು. ನಂತರ ಅವರು ವೈದ್ಯಕೀಯ ಚಿಕಿತ್ಸೆ ಹಾಗೂ ಮತ್ತೆ ಆಹಾರವನ್ನು ತ್ಯಜಿಸಿದರು. ವಾಸ್ತವವಾಗಿ, ಮಹಾಭಾರತದ ಭೀಷ್ಮಾಚಾರ್ಯ ಹಾಗೂ ಅನೇಕ ಜೈನ ಮುನಿಗಳ ಹಾಗೆ ಇಚ್ಛಾ ಮರಣವನ್ನು ನಮ್ಮ ಸಿದ್ದೇಶ್ವರ ಶ್ರೀಗಳು ಬಯಸಿದ್ದರು. ಓರ್ವ ನಿಜಯೋಗಿಯಂತೆ, ಯಾವುದೇ ಸದ್ದು–ಗದ್ದಲವಿಲ್ಲದೇ ಈ ಲೋಕವನ್ನು ತ್ಯಜಿಸಿದರು. ಆದರೆ ಅವರ ಲಕ್ಷ ಲಕ್ಷಗಟ್ಟಲೆ ಭಕ್ತರು ಅವರಿಗೆ ಅಂತಿಮ ನಮನ ಸಲ್ಲಿಸಲು ಸಮುದ್ರದ ಅಲೆಯ ರೀತಿಯಲ್ಲಿ ಬಂದರು. ನಿಜವಾಗಲೂ, ನಮ್ಮ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರು ಮನುಕುಲದ ಗುರು. ಮಹಾಗುರು.

ವೈದಿಕ ಧಾರ್ಮಿಕ ಕ್ರಿಯೆಗಳ ಪ್ರಕಾರ ಸ್ವಾಮಿ ಚಿನ್ಮಯಾನಂದರ ಪಾರ್ಥಿವ ಶರೀರದ ಅಂತ್ಯಸಂಸ್ಕಾರವನ್ನು ನೆರವೇರಿಸಲಾಯಿತು. ಓಶೋ ರಜನೀಶ್ ಅವರ ಪಾರ್ಥಿವ ಶರೀರವನ್ನು ಆತುರಾತುರವಾಗಿ ನೆರವೇರಿಸಲಾಯಿತು ಹಾಗೂ ಭಸ್ಮವನ್ನು ಆಶ್ರಮದಲ್ಲಿ ಹೊಸದಾಗಿ ನಿರ್ಮಿಸಲಾದ ಮಲಗುವ ಕೋಣೆಯಲ್ಲಿ ಇರಿಸಿ ಈ ಮೊದಲು ಹೇಳಲಾದ ರೀತಿ ಗೋರಿ ಮೇಲೆ ಬರೆದಿದ್ದರು. ಆದರೆ, ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ ಚಿತಾಭಸ್ಮವನ್ನು ಅವರ ಇಚ್ಛೆಯಂತೆ ನದಿಯಲ್ಲಿ ವಿಸರ್ಜಿಸಲಾಯಿತು.

ಈ ಸಂತರ, ಸನ್ಯಾಸಿಗಳ, ದೇವ ಮಾನವರ ಹಾಗೂ ಯೋಗಿಗಳ ಸಾವಿನ ಬಗ್ಗೆ ನಾನು ಚರ್ಚಿಸುತ್ತಿದ್ದಾಗ ಒಬ್ಬ ಮಿತ್ರ ಕೇಳಿದ "ಇವರ ಪೈಕಿ ಯಾರೂ ದೇಹವನ್ನು ವೈದ್ಯಕೀಯ ಕಾಲೇಜುಗಳಿಗೆ ದಾನ ಮಾಡಲು ಏಕೆ ಹೇಳಲಿಲ್ಲ? ಅದು ವೈದ್ಯಕೀಯ ಜ್ಞಾನವರ್ಧನೆಗೆ ಪ್ರಯೋಜನವಾಗತ್ತಿತ್ತಲ್ಲ?

ಅಂದ ಹಾಗೆ, ಮನುಷ್ಯನೇ ಈ ಭೂಮಿಯಲ್ಲಿ ತ್ಯಾಜ್ಯವನ್ನು ಸೃಷ್ಟಿಸುವ ಅತೀ ದೊಡ್ಡ ಸೃಷ್ಟಿಕರ್ತ ಎಂಬುದಾಗಿ ನಾನು ಭಾವಿಸಿದ್ದೇನೆ. ಸರ್ಕಾರಗಳು ಹಾಗೂ ಸಾಮಾಜಿಕ ಕಾರ್ಯಕರ್ತರು ಮನುಷ್ಯರಿಂದ ಸೃಷ್ಟಿಯಾದ ತ್ಯಾಜ್ಯವನ್ನು ವಿಲೇವಾರಿ ಮಾಡಲು ಹಾಗೂ ಗೃಹ ಮತ್ತು ಕೈಗಾರಿಕಾ ತ್ಯಾಜ್ಯಗಳ ಮೇಲೆ ನಿಗಾ ಇಡಲು ಕಾರ್ಯತತ್ಪರವಾಗಿವೆ. ಅದೃಷ್ಟವಶಾತ್, ಮನುಷ್ಯನೊಬ್ಬ ಸತ್ತಾಗ, ಆತ ಅತೀ ಬೇಗ ಕೊಳೆತು ಹೋಗುವ ತ್ಯಾಜ್ಯವಾಗುತ್ತಾನೆ. ಹೀಗಾಗಿ, ಯಾವುದೇ ಸಮಸ್ಯೆ ಇಲ್ಲ. ಆದರೂ, ಶವವನ್ನು ದಹಿಸಿದ ನಂತರ ಚಿತಾಭಸ್ಮವನ್ನು ಸಂಗ್ರಹಿಸಿ, ಸಂರಕ್ಷಿಸಲಾಗುತ್ತದೆ ಇಲ್ಲವೇ ನದಿಗಳಲ್ಲಿ ವಿಸರ್ಜಿಸಲಾಗುತ್ತದೆ. ಇದನ್ನು ಚರ್ಚಿಸುತ್ತಿದ್ದಾಗ, ಸ್ನೇಹಿತನೊಬ್ಬ ಮಧ್ಯೆ ಪ್ರವೇಶಿಸಿ, ತಾನು ಉಯಿಲೊಂದನ್ನು (will) ಬರೆದು, ತನ್ನ ಧರ್ಮದ ಧಾರ್ಮಿಕ ವಿಧಿ ವಿಧಾನಗಳಿಗೆ ಸಂಪೂರ್ಣ ವಿರುದ್ಧವಾಗಿ ತನ್ನ ಪಾರ್ಥಿವ ಶರೀರವನ್ನು ದಹಿಸಲು ಕೋರುವುದಾಗಿಯೂ, ಚಿತಾಭಸ್ಮವನ್ನು ಸಸ್ಯಗಳಿಗೆ ಗೊಬ್ಬರವಾಗಿ ಬಳಸುವಂತೆ ಕೋರುವುದಾಗಿಯೂ ಹೇಳಿ, ಯಾವುದೇ ಕಾರಣಕ್ಕೂ ಚಿತಾಭಸ್ಮವನ್ನು ಪವಿತ್ರ ಇಲ್ಲವೇ ಕಲುಷಿತ ನದಿಗಳಲ್ಲಿ ವಿಸರ್ಜಿಸದಿರುವಂತೆ ಮನವಿ ಮಾಡುವುದಾಗಿ ಹೇಳಿದರು. ಅಷ್ಟಕ್ಕೂ, ಬೂದಿಯು ಒಳ್ಳೆಯ ಗೊಬ್ಬರವಲ್ಲವೇ.

ಓಂ ಶಾಂತಿ... ಶಾಂತಿ... ಶಾಂತಿ...

(ಮೂಲ ಇಂಗ್ಲಿಷ್ ಲೇಖನದ ಕನ್ನಡ ಅನುವಾದ)

email: voice@starofmysore.com

ಮೈಸೂರು ನಗರಪಾಲಿಕೆ ಸಿಬ್ಬಂದಿಯ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ



ಮೈಸೂರು.ಜ.21(ಎಂಕೆ)– ಮೈಸೂರು ಮಹಾನಗರ ಪಾಲಿಕೆ ನೌಕರರ ಸಂಘದ ವತಿಯಿಂದ ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಉತ್ತಮ ಅಂಕಗಳನ್ನು ಪಡೆದ ಪಾಲಿಕೆ ಸಿಬ್ಬಂದಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಅಭಿನಂದಿಸಲಾಯಿತು.

ನಗರಪಾಲಿಕೆ ಸಭಾಂಗಣದಲ್ಲಿ ಶನಿವಾರ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಾದ ಕೆ.ರೋಹನ್, ಆರ್. ಭುವನ್, ಆರ್.ಟಿ.ಸಂಜನಾ, ಎಸ್. ಉತ್ಸವ್, ಬಿ.ಸ್ನೇಹಾ, ಆರ್.ಶ್ರೇಯಸ್, ಎಸ್.ಇಶಾ, ಎ.ಎಂ.ಭರತ್, ಜಿ.ಎಸ್.ನಿಸರ್ಗ, ಬಿ.ಇಂಚರಾ, ಸಿ.ಅನು, ಎಂ.ಭರತ್, ಎಂ.ಕೆ.ಹಿತೇಶ್, ಎಂ.ದೀಕ್ಷಿತ್‌ಕುಮಾರ್, ವಿನಯ್ ಎಸ್.ಯಾದವ್, ಎಸ್.ಲಿಖಿತ, ಎಂ.ದೀಪಿಕಾ, ಎಂ.ಎನ್.ಶಿಲ್ಪಾ, ವಿ. ನಯನಾ, ಡಿ.ಮಾನಸ, ಎಸ್.ಅಪೂರ್ವ, ವಿ.ಗಗನ, ಎಂ.ಸುರಭಿ, ಹೆಚ್.ವಿ.ರಚನಾ, ಎನ್.ಮಹೇಂದ್ರ ಹಾಗೂ ಜೆ.ಪ್ರಿಯಾಂಕ ಅವರಿಗೆ ಮೇಯರ್ ಶಿವಕುಮಾರ್, ಪ್ರತಿಭಾ ಪುರಸ್ಕಾರ ನೀಡಿದರು.

ಬಳಿಕ ಮೇಯರ್ ಶಿವಕುಮಾರ್ ಮಾತನಾಡಿ, ಇದೊಂದು ಪ್ರೇರಣಾದಾಯಕ ಕಾರ್ಯಕ್ರಮವಾಗಿದೆ. ತಂದೆ–ತಾಯಿ ಪರಿಶ್ರಮ, ವಿದ್ಯಾರ್ಥಿಗಳ ಸಾಧನೆ ಮೂಲಕ ವ್ಯಕ್ತವಾಗಿದೆ. ಏಳಿ, ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ ಎಂಬ ವಿವೇಕಾನಂದರ ನುಡಿಯಂತೆ ವಿದ್ಯಾರ್ಥಿಗಳು ಗುರಿಗಳನ್ನು ಮುಟ್ಟಬೇಕಾದರೆ ಕಠಿಣ ಪರಿಶ್ರಮ ಮುಖ್ಯವಾಗಿದೆ ಎಂದರು.

ಪರೀಕ್ಷೆ ಸಂದರ್ಭದಲ್ಲಿ ರಾತ್ರಿಯಿಡೀ ಓದುತ್ತೀರಿ. ಬೆಳಗಾದರೆ ಏನೂ ಜ್ಞಾಪಕದಲ್ಲಿ ಇರುವುದಿಲ್ಲ. ಇದಕ್ಕೆ ಕಾರಣ ಮಾನಸಿಕ ಒತ್ತಡ. ಆದ್ದರಿಂದ ಪ್ರತಿನಿತ್ಯ ಯೋಗಾಭ್ಯಾಸ ಮಾಡಬೇಕು. ದೈಹಿಕ ಮತ್ತು ಮಾನಸಿಕವಾಗಿ ಆರೋಗ್ಯವಾಗಿದ್ದರೆ ಸಾಧನೆಗೆ ಸಹಕಾರಿಯಾಗುತ್ತದೆ. ಓದಿನಲ್ಲಿ ಏಕಾಗ್ರತೆ ಹೆಚ್ಚಾಗುವುದರಿಂದ ಬುದ್ಧಿಶಕ್ತಿ ಚುರುಕಾಗುತ್ತದೆ. ಅಲ್ಲದೆ ಎಂತಹ ಸಂದರ್ಭ ಎದುರಾದರೂ ಸಮಚಿತ್ತ ಮನಸ್ಸಿನಿಂದ ಸ್ವೀಕರಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಉಪ ಮೇಯರ್ ಡಾ.ರೂಪ, ಮಾಜಿ ಉಪ ಮೇಯರ್ ಅಫ್ರಾಜ್ ಅಹಮದ್, ಮೈಸೂರು ಮಹಾನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಶಂಭು, ಉಪಾಧ್ಯಕ್ಷ ರವಿಶಂಕರ್, ಕಾರ್ಯದರ್ಶಿ ಶಿವಕುಮಾರ್, ಖಜಾಂಚಿ ಮುಟ್ಟಸ್ವಾಮಿ, ಪಾಲಿಕೆ ಆಯುಕ್ತರ ಆಪ್ತ ಸಹಾಯಕ ಬಸವಣ್ಣ ಹಾಗೂ ಸಂಘದ ನಿರ್ದೇಶಕರು, ಸದಸ್ಯರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಸ್ಪರ್ಧಾತ್ಮಕ ಪರೀಕ್ಷೆಗೆ 295 ಹಾಜರಿ, 373 ಮಂದಿ ಗೈರು

ಮೈಸೂರು, ಜ.21(ಆರ್‌ಕೆ)–ಕೆಪಿಎಸ್ಸಿಯಿಂದ ಮೈಸೂರಿನಲ್ಲಿ ಪೌರಾಡಳಿತ ನಿರ್ದೇಶನಾಲಯದ 'ಸಿ' ಗ್ರೂಪ್ ಹುದ್ದೆಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಸಹಾಯಕ ನಗರ ಯೋಜಕರ ಹುದ್ದೆಗಳಿಗಾಗಿ ಇಂದು ನಡೆದ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಿಗಿಂತ ಹೆಚ್ಚು ಮಂದಿ ಗೈರಾಗಿದ್ದರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಜ ಸರ್ಕಾರಿ ಪಿಯು ಕಾಲೇಜು ಮತ್ತು ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ನಡೆದ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಗೆ 668 ಮಂದಿ ನೋಂದಾಯಿಸಿಕೊಂಡಿದ್ದರಾದರೂ, ಕೇವಲ 295 ಮಂದಿ ಹಾಜರಾಗಿ 373 ಮಂದಿ ಗೈರು ಹಾಜರಾದರು ಎಂದು ಪರೀಕ್ಷಾ ಕಸ್ಟೋಡಿಯನ್ ಆಗಿರುವ ಎಡಿಸಿ ಆರ್.ಲೋಕನಾಥ್ ತಿಳಿಸಿದ್ದಾರೆ. ನಾಳೆ (ಭಾನುವಾರ) ಆಪ್ಟಿಟ್ಯೂಡ್ ಟೆಸ್ಟ್ ನಡೆಯಲಿದ್ದು, ಎರಡೂ ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಂಡಿದ್ದು, ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

ಜ.30ರಿಂದ ಆಟೋಮೇಷನ್ ತಂತ್ರಜ್ಞಾನ ಕುರಿತ ಕಾರ್ಯಾಗಾರ



ಮೈಸೂರು, ಜ.21(ಎಂಟಿವೈ)– ಎಂಜಿನಿಯರಿಂಗ್ ಕಾಲೇಜಿನ ಬೋಧಕ ಸಿಬ್ಬಂದಿ ಹಾಗೂ ವಿವಿಧ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಜನವರಿ 30ರಿಂದ ಫೆಬ್ರವರಿ 3ರವರೆಗೆ ಆಟೋಮೇಷನ್ ತಂತ್ರಜ್ಞಾನದಲ್ಲಿ ಇತ್ತೀಚಿನ ಬೆಳವಣಿಗೆ ಕುರಿತ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಎನ್‌ಐಇ ಕಾಲೇಜಿನ ಉಪ ಪ್ರಾಚಾರ್ಯ ಡಾ.ಎಂ.ಎಸ್. ಗಣೇಶ್‌ಪ್ರಸಾದ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮ(ಎಂಎಸ್‌ಎಂಇ) ಇಲಾಖೆ ಸಹಯೋಗದಲ್ಲಿ ಈ ಕಾರ್ಯಾಗಾರ ಆಯೋಜಿಸಲಾಗಿದೆ. ಎಂಎಸ್‌ಎಂಇ ವಲಯ ದೇಶದ ಜಿಡಿಪಿಗೆ ಅತೀ ದೊಡ್ಡ ಕೊಡುಗೆ ನೀಡುತ್ತಿದೆ. ಇದನ್ನು ಇನ್ನಷ್ಟು ಹೆಚ್ಚಿಸಲೆಂದು ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಪಠ್ಯ ಬೋಧನೆ ಜೊತೆಗೆ ಪ್ರಾಯೋಗಿಕ ತರಗತಿಗಳೂ ಇರಬೇಕೆಂಬ ಹಿನ್ನೆಲೆಯಲ್ಲಿ ಅವರಿಗೆ ನೂತನ ಬೆಳವಣಿಗೆ ಬೋಧಿಸಲು ಉಪನ್ಯಾಸಕರಿಗೆ ಈ ತರಬೇತಿ ಕಾರ್ಯಾಗಾರ ಆಯೋಜಿಸಲಾಗಿದೆ ಎಂದರು.

ತರಬೇತಿ ಪಡೆದ ಬೋಧಕರಿಂದ ಕಲಿತವರು ಮುಂಬರುವ ದಿನಗಳಲ್ಲಿ ತಾವೇ ನೂತನ ಉದ್ದಿಮೆ ಪ್ರಾರಂಭಿಸಲು ಅಥವಾ ಉದ್ಯಮಗಳಿಗೆ ಸೇರಲು ನೆರವಾಗುವಂತೆ ಕೌಶಲ್ಯ ತಿಳಿಸಿಕೊಡಲು ಈ ತರಬೇತಿ ಕಾರ್ಯಾಗಾರ ನೆರವಾಗಲಿದೆ. ಎನ್‌ಐಇ ಹಾಗೂ ವಿಟಿಯು ಸಭಾಂಗಣದಲ್ಲಿ ಈ ಕಾರ್ಯಾಗಾರ ನಡೆಯಲಿದೆ. ರಾಜ್ಯದ ವಿವಿಧೆಡೆಯಿಂದ ಸುಮಾರು 60 ಮಂದಿ ಉಪನ್ಯಾಸಕರಿಗೆ ಕಾರ್ಯಾಗಾರದಲ್ಲಿ ಪಾಲ್ಗೊಳ್ಳಲು ಅವಕಾಶವಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ.9036949487 ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ಎಂಎಸ್‌ಎಂಇ–ಡಿಎಫ್‌ಓ ಉಪನಿರ್ದೇಶಕ ಗೋಪಿನಾಥ್‌ರಾವ್, ಕಾರ್ಯಕ್ರಮ ಸಂಯೋಜಕ ಡಾ.ಪ್ರಸನ್ನ, ಸುರೇಶ್, ಡಾ.ಕೆ.ಆರ್.ಪ್ರಕಾಶ್, ಎಸ್.ಆರ್.ಗಾಯಕ್ವಾಡ್ ಉಪಸ್ಥಿತರಿದ್ದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ವಿಜಯ ಸಂಕಲ್ಪ ಅಭಿಯಾನ



ಮೈಸೂರು, ಜ.21(ಎಂಕೆ)– ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ರಮ್ಮನಹಳ್ಳಿಯಲ್ಲಿ ಬಿಜೆಪಿ ವಿಜಯ ಸಂಕಲ್ಪ ಅಭಿಯಾನ ನಡೆಸಲಾಯಿತು.

ಬಿಜೆಪಿ ಮುಖಂಡ ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ನಿಕಟಪೂರ್ವ ಅಧ್ಯಕ್ಷ ಎನ್.ಅರುಣ್ ಕುಮಾರ್‌ಗೌಡ ನೇತೃತ್ವದಲ್ಲಿ ನಡೆದ ಅಭಿಯಾನದಲ್ಲಿ ರಮ್ಮನಹಳ್ಳಿಯ ಮನೆ ಮನೆಗೆ ತೆರಳಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಾಧನೆಗಳನ್ನು ತಿಳಿಸಲಾಯಿತು. ಅಲ್ಲದೆ ಸರ್ಕಾರದ ಜನಪರ ಕಾರ್ಯಕ್ರಮಗಳ ಮಾಹಿತಿಯುಳ್ಳ ಕರಪತ್ರಗಳನ್ನು ವಿತರಿಸಿ, ಬಿಜೆಪಿ ಸದಸ್ಯರನ್ನಾಗಿಸಲಾಯಿತು. ಬಳಿಕ ಬಿಜೆಪಿ ಮುಖಂಡ ಎನ್.ಅರುಣ್ ಕುಮಾರ್‌ಗೌಡ ಮಾತನಾಡಿ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಬಲ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವು ನಿಶ್ಚಿತ ಎಂದರು. ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ, ಮಾಜಿ ಜಿಲ್ಲಾಧ್ಯಕ್ಷ ಎಸ್.ಡಿ. ಮಹೇಂದ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಾಣೀಶ್, ಮುಖಂಡರಾದ ಜಗದೀಶ್ ಗೌಡ, ನಂದಕುಮಾರ್, ಪೈಲ್ವಾನ್ ರವಿ, ಈರಪ್ಪ, ಲೋಹಿತ್, ಶ್ರೀಕಂಠ, ಜ್ಯೋತಿ, ಗ್ರಾಪಂ ಸದಸ್ಯೆ ಪ್ರಮೀಳಾ ನಾಯಕ್, ಮೋನಿಕಾ, ರಮೇಶ್, ನಾರಾಯಣ್, ಕೃಷ್ಣ ಕಳಸ್ತವಾಡಿ, ರಮ್ಮನಹಳ್ಳಿ ನಾಗರಾಜು, ಸಂಜಯ್, ವೇಣು, ಜೈ ಶಂಕರ್ ಉಪಸ್ಥಿತರಿದ್ದರು.

ನಾಳೆ ಕುವೆಂಪು ಅಂಡ್ ವರ್ಡ್ಸ್‌ವರ್ತ್: ತುಲನಾತ್ಮಕ ವಿಶ್ಲೇಷಣೆ

ಮೈಸೂರು,ಜ.21– ಮೈಸೂರು ವಿಶ್ವವಿದ್ಯಾಲಯದ ಮಾನಸಗಂಗೋತ್ರಿಯ ಇಂಗ್ಲಿಷ್ ಅಧ್ಯಯನ ವಿಭಾಗ ಮತ್ತು ಲಿಟ್ರಸಿ ಕ್ಲಬ್ ವತಿಯಿಂದ ಇಂಗ್ಲೀಷ್ ವಿಭಾಗದ ಸಭಾಂಗಣದಲ್ಲಿ ಕುವೆಂಪು ಮತ್ತು ವರ್ಡ್ಸ್‌ವರ್ತ್: ಒಂದು ತುಲನಾತ್ಮಕ ವಿಶ್ಲೇಷಣೆ ಕುರಿತು ಜ.23ರಂದು ಬೆಳಗ್ಗೆ 11.30 ಗಂಟೆಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.


ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ವಿವಿ ಇಂಗ್ಲಿಷ್ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ಮುಜಾಫರ್ ಅಸ್ಸಾದಿ ವಹಿಸಲಿದ್ದು, ವಿಶೇಷ ಭಾಷಣಕಾರರಾಗಿ ರಾಣಿ ಚೆನ್ನಮ್ಮ ವಿವಿ ಸಹಾಯಕ ಪ್ರಾಧ್ಯಾಪಕರಾದ ಡಾ.ಕವಿತಾ ಭಾಗವಹಿಸಲಿದ್ದಾರೆ.

ಸಿಂಧಗಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಶಿವಾನಂದ ಪಾಟೀಲ್ ನಿಧನ



ವಿಜಯಪುರ, ಜ.21– ವಿಜಯಪುರ ಜಿಲ್ಲೆಯ ಸಿಂಧಗಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಶಿವಾನಂದ ಪಾಟೀಲ್ ಸೋಮಜಾಳ ಅವರು ಶುಕ್ರವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ. ಇಂದು ವಿಜಯಪುರದಲ್ಲಿ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ನಡೆದ ಜೆಡಿಎಸ್ ಪಂಚರತ್ನ ರಥಯಾತ್ರೆಯಲ್ಲಿ ಭಾಗವಹಿಸಿದ್ದ ಅವರು ಮಧ್ಯಾಹ್ನ ಸಿಂಧಗಿಗೆ ತೆರಳಿದ್ದರು. ಸಿಂಧಗಿಯಲ್ಲಿ ಪರಿಚಯಸ್ಥರ ಮನೆಯಲ್ಲಿ ಮಾತನಾಡುತ್ತಾ ಕುಳಿತಿದ್ದಾಗ ಏಕಾಏಕಿ ಕುಸಿದು ಬಿದ್ದಿದ್ದಾರೆ. ತಕ್ಷಣ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಆದರೆ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ.

54 ವರ್ಷದ ಶಿವಾನಂದ ಪಾಟೀಲ್ ಅವರು ಪತ್ನಿ, ಓರ್ವ ಪುತ್ರ ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ. ಭಾರತೀಯ ಸೇನೆಯಲ್ಲಿ 16 ವರ್ಷ ಸೇವೆ ಸಲ್ಲಿಸಿದ್ದ ಮಾಜಿ ಯೋಧ ಶಿವಾನಂದ ಪಾಟೀಲ್ ಅವರು ಇತ್ತೀಚೆಗೆ ರಾಜಕೀಯದೊಂದಿಗೆ ಸಮಾಜ ಸೇವೆಯಲ್ಲಿ ತೊಡಗಿದ್ದರು. ವಿಧಾನಸಭೆ ಚುನಾವಣೆಗೆ ಜೆಡಿಎಸ್ ಬಿಡುಗಡೆ ಮಾಡಿದ್ದ ಅಭ್ಯರ್ಥಿಗಳ ಮೊದಲ ಪಟ್ಟಿಯಲ್ಲಿ ಅವರಿಗೆ ಟಿಕೆಟ್ ಘೋಷಿಸಲಾಗಿತ್ತು.



ಶತಾಯುಷಿ ನಿಂಗಮ್ಮ

ಹಾಸನ,ಜ.21–ಜಿಲ್ಲೆಯ ಅರಕಲಗೂಡು ತಾಲೂಕು ಕೊಣನೂರು ಹೋಬಳಿ ಶೀಗೋಡು ಗ್ರಾಮದ ದಿವಂಗತ ನಿರ್ವಾಣಯ್ಯ ಅವರ ಧರ್ಮಪತ್ನಿ ಶತಾಯುಷಿ ನಿಂಗಮ್ಮ(102)ನವರು ಶುಕ್ರವಾರ ರಾತ್ರಿ ನಿಧನರಾದರು. ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮದಲ್ಲಿ ಶನಿವಾರ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಫುಟ್ಬಾಲ್ ಆಟಗಾರ ಹೆನ್ರಿ ನಿಧನ



ಮೈಸೂರಿನ ಲೂರ್ದು ನಗರ ನಿವಾಸಿ, ರೈಲ್ವೇ ಮಾಜಿ ನೌಕರರು ಹಾಗೂ ಇಂಡಿಯನ್ ರೈಲ್ವೇ ಫುಟ್ಬಾಲ್ ಆಟಗಾರ ಆದ ಹೆನ್ರಿ(57) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಸಹೋದರರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಉದಯಗಿರಿ ಮುಖ್ಯ ರಸ್ತೆಯಲ್ಲಿರುವ ಕ್ರಿಶ್ಚಿಯನ್ ರುದ್ರಭೂಮಿಯಲ್ಲಿ ಶನಿವಾರ ಅಂತ್ಯಸಂಸ್ಕಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಚನಗಳು ಸಮಾಜದ ನಿರ್ಮಾಣಕ್ಕೆ ಉಪಯುಕ್ತ

ಶ್ರೀ ಅಂಬಿಗರ ಚೌಡಯ್ಯ ಮತ್ತು ವೇಮನ ಜಯಂತಿಯಲ್ಲಿ ಮೇಯರ್ ಶಿವಕುಮಾರ್ ಅಭಿಮತ



ಮೈಸೂರು, ಜ.21– ಅಂಬಿಗರ ಚೌಡಯ್ಯನವರು ಮತ್ತು ವೇಮನ ಇಬ್ಬರು ವಿಚಾರವಂತ ವಚನಕಾರರು. ಇವರು ರಚಿಸಿರುವ ಎಷ್ಟೋ ವಚನಗಳು ಸಮಾಜದ ನಿರ್ಮಾಣಕ್ಕೆ ಉಪಯುಕ್ತವಾದ ಅಂಶಗಳಿಂದ ಕೂಡಿವೆ. ಇವುಗಳನ್ನು ನಮ್ಮ ಜೀವನಕ್ಕೆ ಅಳವಡಿಸಿಕೊಳ್ಳಬೇಕು ಎಂದು ಮಹಾನಗರ ಪಾಲಿಕೆ ಮೇಯರ್ ಶಿವಕುಮಾರ್ ತಿಳಿಸಿದರು.

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಕಲಾಮಂದಿರದಲ್ಲಿ ಹಮ್ಮಿಕೊಂಡಿದ್ದ ನಿಜ ಶರಣ ಶ್ರೀ ಅಂಬಿಗರ ಚೌಡಯ್ಯ ಮತ್ತು ಮಹಾಯೋಗಿ ವೇಮನ ಜಯಂತಿಯನ್ನು ಉದ್ಘಾಟಿಸಿ, ಮಾತನಾಡಿದರು. ಅಂಬಿಗರ ಚೌಡಯ್ಯನವರು ಸಮುದ್ರದ ನೀರಿನ ಹಾಗೆ ಆಕಾಶಕ್ಕೆ ಏರಿ ಮಳೆಯ ನೀರಾಗಿ ಪರಿವರ್ತನೆಯಾಗಬೇಕು ಎಂಬ ವಚನವನ್ನು ಅರ್ಥಪೂರ್ಣವಾಗಿ ಹೇಳಿದ್ದಾರೆ ಎಂದರು.

ರಾಜಕೀಯವಾಗಲಿ, ವಾಸ್ತವವಾಗಲಿ ಜಾತಿಗಳು ಮತ್ತು ಸಮುದಾಯಗಳು ಒಗ್ಗಟ್ಟಾಗಿ ನಿಲ್ಲುವುದರಿಂದ ಮಾತ್ರ ನಮಗೆ ಹೆಚ್ಚಿನ ಆದ್ಯತೆ ದೊರೆಯುತ್ತದೆ. ಆದ್ದರಿಂದ ಒಗ್ಗಟ್ಟಾಗಿ ಸಮಾಜವನ್ನು ಒಳ್ಳೆಯ ಮಾರ್ಗದಲ್ಲಿ ನಡೆಸುವ ಕಾರ್ಯವನ್ನು ಮಾಡಬೇಕು ಎಂದ ಅವರು, ಅಂಬಿಗರ ಚೌಡಯ್ಯನವರ ಹೆಸರನ್ನು ಅತೀ ಶೀಘ್ರದಲ್ಲೇ ಮೈಸೂರಿನ ಪ್ರಮುಖ ರಸ್ತೆಗೆ ನಾಮಕರಣ ಮಾಡಲಾಗುವುದು ಎಂದರು.

ಕಾರ್ಯಕ್ರಮದ ಪ್ರಮುಖ ಭಾಷಣಕಾರರಾದ ಕೆ.ಎಸ್.ರಾಮ್‌ಪ್ರಸಾದ್, ಅಂಬಿಗರ ಚೌಡಯ್ಯ ಮತ್ತು ವೇಮನ ಅವರ ಜೀವನ ಚರಿತ್ರೆ ಪ್ರಮುಖ ವಚನಗಳು ಹಾಗೂ ಸಂಬಂಧಿತ ವಿಚಾರಗಳ ಬಗ್ಗೆ ತಿಳಿಸಿದರು. ಶಿವಶರಣರಲ್ಲೇ ಅಂಬಿಗರ ಚೌಡಯ್ಯ ಅವರು ಅತ್ಯಂತ ಪ್ರಮುಖರು. ಅಂಬಿಗರ ಚೌಡಯ್ಯ ಅವರು ಹಿಂದುಳಿದ ಜಾತಿಯವರಿಗೋಸ್ಕರ ನಡೆಸಿದ್ದ ಹೋರಾಟ ಹಾಗೂ ಅಂಬಿಗರ ಚೌಡಯ್ಯನವರು ಪರಿಶಿಷ್ಟ ಜಾತಿಯವರ ಬಗ್ಗೆ ನುಡಿದ ವಚನದ ಅರ್ಥವನ್ನು ತಿಳಿಸಿಕೊಟ್ಟರು.

ಆಂಧ್ರಪ್ರದೇಶದಲ್ಲಿ ವ್ಯಭಿಚಾರಿಯಾದ್ದ ವೇಮನ ಜೀವನದಲ್ಲಿ ನಡೆದ ಹಲವು ಘಟನೆಗಳಿಂದ ಬದಲಾಗಿ ವೈರಾಗ್ಯವನ್ನು ಪಡೆದ ವಿಚಾರವನ್ನು ತಿಳಿಸಿದರು. ಈ ಇಬ್ಬರು ಶಿವಶರಣರು ಮತ್ತು ವಚನಕಾರರ ವಿಚಾರವಂತಿಕೆಗಳನ್ನು ಜೀವನದ ಅಡಿಪಾಯಕ್ಕೆ ಅಳವಡಿಸಿಕೊಳ್ಳಿ ಎಂದರು.

ಕಾರ್ಯಕ್ರಮದಲ್ಲಿ ನಗರಪಾಲಿಕೆ ಉಪ ಮೇಯರ್ ಡಾ.ಜಿ.ರೂಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಇ.ಸುದರ್ಶನ್ ಸೇರಿದಂತೆ ಸಮುದಾಯಗಳ ಮುಖಂಡರು ಉಪಸ್ಥಿತರಿದ್ದರು.

ಇಂದು ಪಶು ಚಿಕಿತ್ಸಾಲಯ ಕಟ್ಟಡ ಉದ್ಘಾಟನೆ

ಮೈಸೂರು,ಜ.21– ಮೈಸೂರು ಜಿಲ್ಲಾ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ವತಿಯಿಂದ ಜ.22ರಂದು ಮಧ್ಯಾಹ್ನ 3 ಗಂಟೆಗೆ ನಂಜನಗೂಡು ತಾಲೂಕಿನ ಸುತ್ತೂರಿನ ಪಶುಚಿಕಿತ್ಸಾಲಯದ ನೂತನ ಕಟ್ಟಡವನ್ನು ಪಶು ಸಂಗೋಪನೆ ಸಚಿವ ಪ್ರಭು ಬಿ.ಚೌವ್ಹಾಣ್ ಉದ್ಘಾಟಿಸಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಡಾ.ಯತೀಂದ್ರ ವಹಿಸಲಿದ್ದು, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ಸಂಸದ ವಿ.ಶ್ರೀನಿವಾಸ್‌ಪ್ರಸಾದ್, ಶಾಸಕರಾದ ಹರ್ಷವರ್ಧನ್, ಡಾ.ತಿಮ್ಮಯ್ಯ, ಮಧು ಜಿ.ಮಾದೇಗೌಡ, ಹೆಚ್. ವಿಶ್ವನಾಥ್, ಸಿ.ಎನ್.ಮಂಜೇಗೌಡ ಸೇರಿದಂತೆ ನಿಗಮ ಮಂಡಳಿ ಅಧ್ಯಕ್ಷರು ಭಾಗವಹಿಸುವರು.

ಜಿಲ್ಲಾ ಸರ್ಕಾರಿ ಗೋಶಾಲೆ: ಜಿಲ್ಲಾ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ವತಿಯಿಂದ ಜ.22ರಂದು ಬೆಳಗ್ಗೆ 11.30ಕ್ಕೆ ಮೈಸೂರಿನ ವರುಣಾ ಹೋಬಳಿ ಆಯರಹಳ್ಳಿ ಗ್ರಾಮದಲ್ಲಿ ಜಿಲ್ಲಾ ಸರ್ಕಾರಿ ಗೋಶಾಲೆ ಉದ್ಘಾಟನೆಯನ್ನು ಪಶು ಸಂಗೋಪನೆ ಸಚಿವ ಪ್ರಭು ಬಿ.ಚೌವ್ಹಾಣ್ ನೆರವೇರಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವರುಣಾ ಶಾಸಕ ಡಾ.ಯತೀಂದ್ರ ವಹಿಸಲಿದ್ದಾರೆ.

ಶಕ್ತಿ ನಗರದಲ್ಲಿ ಬಿಜೆಪಿ ವಿಜಯ ಸಂಕಲ್ಪ ಅಭಿಯಾನ



ಮೈಸೂರು, ಜ.21–ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾಧನೆಗಳನ್ನು ಕ್ಷೇತ್ರದ ಪ್ರತಿ ಮನೆ ಮನೆಗೆ ತಿಳಿಸಿ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಭಗವಂತ ಖೂಬಾ ಬಿಜೆಪಿ ಕಾರ್ಯಕರ್ತರಿಗೆ ಕರೆ ನೀಡಿದರು.

ಶಕ್ತಿನಗರದಲ್ಲಿ ಬಿಜೆಪಿ ವಿಜಯ ಸಂಕಲ್ಪ ಅಭಿಯಾನದಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಸಾಧನೆಗಳ ಕರಪತ್ರವನ್ನು ಮನೆಗಳಿಗೆ ನೀಡಿದರೆ, ಸಾಲದು ಅವರ ಮುಂದೆ ಅದನ್ನು ಓದಿ ಅದನ್ನು ಅರ್ಥೈಸಿ, ಅವರನ್ನು ಬಿಜೆಪಿಗೆ ಸೇರ್ಪಡೆಗೊಳ್ಳುವಂತೆ ಮಾಡಬೇಕು ಎಂದರು.


ಈ ಹಿಂದೆ ಕಾಂಗ್ರೆಸ್ ಅವಧಿಯಲ್ಲಿ ದೇಶ ಅನೇಕ ಸಂಕಷ್ಟಗಳಿಂದ ಮುಳುಗಿತ್ತು. ಆದರೆ, ಮೋದಿ ಅವರು ಅಧಿಕಾರ ವಹಿಸಿಕೊಂಡ ನಂತರ ದೇಶದ ಜನತೆಗೆ ಆಹಾರ ಭದ್ರತೆ ನೀಡಿದ್ದಾರೆ. ಅಲ್ಲದೆ, ಸಾಂಕ್ರಾಮಿಕ ರೋಗ ಕೋವಿಡ್ ಸಂದರ್ಭವನ್ನು ಉತ್ತಮವಾಗಿ ನಿಭಾಯಿಸಿ ಬೇರೆ ದೇಶಗಳಿಗೂ ಮಾದರಿಯಾಗಿದ್ದಾರೆ. ಈ ಎಲ್ಲಾ ಅಂಶಗಳನ್ನು ಜನತೆಗೆ ತಲುಪಿಸಿ ಎಂದರು. ಕಾರ್ಯಕ್ರಮದಲ್ಲಿ ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಪ್ರಧಾನ ಕಾರ್ಯದರ್ಶಿ ಗಿರಿಧರ್, ಮುಖಂಡರಾದ ಸಂದೇಶ್ ಸ್ವಾಮಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ಚಾಮರಾಜ ಕ್ಷೇತ್ರದ ವಾರ್ಡ್ 22ರ ಪಡುವಾರಹಳ್ಳಿಯಲ್ಲಿ ನಡೆದ ಬಿಜೆಪಿ ವಿಜಯ ಸಂಕಲ್ಪ ಅಭಿಯಾನದಲ್ಲಿ ಮನೆ ಮನೆಗೆ ಭೇಟಿ ನೀಡಿ ಕರಪತ್ರ ತಲುಪಿಸಲಾಯಿತು ಈ ವೇಳೆ ಪಾಲಿಕೆ ಸದಸ್ಯ ಎಂ.ಚಿಕ್ಕವೆಂಕಟು, ವಾರ್ಡ್ ಬಿಜೆಪಿ ಅಧ್ಯಕ್ಷ ಎಲ್.ಮಂಜು, ಆಶ್ರಯ ಸಮಿತಿ ಸದಸ್ಯ ಮಹೇಶ್, ಅಭಿಯಾನದ ಸಂಚಾಲಕ ಕಾರ್ತಿಕ್, ಸಹಸಂಚಾಲಕ ಮಧು, ಮುಖಂಡರಾದ ಸಿಡಿ ಕುಮಾರ್, ಬಸವರಾಜ್, ವೇಣು, ಗೋಪಾಲ, ನಿಂಗಣ್ಣ, ಗುರು, ಗಿರೀಶ್, ಲಿಂಗಣ್ಣ, ಕೆಂಪಣ್ಣ, ಸಂತೋಷ್, ಸ್ವಾಮಿ, ಮಹಿಳಾ ಮುಖಂಡರಾದ ಸುಧಾ ರಾಮಚಂದ್ರ, ಸುಧಾ ಬೋರಪ್ಪ, ಛಾಯಾ ಇನ್ನಿತರರು ಉಪಸ್ಥಿತರಿದ್ದರು.

ಬಿಜೆಪಿ 130 ಸ್ಥಾನ ಗೆಲ್ಲುವುದು ನಿಶ್ಚಿತ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವಾಸ



ಬೆಂಗಳೂರು, ಜ.21 (ಕೆಎಂಶಿ)– ಭಾರತೀಯ ಜನತಾ ಪಕ್ಷ ಸಂಪೂರ್ಣ ಬಹುಮತ ಅಂದರೆ 130 ಸ್ಥಾನಗಳನ್ನು ಗಳಿಸಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಈಗಾಗಲೇ ಕೇಂದ್ರ ಸಚಿವ ಅಮಿತ್ ಶಾ ಅವರು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಚುನಾವಣೆ ಎದುರಿಸುವುದು ಎಂದು ಹೇಳಿದ್ದಾರೆ. ಅದರರ್ಥ ಕೇವಲ ಮುಖ್ಯಮಂತ್ರಿಯಲ್ಲ, ನಮ್ಮ ಸಂಪೂರ್ಣ ತಂಡ, ಪಕ್ಷ ಹಾಗೂ ಸರ್ಕಾರದ ಎಲ್ಲಾ ಪ್ರಮುಖರು ಸೇರಿ ಶ್ರಮಿಸುತ್ತೇವೆ. ಚುನಾವಣೆ ಎನ್ನುವುದು ಎಲ್ಲರೂ ಸೇರಿ ಮಾಡಬೇಕು ಎನ್ನುವ ಸತ್ಯದ ಅರಿವಿನಿಂದ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದರು.

ವಿಜಯ ಸಂಕಲ್ಪ ಯಾತ್ರೆ ಇಡೀ ರಾಜ್ಯದಲ್ಲಿ ಆಗುತ್ತಿದ್ದು, ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ವಿಜಯಪುರದ ಇಂಡಿ ತಾಲೂಕಿನಲ್ಲಿ ನಡೆಯುವ ಯಾತ್ರೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರು ಕೂಡ ಮತ್ತೊಂದೆಡೆ ಭಾಗವಹಿಸುತ್ತಿದ್ದಾರೆ. ಪಕ್ಷದ ಪ್ರಮುಖರೆಲ್ಲರೂ ವಿವಿಧೆಡೆ ಭಾಗವಹಿಸುತ್ತಿದ್ದಾರೆ. ಮನೆ ಮನೆಗೆ ಅಭಿಯಾನ ಕೈಗೊಂಡು ರಾಜ್ಯ ಮತ್ತು ಕೇಂದ್ರ ಸರ್ಕಾರದ ಯೋಜನೆ ಹಾಗೂ ಸಾಧನೆಗಳ ಬಗ್ಗೆ ಜನರಿಗೆ ಮುಟ್ಟಿಸುವ ಕೆಲಸ ಮಾಡಲಾಗುತ್ತಿದೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ಹೇಳಿದರು.

ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವನ್ನು ಮುಗಿಸಲು ಕಾಂಗ್ರೆಸ್ ಮುಖಂಡರಿಗೆ 500 ಕೋಟಿ ರೂ. ನೀಡಲಾಗಿದೆ ಎಂದು ತೆಲಂಗಾಣ ಕಾಂಗ್ರೆಸ್ ಅಧ್ಯಕ್ಷರು ಆಪಾದನೆ ಮಾಡಿರುವ ಬಗ್ಗೆ ಮಾತನಾಡಿ, ಕಾಂಗ್ರೆಸ್‌ನವರೇ ಇದಕ್ಕೆ ಉತ್ತರ ಕೊಡಬೇಕು. ಕಾಂಗ್ರೆಸ್‌ನವರ ಆಪಾದನೆಗೆ ಕಾಂಗ್ರೆಸ್‌ನವರೇ ಸ್ಪಷ್ಟೀಕರಣ ನೀಡಬೇಕು. ಈ ಬಗ್ಗೆ ಖುಷಿಯಾಗುವ ಪ್ರಶ್ನೆಯಿಲ್ಲ. ನಾವು ಗೆಲ್ಲುವುದು ನಮ್ಮ ಶಕ್ತಿಯ ಆಧಾರದ ಮೇಲೆ, ಇನ್ನೊಬ್ಬರ ದುರ್ಬಲತೆಯ ಮೇಲೆ ಅಲ್ಲ. ಕಾಂಗ್ರೆಸ್ ಅಧ್ಯಕ್ಷರೇ ಇದನ್ನು ಹೇಳುವಾಗ ಕಾಂಗ್ರೆಸ್‌ನವರು ಇದನ್ನು ಮರೆಮಾಚುವ ಪ್ರಯತ್ನ ಮಾಡುತ್ತಿದ್ದಾರೆ ಅನ್ನಿಸುತ್ತದೆ. ಇದನ್ನು ಗಂಭೀರವಾಗಿ ಪರಿಗಣಿಸಿ ಸ್ಪಷ್ಟೀಕರಣ ನೀಡಬೇಕು. ಬೆಂಕಿ ಇಲ್ಲದೆ ಹೊಗೆಯಾಡುವುದಿಲ್ಲ ಎಂದರು.

ಸಚಿವ ಮಾಧುಸ್ವಾಮಿಯವರು ವೈಯಕ್ತಿಕ ಕಾರಣಗಳಿಂದ ಬೆಂಗಳೂರಿನಲ್ಲಿ ನಡೆದ ಪಕ್ಷದ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗಿಲ್ಲ ಎಂದು ಸ್ಪಷ್ಟಪಡಿಸಿದರು. ಫೆಬ್ರವರಿ ಮಾಹೆಯಲ್ಲಿ ದಾಸೋಹ ದಿನವನ್ನು ವಿಶಿಷ್ಟ ಕಾರ್ಯಕ್ರಮವಾಗಿ ಇಡೀ ರಾಜ್ಯದಲ್ಲಿ ಆಚರಣೆಯಾಗಬೇಕು. ದಾಸೋಹ ದಿನದ ಪ್ರಯುಕ್ತ ವಿಶೇಷವಾಗಿ ದೊಡ್ಡ ಪ್ರಮಾಣದಲ್ಲಿ ದಾಸೋಹ ಮಂಟಪಗಳು ಮಠಮಾನ್ಯಗಳಲ್ಲಿ ಆಗಬೇಕು. ಇದರ ಆಚರಣೆಗೆಂದು ರಜೆ ಘೋಷಿಸುವುದಿಲ್ಲ. ಆದರೆ ಗೌರವ ಸಲ್ಲಿಸುವ ಕೆಲಸ ಮಾಡಲಾಗುವುದು. ಬಸವಣ್ಣ ಹಾಗೂ ಶಿವಕುಮಾರ ಸ್ವಾಮೀಜಿಗಳು ಕಾಯಕ ತತ್ವವನ್ನು ಪ್ರತಿಪಾದಿಸಿದ್ದು, ಅದರಂತೆ ನಾವು ನಡೆಯುತ್ತೇವೆ. ಸ್ವಾಮೀಜಿ ಹುಟ್ಟೂರಿನಲ್ಲಿ ಅವರ ಪ್ರತಿಮೆ ಸ್ಥಾಪನೆ ಕುರಿತು ಪರಿಶೀಲಿಸಿದ್ದು, ಅದಕ್ಕೆ ವೇಗ ನೀಡಲಾಗುತ್ತಿದೆ ಎಂದರು.

ಇಂದು ಸಿಎಂ ಮೈಸೂರಿಗೆ

ಮೈಸೂರು, ಜ.21– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜ.22ರಂದು ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಮಧ್ಯಾಹ್ನ 12.20ಕ್ಕೆ ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆಯಿಂದ ಉಚಿತ ಅಸ್ತಮಾ ತಪಾಸಣೆ ಶಿಬಿರ

ಮೈಸೂರು,ಜ.21(ಪಿಎಂ)– ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಜ.23ರಿಂದ 28ರವರೆಗೆ ಉಚಿತ ಅಸ್ತಮಾ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಶ್ವಾಸಕೋಶ ತಜ್ಞವೈದ್ಯ ಡಾ.ಸುಯೋಗ್ ಯೋಗಣ್ಣ ನೇತೃತ್ವದಲ್ಲಿ ಶಿಬಿರ ನಡೆಯಲಿದೆ.

ಈ ಶಿಬಿರದಲ್ಲಿ ಅಸ್ತಮಾ, ಅಲರ್ಜಿ, ಶ್ವಾಸಕೋಶದ ತೊಂದರೆ, ಉಸಿರಾಟದಲ್ಲಿ ತೊಂದರೆ, ಧೂಮಪಾನದ ಕೆಮ್ಮು, ಕ್ಷಯ (ಟಿಬಿ), ಗೊರಕೆಗೆ ಲಕ್ಷಣಗಳಿರುವವರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ದೂ.ಸಂ. 0821–2533600, ಮೊ.ಸಂ. 99863 99862 ಅನ್ನು ಸಂಪರ್ಕಿಸಬಹುದು. ಶಿಬಿರದಲ್ಲಿ ಉಚಿತ ಸಮಾಲೋಚನೆ ಇದ್ದು, ವೈದ್ಯರು ಸೂಚಿಸುವ ಅಲರ್ಜಿ ಪರೀಕ್ಷೆಗೆ ಶೇ.50ರಷ್ಟು ರಿಯಾಯಿತಿ ಲಭ್ಯವಿದೆ. ಶ್ವಾಸಕೋಶದ ಕಾರ್ಯ ಪರೀಕ್ಷೆಯನ್ನು ಉಚಿತವಾಗಿ ನಡೆಸಲಾಗುವುದು ಎಂದು ಪ್ರಕಟಣೆಯಲ್ಲಿ ಆಸ್ಪತ್ರೆಯ ಪ್ರಧಾನ ವ್ಯವಸ್ಥಾಪಕ ಪಿ.ಜೆ.ಅರುಣ್‌ಕುಮಾರ್ ತಿಳಿಸಿದ್ದಾರೆ.

ನಾಲ್ವಡಿಯವರ ಹಲವು ಜನಪರ ಕಾರ್ಯಕ್ರಮಗಳಿಗೆ ಮಿರ್ಜಾ ಇಸ್ಮಾಯಿಲ್ ಸಾಥ್ ನೀಡಿದ್ದರು

● ನಾಲ್ವಡಿಯವರ ಅಂದಿನ ಅಭಿವೃದ್ಧಿ ಕಾರ್ಯಗಳು ಇತಿಹಾಸದ ಮೂಲಕ ಈಗಲೂ ಜನಮಾನಸದಲ್ಲಿ ಉಳಿದಿವೆ ● ಸಂಸ್ಕೃತಿ ಚಿಂತಕ ಧರ್ಮೇಂದ್ರಕುಮಾರ್‌ರಿಂದ ಸವಿವರ ಮಾಹಿತಿ ● ಗ್ರಾಮಾಂತರ ಮಕ್ಕಳ ಸಶಕ್ತತೆಗಾಗಿ ಸಹಾಯಾರ್ಥ 'ಇಂಪು–ಕಂಪು–ತಂಪು' ಕಾರ್ಯಕ್ರಮ



ಕಲಾಮಂದಿರದಲ್ಲಿ 'ಗ್ರಾಮಾಂತರ ಮಕ್ಕಳ ಸಶಕ್ತತೆಗಾಗಿ ಸಹಾಯಾರ್ಥ ಏರ್ಪಡಿಸಿದ್ದ 'ಇಂಪು–ಕಂಪು–ತಂಪು' ಕಾರ್ಯಕ್ರಮವನ್ನು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ಮೈಸೂರು,ಜ.21(ಎಸ್‌ಪಿಎನ್)–ನಾಲ್ವಡಿ ಕೃಷ್ಣರಾಜ ಒಡೆಯರ್ ಆಳ್ವಿಕೆಯಲ್ಲಿ ಆಗಿರುವ ಅಭಿವೃದ್ಧಿ ಕೆಲಸಗಳನ್ನು ನಾವು ಸ್ಮರಿಸಿಕೊಳ್ಳಬೇಕಿದೆ ಎಂದು ಸಂಸ್ಕೃತಿ ಚಿಂತಕ ಧರ್ಮೇಂದ್ರಕುಮಾರ್ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರದಲ್ಲಿ ರೋಟರಿ ಮೈಸೂರು ರಾಯಲ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ 'ಗ್ರಾಮಾಂತರ ಮಕ್ಕಳ ಸಶಕ್ತತೆಗಾಗಿ ಸಹಾಯಾರ್ಥ ಏರ್ಪಡಿಸಿದ್ದ 'ಇಂಪು–ಕಂಪು–ತಂಪು' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ದೇಶದಲ್ಲೇ ಮೊಟ್ಟಮೊದಲ ಮೈಸೂರು ವಿಶ್ವವಿದ್ಯಾಲಯ ಸ್ಥಾಪಿಸಿದ ಕೀರ್ತಿ, ಇಂದು ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿರುವ ಬೆಂಗಳೂರಿನ ಮಿಂಟೊ ಕಣ್ಣಿನಾಸ್ಪತ್ರೆ, ಮೈಸೂರಿನ ಕ್ಷಯರೋಗ ಆಸ್ಪತ್ರೆ, ವಾಣಿಜ್ಯ ಕ್ಷೇತ್ರದಲ್ಲಿ ಖಾಸಗಿ ಸಹಭಾಗಿತ್ವದೊಂದಿಗೆ ಮೈಸೂರು ಬ್ಯಾಂಕ್ ಕಾರ್ಯಾರಂಭ ಮಾಡಿದ ಕೀರ್ತಿಯೂ ನಾಲ್ವಡಿ ಅವರಿಗೆ ಸಲ್ಲುತ್ತದೆ ಎಂದರು.

ಅಲ್ಲದೆ, ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವ ಸಹಕಾರ ಸಂಘಗಳ ಸ್ಥಾಪನೆ, ಬುಡಕಟ್ಟು, ಅರಣ್ಯವಾಸಿಗಳು, ಶೋಷಿತರಿಗೆ ಶಿಕ್ಷಣ ನೀಡಲು ಪ್ರತ್ಯೇಕ ಶಾಲೆಗಳ ಸ್ಥಾಪನೆ ಹೀಗೆ ವಿದ್ಯಾಕ್ಷೇತ್ರದಲ್ಲಿ ಹತ್ತು–ಹಲವು ಕ್ರಾಂತಿಕಾರಕ ನಿರ್ಧಾರ ಕೈಗೊಂಡರು. ತಮ್ಮ ಸಂಸ್ಥಾನ ಪ್ರಜೆಗಳಿಗೆ ಕಡಿಮೆ ವೆಚ್ಚದಲ್ಲಿ ಶಿಕ್ಷಣ ನೀಡಿದ ಕೀರ್ತಿ ನಾಲ್ವಡಿಯವರಿಗೆ ಸಲ್ಲುತ್ತದೆ ಎಂದರು.

ಅಧಿಕಾರದಲ್ಲಿರುವ ಓರ್ವ ವ್ಯಕ್ತಿ ಮನಸ್ಸಿನಲ್ಲಿ ಜನಪರ ಕೆಲಸ ಮಾಡುವ ಆಲೋಚನೆ ಇದ್ದರೆ ಹಲವು ಪ್ರಥಮಗಳಿಗೆ ಸಾಕ್ಷಿಯಾಗಬಹುದು ಎಂಬುದಕ್ಕೆ ನಾಲ್ವಡಿ ಅವರ ಅಭಿವೃದ್ಧಿ ಕೆಲಸಗಳು ನಮ್ಮ ಎದುರಿಗೆ ಬರುತ್ತವೆ. ಮೊಟ್ಟಮೊದಲ ಬಾರಿಗೆ ಸ್ತ್ರೀ ಶಿಕ್ಷಣ ಕಡ್ಡಾಯ, ಬೆಂಗಳೂರಿನಲ್ಲಿ ಪ್ರಥಮ ವಾಣಿಜ್ಯ ಶಾಲೆ, ಮೈಸೂರಿನಲ್ಲಿ ತಾಂತ್ರಿಕ ವಿದ್ಯಾಲಯ, ಮೈಸೂರಿನಲ್ಲಿ ಕಿವುಡ ಹಾಗೂ ಮೂಗರ ಶಾಲೆ, ಮೊದಲ ಬಾರಿಗೆ ವಯಸ್ಕರ ಶಿಕ್ಷಣ ಸೇರಿದಂತೆ ಅನೇಕ ಯೋಜನೆಗಳನ್ನು ಜನರ ಏಳಿಗೆಗಾಗಿ ಜಾರಿಗೆ ತಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪಟ್ಟಾಭಿಷೇಕ ಬಹಳ ಸರಳವಾಗಿ ನಡೆದು, ಅಧಿಕಾರ ವಹಿಸಿಕೊಂಡಾಗ ಅನೇಕ ಸವಾಲುಗಳನ್ನು ಎದುರಿಸಿ, ಮೈಸೂರು ಸಂಸ್ಥಾನವನ್ನು ವೇಗವಾಗಿ ಅಭಿವೃದ್ಧಿಪಡಿಸಿದರು. ಈ ಹಿಂದೆ ಇದ್ದ ಅರಮನೆ ಆವರಣದಲ್ಲಿ 8 ಸಾವಿರ ಮಂದಿ ವಾಸವಿದ್ದರು. ಈಗಿನ ಹೊಸ ಅರಮನೆ ಕಟ್ಟುವ ಸಂದರ್ಭದಲ್ಲಿ ಅರಮನೆಯಾಚೆ ಲಕ್ಷ್ಮೀಪುರಂ, ಚಾಮರಾಜಪುರಂ, ಅಶೋಕಪುರಂ ಸೇರಿದಂತೆ ಅನೇಕ ಬಡಾವಣೆಗಳನ್ನು ಸ್ಥಾಪಿಸಿ ಅವರಿಗೆಲ್ಲ ಸೂರು ಕಲ್ಪಿಸಿಕೊಟ್ಟರು. ಇದಕ್ಕೆ ಸಾಥ್ ನೀಡಿದವರು ಮಿರ್ಜಾ ಇಸ್ಮಾಯಿಲ್ ಎಂದರೆ ತಪ್ಪಾಗಲಾರದು ಎಂದರು.

ಬೆಂಗಳೂರಿನ ಈಗಿನ ರಾಜಭವನವನ್ನು ಮಿರ್ಜಾ ಇಸ್ಮಾಯಿಲ್ ಅವರ ತಾತಾ ಕಟ್ಟಿಸಿದ್ದರು. ಈ ಕಟ್ಟಡ ಸೇರಿದಂತೆ ಬೆಂಗಳೂರಲ್ಲಿ 300 ಕಟ್ಟಡಗಳ ಮಾಲೀಕರಾಗಿದ್ದರು. ಅಲ್ಲದೆ, ನಾಲ್ವಡಿ ಅವರಿಗೆ ದೀರ್ಘಕಾಲ ಗೆಳೆಯರಾಗಿ, ಮೈಸೂರು ಅರಮನೆ ದಿವಾನರಾಗಿ ಮೈಸೂರಿನ ಸಂಸ್ಥಾನದ ಅಭಿವೃದ್ಧಿಗೆ ಶ್ರಮಿಸಿದ್ದನ್ನು ನೆನೆದರು. ಮಿರ್ಜಾ ಇಸ್ಮಾಯಿಲ್ ಅವರು ದಿವಾನರಾಗಿದ್ದಾಗ ಒಮ್ಮೆ ಸಾರ್ವಜನಿಕ ಸ್ಥಳಗಳಲ್ಲಿ ಗಣೇಶ ವಿಗ್ರಹ ಸ್ಥಾಪಿಸುವ ವಿಚಾರಕ್ಕೆ ಎರಡು ಕೋಮಿನ ನಡುವೆ ಗಲಾಟೆಯಾಗಿತ್ತು. ಈ ಘಟನೆಯನ್ನು ಆಡಳಿತ ವೈಫಲ್ಯ ಎಂದು ಬಿಂಬಿಸಿ, ಮಿರ್ಜಾ ಇಸ್ಮಾಯಿಲ್ ಅವರನ್ನು ದಿವಾನರ ಪಟ್ಟದಿಂದ ಕೆಳಗಿಸಲು ಹಲವರು ಪ್ರಯತ್ನಿಸಿದ್ದರು. ಆದರೆ, ಮಹಾರಾಜರು, ಮಿರ್ಜಾ ಇಸ್ಮಾಯಿಲ್‌ರ ವಿರುದ್ಧ ಬಂದ ಯಾವ ದೂರು ಗಳಿಗೂ ಕಿವಿಗೊಡಲಿಲ್ಲ. ಒಟ್ಟಿನಲ್ಲಿ ಮಿರ್ಜಾ ಇಸ್ಮಾಯಿಲ್ ಮತ್ತು ನಾಲ್ವಡಿ ಅವರ ಒಡನಾಟಕ್ಕೆ 26 ವರ್ಷಗಳ ಸುದೀರ್ಘ ಇತಿಹಾಸವಿದೆ. ಈ ಅಂಶಗಳನ್ನು ಇಂದಿನ ಪೀಳಿಗೆ ತಿಳಿದುಕೊಳ್ಳಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು. ಈ ವೇಳೆ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಶುಭ ಹಾರೈಸಿದರು. ಗಾಯಕಿ ಶೋಭ ಪಲ್ಲವಿ, ರೊ. ರಾಜಭಟ್, ರೇಖಾ ವೆಂಕಟೇಶ್, ತ್ರಿವೇಣಿ, ರೊ.ಕೃಷ್ಣ, ರೋಟರಿ ಮೈಸೂರು ರಾಯಲ್‌ನ ಅಧ್ಯಕ್ಷ ರೊ.ಧನಂಜಯ್, ಕಾರ್ಯದರ್ಶಿ ಹನುಮಂತರಾವ್ ಉಪಸ್ಥಿತರಿದ್ದರು.

ಮದ್ದೂರಲ್ಲಿ ಸ್ಪರ್ಧಿಸಲು ಡಿಕೆಶಿಗೆ ಆಹ್ವಾನ



ಭಾರತೀನಗರ, ಜ.21(ಅಣ್ಣೂರು ಸತೀಶ್)– ವಿಪಕ್ಷ ನಾಯಕ ಸಿದ್ದರಾಮಯ್ಯ ಅವರನ್ನು ತಮ್ಮ ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ವರುಣಾ, ಚಾಮುಂಡೇಶ್ವರಿ, ಬಾದಾಮಿ, ಚಾಮರಾಜಪೇಟೆ, ಕೋಲಾರ ಮುಂತಾದ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಒತ್ತಾಯಿಸಿದ್ದು, ಸಿದ್ದರಾಮಯ್ಯ ಕೋಲಾರದಲ್ಲಿ ಸ್ಪರ್ಧಿಸುವ ಇಚ್ಛೆ ವ್ಯಕ್ತಪಡಿಸಿದ್ದಾರೆ. ಇದರ ಬೆನ್ನಲ್ಲೇ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಮದ್ದೂರಲ್ಲಿ ಸ್ಪರ್ಧಿಸುವಂತೆ ಈ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಆಹ್ವಾನಿಸಿದ್ದಾರೆ.

ಪಕ್ಷದ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ ವೇಳೆ ಸಿದ್ದರಾಮಯ್ಯ ಯಾವುದೇ ಕ್ಷೇತ್ರವನ್ನು ನಮೂದಿಸದೇ ಪಕ್ಷದ ವರಿಷ್ಠರ ತೀರ್ಮಾನಕ್ಕೆ ಬಿಟ್ಟಿದ್ದರು. ಆದರೆ, ಡಿ.ಕೆ. ಶಿವಕುಮಾರ್ ಈಗಾಗಲೇ ತಾವು ಶಾಸಕರಾಗಿರುವ ಕನಕಪುರ ಕ್ಷೇತ್ರದ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ. ಮದ್ದೂರಿನಿಂದ ಸ್ಪರ್ಧಿಸಲು ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಸಹೋದರನ ಪುತ್ರರೂ ಆದ ಜಿಪಂ ಮಾಜಿ ಅಧ್ಯಕ್ಷ ಎಸ್. ಗುರುಚರಣ್ ಕೆಪಿಸಿಸಿಗೆ ಅರ್ಜಿ ಸಲ್ಲಿಸಿದ್ದಾರೆ. ಈ ನಡುವೆ ಮದ್ದೂರಿನ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯೂ ಆಗಿರುವ ಗುರುಚರಣ್ ನೇತೃತ್ವದ ಕಾಂಗ್ರೆಸ್ ಮುಖಂಡರ ನಿಯೋಗವೊಂದು ಡಿ.ಕೆ. ಶಿವಕುಮಾರ್ ಅವರನ್ನು ಮದ್ದೂರಲ್ಲಿ ಸ್ಪರ್ಧಿಸುವಂತೆ ಆಹ್ವಾನಿಸಿದ್ದಾರೆ. ಡಿ.ಕೆ. ಶಿವಕುಮಾರ್ ಈ ಕ್ಷೇತ್ರದಲ್ಲಿ ಸ್ಪರ್ಧಿಸಿದರೆ ಗೆಲುವು ಸುಲಭವಾಗುತ್ತದೆ. ಅಲ್ಲದೇ, 2008ರಿಂದ ಕ್ಷೇತ್ರದ ಮೇಲೆ ಹಿಡಿತ ಸಾಧಿಸಿರುವ ಜೆಡಿಎಸ್ ಅನ್ನು ಮಣಿಸಲು ಡಿ.ಕೆ. ಶಿವಕುಮಾರ್ ಬರಬೇಕು ಎಂಬುದು ಇಲ್ಲಿನ ಕಾಂಗ್ರೆಸ್ ಮುಖಂಡರ ಒತ್ತಾಯ. ಅಲ್ಲದೇ,

> **ಮದ್ದೂರು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಆಹ್ವಾನಿಸಿರುವುದು ನಿಜ. 2008ರಿಂದಲೂ ಈ ಕ್ಷೇತ್ರದಲ್ಲಿ ಸತತವಾಗಿ ಜೆಡಿಎಸ್ ಗೆಲ್ಲುತ್ತಿರುವುದರಿಂದ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿರುವ ನನಗಿಂತ ಬಲಾಢ್ಯರು ಸ್ಪರ್ಧಿಸಿದರೆ ಒಳ್ಳೆಯದು ಎಂಬುದು ನಮ್ಮ ಅಭಿಪ್ರಾಯ. ಹೀಗಾಗಿ ಡಿ.ಕೆ. ಶಿವಕುಮಾರ್ ಅವರನ್ನು ಇಲ್ಲಿ ಸ್ಪರ್ಧಿಸುವಂತೆ ಆಹ್ವಾನಿಸಿದ್ದೇವೆ.**
>
> 
>
> **ಅವರು ಈ ಕ್ಷೇತ್ರದಲ್ಲಿ ಸ್ಪರ್ಧಿಸಿದರೆ ಮಂಡ್ಯ ಜಿಲ್ಲೆಯಲ್ಲಿ ಕಾಂಗ್ರೆಸ್ ಹೆಚ್ಚಿನ ಸ್ಥಾನಗಳನ್ನು ಗೆಲ್ಲುವ ಸಾಧ್ಯತೆಯೂ ಇದೆ. ಇಲ್ಲಿ ಡಿಕೆಶಿ ಗೆದ್ದರೆ, ನಾನೇ ಗೆದ್ದಂತೆ.** – ಎಸ್.ಗುರುಚರಣ್, ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ.

ಮದ್ದೂರಿನಲ್ಲಿ ಡಿಕೆಶಿ ಸ್ಪರ್ಧಿಸಿದರೆ, ಮಂಡ್ಯ ಜಿಲ್ಲೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಕಾಂಗ್ರೆಸ್ ಪಡೆಯುವ ಸಾಧ್ಯತೆ ಇದೆ ಎಂಬುದು ಈ ಮುಖಂಡರ ಲೆಕ್ಕಾಚಾರವಾಗಿದೆ.

1999ರಲ್ಲಿ ಈ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ್ದ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾದರು. ನಂತರ 2004ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಡಿ.ಸಿ. ತಮ್ಮಣ್ಣ ಗೆಲುವು ಸಾಧಿಸಿದ್ದೇ ಕೊನೆ. ಬಳಿಕ 2008ರಲ್ಲಿ ಜೆಡಿಎಸ್‌ನ ಎಂ.ಎಸ್.ಸಿದ್ದರಾಜು ಶಾಸಕರಾದರೆ, ನಂತರ ಜೆಡಿಎಸ್ ಸೇರಿದ ಡಿ.ಸಿ. ತಮ್ಮಣ್ಣ, 2013 ಹಾಗೂ 2018ರಲ್ಲಿ ಗೆದ್ದಿದ್ದಾರೆ. ಸತತವಾಗಿ ಮೂರು ಚುನಾವಣೆಗಳನ್ನು ಗೆಲ್ಲುವ ಮೂಲಕ ಮದ್ದೂರು ಕ್ಷೇತ್ರ ಜೆಡಿಎಸ್‌ನ ಭದ್ರಕೋಟೆ ಎನಿಸಿದೆ. ಹೀಗಾಗಿ ಡಿ.ಕೆ. ಶಿವಕುಮಾರ್ ಇಲ್ಲಿ ಸ್ಪರ್ಧಿಸಿದರೆ ಕ್ಷೇತ್ರ ಕಾಂಗ್ರೆಸ್‌ಗೆ ದಕ್ಕುತ್ತದೆ ಎಂಬುದು ಇಲ್ಲಿನ ಕಾಂಗ್ರೆಸ್ ಮುಖಂಡರ ಅಭಿಪ್ರಾಯವಾಗಿದೆ. ಮದ್ದೂರಿನಿಂದ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್‌ಗಾಗಿ ಗುರುಚರಣ್ ಅರ್ಜಿ ಸಲ್ಲಿಸಿದ್ದರೂ ಕೂಡ ಅವರದೇ ನೇತೃತ್ವದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕದಲೂರು ರಾಮಕೃಷ್ಣ, ಡಿಸಿಸಿ ಬ್ಯಾಂಕ್ ನಿರ್ದೇಶಕ ಸಂದರ್ಶ್, ಮುಖಂಡರಾದ ಜೋಗಿಗೌಡ, ರಾಘು ಮತ್ತಿತರರನ್ನೊಳಗೊಂಡ ನಿಯೋಗ ಬೆಂಗಳೂರಿನ ಡಿ.ಕೆ. ಶಿವಕುಮಾರ್ ಅವರ ನಿವಾಸಕ್ಕೆ ತೆರಳಿ ಮದ್ದೂರಿ ನಲ್ಲಿ ಸ್ಪರ್ಧಿಸುವಂತೆ ಆಹ್ವಾನಿಸಿದೆ. ಡಿ.ಕೆ.ಶಿವಕುಮಾರ್ ಅವರು ಮದ್ದೂರಿನಲ್ಲಿ ಸ್ಪರ್ಧಿಸುವ ಬಗ್ಗೆ ಖಚಿತವಾಗಿ ಏನನ್ನೂ ಹೇಳದೆ ನೋಡೋಣ ಎಂದು ನಿಯೋಗಕ್ಕೆ ತಿಳಿಸಿದರು ಎನ್ನಲಾಗಿದೆ.

ತಹಸೀಲ್ದಾರ್‌ರಿಂದ ಅಧಿಕಾರ ಮೊಟಕು: ಆರೋಪ



ಶ್ರೀರಂಗಪಟ್ಟಣ, ಜ.21– ಮನೆ ಹಕ್ಕುಪತ್ರ ವಿತರಿಸಲು ತಹಸೀಲ್ದಾರ್ ವಿಳಂಬ ಮಾಡುವ ಜೊತೆಗೆ ನಮ್ಮ ಅಧಿಕಾರ ಮೊಟಕುಗೊಳಿಸುತ್ತಿದ್ದಾರೆ ಎಂದು ತಾಲೂಕಿನ ಬೆಳಗೊಳ ಗ್ರಾಪಂ ಸದಸ್ಯ ಬಿ.ವಿ.ಸುರೇಶ್ ಆರೋಪಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 10 ತಿಂಗಳಿಂದ ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರ ನೀಡದೆ ವಿಳಂಬ ಮಾಡುತ್ತಿದ್ದಾರೆ. 3 ದಿನದೊಳಗಾಗಿ ಆಯಾ ಗ್ರಾಪಂಗಳಿಗೆ ಹಕ್ಕುಪತ್ರ ವಿತರಣೆ ಮಾಡುವಂತೆ ಸರ್ಕಾರದ ಸುತ್ತೋಲೆಗಳಿದ್ದರೂ ಸಹ ತಹಸೀಲ್ದಾರ್ ಕಾನೂನು ಉಲ್ಲಂಘಿಸಿದ್ದಾರೆ ಎಂದು ದೂರಿದರು.

ಹಕ್ಕುಪತ್ರ ನೀಡುವಂತೆ ಬೆಳಗೊಳ ಗ್ರಾಪಂನ ಎಲ್ಲಾ ಸದಸ್ಯರು ಒತ್ತಾಯಿಸಿದರೂ ಇಲ್ಲಿವರೆಗೆ ಗ್ರಾಪಂಗೆ ಹಕ್ಕುಪತ್ರ ವರ್ಗಾವಣೆ ಮಾಡಿಲ್ಲ. ಇಲ್ಲಿನ ಅಧಿಕಾರಿಗಳು ಮೇಲಧಿಕಾರಿಗಳ ಹೆಸರೇಳಿಕೊಂಡು ರಾಜಕೀಯ ದುರುದ್ದೇಶದಿಂದ ವಿಳಂಬ ಮಾಡುತ್ತಿದ್ದಾರೆ. ಅಲ್ಲದೆ ಹೊಸಆನಂದೂರು ಗ್ರಾಮದಲ್ಲಿ ಒಂದೇ ಕುಟುಂಬದ ಇಬ್ಬರು ವ್ಯಕ್ತಿಗಳಿಗೆ ಹಕ್ಕುಪತ್ರ ವಿತರಿಸಿದ್ದಾರೆ. ಇದರಲ್ಲಿ ತಹಸೀಲ್ದಾರ್ ಸೇರಿದಂತೆ ಕಂದಾಯ ಇಲಾಖೆ ಅಧಿಕಾರಿಗಳು ಶಾಮೀಲಾಗಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಶೀಘ್ರ ಗ್ರಾಮದ ಗ್ರಾಪಂ ಹಿಂಭಾಗದ ಬಂಗಲೆ ಮೈದಾನ, ಸರ್ಕಾರಿ ಶಾಲೆ ಹಿಂಭಾಗದ ಆಲೇಶ್ವರಿ ಕಟ್ಟೆ ಸೇರಿದಂತೆ ಸರ್ಕಾರಿ ಸರ್ವೇ ನಂ.1244 ಜಾಗದಲ್ಲಿ ಮನೆ ನಿರ್ಮಿಸಿಕೊಂಡಿರುವ ಅರ್ಹ ಫಲಾನುಭವಿಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಹಕ್ಕುಪತ್ರ ವಿತರಿಸಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಗ್ರಾಪಂ ಸದಸ್ಯರಾದ ಪುಟ್ಟರಾಜು, ಅರವಿಂದ್, ರಜನಿಕಾಂತ್, ಮಾಜಿ ಸದಸ್ಯ ಬಿ.ಎಂ.ರವಿಕುಮಾರ್ ಇದ್ದರು.

ಪ್ರತಿ ಕುಟುಂಬಕ್ಕೆ 12 ಕೆಜಿ ಅಕ್ಕಿ ವಿತರಣೆಗೆ ಸಂಪುಟ ತೀರ್ಮಾನ

ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ



ಮಂಡ್ಯ, ಜ.21– ಪ್ರಸ್ತುತ ಪ್ರತಿ ಕುಟುಂಬಕ್ಕೆ 10 ಕೆಜಿ ಅಕ್ಕಿ ವಿತರಿಸಲಾಗುತ್ತಿದ್ದು, ಮುಂದಿನ ತಿಂಗಳಿಂದ 12 ಕೆಜಿ ಅಕ್ಕಿ ವಿತರಿಸಲು ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ತಿಳಿಸಿದರು.

ನಗರದ ಖಾಸಗಿ ಸಮುದಾಯ ಭವನದಲ್ಲಿ ಬಿಜೆಪಿ ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಾಂಗ್ರೆಸ್ ಎಂದೂ ದೇಶದ ರೈತರ ಪರ ನಿಂತಿಲ್ಲ. ರೈತರ ಶ್ರೇಯೋಭಿವೃದ್ಧಿ ಬಿಜೆಪಿಯಿಂದ ಮಾತ್ರ ಸಾಧ್ಯ ಎಂದರು.

ಕಿಸಾನ್ ಸಮ್ಮಾನ್ ಯೋಜನೆಯಡಿ ಜಿಲ್ಲೆಯ 2 ಲಕ್ಷ ರೈತರ ಖಾತೆಗೆ ಹಣ ಹೋಗಿದೆ. ಬಿಜೆಪಿ ಸರ್ಕಾರದಿಂದ ಒಂದಲ್ಲಾ ಒಂದು ಯೋಜನೆ ಪ್ರತಿ ಮನೆ ತಲುಪಿದೆ. ಅದಕ್ಕೆ ಪ್ರಧಾನಿ ಮೋದಿ ಹಾಗೂ ರಾಜ್ಯದ ಸಿಎಂ ಬೊಮ್ಮಾಯಿ ಕಾರಣ. ಈ ವರ್ಷ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಸರ್ಕಾರ ಮಾಡಿದೆ ಎಂದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಯೋಜನೆಗಳನ್ನು ನೀಡಿದೆ. ರಾಜ್ಯದಿಂದ ಕಾಶಿಯಾತ್ರೆಗೆ ಹೋಗುವವರಿಗೆ 5 ಸಾವಿರ ಕೊಡುತ್ತಿದ್ದು, ಬೊಮ್ಮಾಯಿ ಸಿಎಂ ಆದ ನಂತರ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನಗಳನ್ನು ಹೆಚ್ಚು ಮಾಡಿದ್ದಾರೆ. 11 ಸಾವಿರ ಪೌರಕಾರ್ಮಿಕರನ್ನು ನಮ್ಮ ಸರ್ಕಾರ ಖಾಯಂ ಮಾಡಿದೆ. ಕೆಂಪೇಗೌಡರ ಪ್ರತಿಮೆಯನ್ನು ಬೆಂಗಳೂರಿನ ವಿಮಾನ ನಿಲ್ದಾಣದಲ್ಲಿ ನಿರ್ಮಿಸಿರುವುದು ನಮ್ಮ ಸರ್ಕಾರ ಎಂದರು. ಮೋದಿ ಎಂಟೂವರೆ ವರ್ಷದಿಂದ ಪ್ರಧಾನಿ ಹುದ್ದೆ ಅಲಂಕರಿಸುವ ಮೂಲಕ ಇದೀಗ ವಿಶ್ವಮಾನವರಾಗಿದ್ದಾರೆ. ಕೊರೊನಾ ಸಂದರ್ಭ ಅನೇಕ ದೇಶ ದಿವಾಳಿಯಾದವು. ಆದರೆ 134 ಕೋಟಿ ಜನಸಂಖ್ಯೆಯುಳ್ಳ ಭಾರತಕ್ಕೆ ಯಾವ ಸಮಸ್ಯೆಯೂ ಆಗಲಿಲ್ಲ. ಕೊರೊನಾಗೆ ಔಷಧಿ ಕಂಡು ಹಿಡಿದು ನೂರಕ್ಕೂ ಹೆಚ್ಚು ದೇಶಗಳಿಗೆ ವ್ಯಾಕ್ಸಿನ್ ಕೊಟ್ಟ ದೇಶ ಭಾರತ. ಇದಕ್ಕೆ ಪ್ರಧಾನಿ ಮೋದಿ ಕಾರಣ. ಕೊರೊನಾ ವೇಳೆ 80 ಕೋಟಿ ಜನರ ಹಸಿವು ನೀಗಿಸಲು ಪ್ರತಿ ಕುಟುಂಬಕ್ಕೆ ತಲಾ 10 ಕೆಜಿ ಅಕ್ಕಿ ಹಾಗೂ ಇತರೆ ದವಸ, ಧಾನ್ಯಗಳನ್ನು ನೀಡಲಾಯಿತು ಎಂದು ಸ್ಮರಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್ ಮಾತನಾಡಿ, ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಹಮ್ಮಿಕೊಂಡಿದ್ದು, ಆ ಮೂಲಕ ಮನೆ ಮನೆಗೆ ಸರ್ಕಾರದ ಯೋಜನೆಗಳನ್ನು ತಲುಪಿಸಲಾಗುವುದು. ಅಭಿಯಾನಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಚಾಲನೆ ನೀಡಿರುವುದು ಹರ್ಷ ತಂದಿದ್ದು, ಕಾರ್ಯಕರ್ತರು ಕಾರ್ಯಕ್ರಮ ಯಶಸ್ವಿಗೊಳಿಸಿ ಎಂದು ಕರೆ ನೀಡಿದರು. ಈ ವೇಳೆ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ.ಸಿದ್ದರಾಮಯ್ಯ, ಒಕ್ಕಲಿಗರ ಸಂಘದ ನಿರ್ದೇಶಕ ಅಶೋಕ್ ಜಯರಾಂ, ಮುಡಾ ಮಾಜಿ ಅಧ್ಯಕ್ಷೆ ವಿದ್ಯಾ ನಾಗೇಂದ್ರ, ಮುಖಂಡರಾದ ಅರವಿಂದ್ ಕುಮಾರ್, ಎಂ.ಪಿ.ಅರುಣ್‌ಕುಮಾರ್, ವಿವೇಕ್ ಸೇರಿದಂತೆ ಇತರರಿದ್ದರು.

ಗಣರಾಜ್ಯೋತ್ಸವಕ್ಕೆ ಅಪಮಾನ

ನಟಿ ರಚಿತಾರಾಮ್ ವಿರುದ್ಧ ದೂರು ದಾಖಲು



ಮದ್ದೂರು, ಜ.21– ಗಣರಾಜ್ಯೋತ್ಸವಕ್ಕೆ ಅಪಮಾನ ಮಾಡಿದ ಆರೋಪದ ಮೇಲೆ ನಟಿ ರಚಿತಾ ರಾವ್ ವಿರುದ್ಧ ಮದ್ದೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಸಂವಿಧಾನ ಮತ್ತು ಗಣರಾಜ್ಯೋತ್ಸವ ದಿನಕ್ಕೆ ರಚಿತಾರಾಮ್ ಅಪಮಾನ ಮಾಡಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಶಿವಲಿಂಗಯ್ಯ ಒತ್ತಾಯಿಸಿದ್ದಾರೆ. ಇತ್ತೀಚೆಗೆ ನಟ ದರ್ಶನ್ ಅಭಿನಯದ ಕ್ರಾಂತಿ ಸಿನಿಮಾದ ಪ್ರಮೋಷನ್ ವೇಳೆ ನಟಿ ರಚಿತಾರಾಮ್ ಕ್ರಾಂತಿ ಚಲನಚಿತ್ರ ಇದೇ ಜನವರಿ 26ರಂದು ತೆರೆಗೆ ಬರುತ್ತಿದ್ದು, ಅಂದು ಗಣರಾಜ್ಯೋತ್ಸವ ಮರೆತು ಕ್ರಾಂತಿ ಉತ್ಸವ ಮಾಡಿ ಎಂದಿದ್ದ ವೀಡಿಯೊ ವೈರಲ್ ಆಗಿತ್ತು. ಇದು ಸಂವಿಧಾನ ವಿರೋಧಿ ಹೇಳಿಕೆಯಾಗಿದ್ದು, ಸಂವಿಧಾನ ಜಾರಿಯಾದ ದಿನಕ್ಕೆ ಮಾಡಿದ ಅಪಮಾನ. ರಚಿತಾರಾವ್ ಅವರ ಮೇಲೆ ಕಾನೂನು ಕ್ರಮ ಕೈಗೊಂಡು, ಗಡಿಪಾರು ಮಾಡಬೇಕೆಂದು ಶಿವಲಿಂಗಯ್ಯ ಒತ್ತಾಯಿಸಿದ್ದಾರೆ.

ಜಿಲ್ಲಾಧಿಕಾರಿ ನಡೆ ಹಳ್ಳಿಗಳ ಕಡೆ ಒಂದು ವಿಶಿಷ್ಟ ಕಾರ್ಯಕ್ರಮ

ನಾಗಮಂಗಲ, ಜ.21– ಸರ್ಕಾರದ ಯೋಜನೆಗಳನ್ನು ಗ್ರಾಮಸ್ಥರಿಗೆ ಒದಗಿಸಲು ಅಧಿಕಾರಿಗಳು ಗ್ರಾಮಕ್ಕೆ ಬರುವ ವಿಶಿಷ್ಟ ಕಾರ್ಯಕ್ರಮವೇ ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ ಎಂದು ಶಾಸಕ ಸುರೇಶ್‌ಗೌಡ ತಿಳಿಸಿದರು.

ತಾಲೂಕಿನ ಹರದನಹಳ್ಳಿಯಲ್ಲಿ ನಡೆದ ಜಿಲ್ಲಾಧಿಕಾರಿಗಳ ನಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅಧಿಕಾರಿಗಳು ಕಾರ್ಯಕ್ರಮದಲ್ಲಿ ಸ್ವೀಕರಿಸುವ ಸಾರ್ವಜನಿಕರ ಕುಂದುಕೊರತೆಗಳನ್ನು ಪರಿಹರಿಸಿ. ಪೂರ್ವಜರ ಕಾಲದಿಂದಲೂ ಜನರು ವಾಸವಾಗಿರುವ ಸ್ಥಳಕ್ಕೆ ದುರಸ್ತಾಗಿಲ್ಲ ಎಂದು ದೂರುಗಳಿವೆ ಇಂತಹ ದೂರುಗಳನ್ನು ಶೀಘ್ರ ಪರಿಹರಿಸಬೇಕು ಎಂದರು. ಗ್ರಾಮಸ್ಥರು ದೂರು ಸಲ್ಲಿಸಿದ ನಂತರ ಸ್ವೀಕೃತಿ ಪಡೆದುಕೊಳ್ಳಿ. ಇದರಿಂದ ಮುಂದೆ ಅರ್ಜಿಗಳ ಸ್ಥಿತಿಗತಿ ತಿಳಿದುಕೊಳ್ಳಬಹುದು ಎಂದರು.

ಪೌತಿ ಖಾತೆ ಆಂದೋಲನ: ಜಿಲ್ಲಾಡಳಿತದಿಂದ ಸ್ವಯಂ ಪ್ರೇರಿತವಾಗಿ ಪೌತಿ ಖಾತೆ ಆಂದೋಲನ ಹಮ್ಮಿಕೊಂಡು ಮನೆ ಮನೆ ಭೇಟಿ ನೀಡಿ ದಾಖಲೆಗಳನ್ನು ಪಡೆದು ರಶೀದಿ ಪುಸ್ತಕ, ಆರ್‌ಟಿಸಿ, ಪಟ್ಟ ಪುಸ್ತಕ, ಪೌತಿ ಖಾತೆಯನ್ನು ಜಿಲ್ಲಾಧಿಕಾರಿ ಡಾ. ಹೆಚ್.ಎನ್.ಗೋಪಾಲಕೃಷ್ಣ ವಿತರಿಸಿದರು.

ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ ಕಾರ್ಯಕ್ರಮ ವಿಶೇಷವಾಗಿ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಸಮಸ್ಯೆಯನ್ನು ಸ್ಥಳದಲ್ಲೇ ಪರಿಹರಿಸಲು ನಡೆಸಲಾಗುತ್ತದೆ ಎಂದು ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜ್ ತಿಳಿಸಿದರು.



ತಾಲೂಕು ಹಾಗೂ ಗ್ರಾಮ ಮಟ್ಟದ ಅಧಿಕಾರಿಗಳು ಸಾರ್ವಜನಿಕರ ಕೆಲಸವನ್ನು ವಿಳಂಬ ಮಾಡದೇ ಮಾಡುತ್ತಿರುವ ಬಗ್ಗೆ ಈ ಕಾರ್ಯಕ್ರಮದಲ್ಲಿ ಪರಿಶೀಲಿಸಲಾಗುವುದು ಎಂದರು.

ಫಲಾನುಭವಿಗಳಿಗೆ ಆರೋಗ್ಯ ಇಲಾಖೆಯಿಂದ ಕನ್ನಡಕ ವಿತರಣೆ, ಕಂದಾಯ ಇಲಾಖೆಯಿಂದ ಪಿಂಚಣಿ ವಿತರಣೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಗರ್ಭಿಣಿ ಸ್ತ್ರೀಯರಿಗೆ ಸೀಮಂತ ಕಾರ್ಯಕ್ರಮ, ಸುಕನ್ಯಾ ಸಮೃದ್ಧಿ ಯೋಜನೆ ಆಯ್ಕೆ ಪತ್ರ, ಕೃಷಿ ಇಲಾಖೆಯಿಂದ, ಜಿಪಂ ವತಿಯಿಂದ ಜಾಬ್ ಕಾರ್ಡ್ ವಿತರಿಸಲಾಯಿತು. ಆಕಾರ್ ಬಂದ್‌ಗೆ ಆರ್‌ಟಿಸಿ ಹೊಂದಾಣಿಕೆ ಮಾಡಿಕೊಡಬೇಕು, ಹರದನಹಳ್ಳಿ ಗ್ರಾಪಂ ಹಳೆ ಕಟ್ಟಡ ಮತ್ತು ಸುತ್ತಮುತ್ತಲಿನ ಸ್ಥಳವನ್ನು ಸಾರ್ವಜನಿಕ ಸಮುದಾಯ ಭವನಕ್ಕೆ ಮೀಸಲಿಡಬೇಕು, ರಸ್ತೆ ನಿರ್ಮಾಣ ಸೇರಿದಂತೆ ಇನ್ನಿತರ ವಿಷಯಗಳ ಕುರಿತು ಗ್ರಾಮಸ್ಥರು ಅರ್ಜಿ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷ ರವಿ, ಜಿಪಂ ಸಿಇಓ ಶಾಂತ ಎಲ್ ಹುಲ್ಮನಿ, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಮಂಜುನಾಥ್, ಜಿಪಂ ಉಪಕಾರ್ಯದರ್ಶಿ ಸಂಜೀವಪ್ಪ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಧನಂಜಯ್, ನಾಗಮಂಗಲ ತಹಸೀಲ್ದಾರ್ ಸ್ವಾಮಿಗೌಡ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಕಿರು ಉದ್ಯಮಕ್ಕೆ ಶೇ.50 ಸಬ್ಸಿಡಿ

ಸುತ್ತೂರಲ್ಲಿ ಕೇಂದ್ರ ಕೃಷಿ, ರೈತ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಮಾಹಿತಿ



ನಂಜನಗೂಡು, ಜ.21– ರೈತರು ಕಿರು ಉದ್ಯಮ ಸ್ಥಾಪಿಸಲು ಸರ್ಕಾರ ಶೇ.50 ಸಬ್ಸಿಡಿ ನೀಡುತ್ತಿದ್ದು, ಇದರ ಪ್ರಯೋಜನ ಪಡೆದು ಸಿರಿಧಾನ್ಯ ಸಂಸ್ಕರಣಾ ಘಟಕ ತೆರೆದು ವಿದೇಶಗಳಿಗೆ ರಫ್ತು ಮಾಡುವಂತಾಗಬೇಕು ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ತಾಲೂಕಿನ ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆಯುತ್ತಿರುವ ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಕೃಷಿ ವಿಚಾರ ಸಂಕಿರಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತ ಆಯುರ್ವೇದ, ಯೋಗದಂತಹ ಉತ್ತಮ ಅಂಶಗಳನ್ನು ಜಗತ್ತಿಗೆ ಕೊಡುಗೆ ನೀಡಿದೆ. ಅಂತರಾಷ್ಟ್ರೀಯ ಸಿರಿಧಾನ್ಯ ವರ್ಷವೆಂದು ಘೋಷಣೆ ಮಾಡಿ ಸಿರಿಧಾನ್ಯ ಗಳನ್ನು ಜಗತ್ತಿಗೆ ಕೊಡುಗೆ ನೀಡಲು ಮುಂದಾಗಿದೆ. ಕಳೆದ 75 ವರ್ಷಗಳಲ್ಲಿ 23 ಸಾವಿರ ಕೋಟಿಗೆ ಮಾತ್ರ ಸೀಮಿತವಾಗಿದ್ದ ಕೃಷಿ ಬಜೆಟ್ ಅನ್ನು ಪ್ರಧಾನಿ ಮೋದಿ 1 ಲಕ್ಷದ 32 ಸಾವಿರ ಕೋಟಿಗೆ ಏರಿಕೆ ಮಾಡಿ ರೈತರ ನೆರವಿಗೆ ನಿಂತಿದ್ದಾರೆ. ಕೃಷಿ ವಿಕಾಸ ಯೋಜನೆಯಡಿ 1.20 ಕೋಟಿ ರೂ.ಗಳನ್ನು ವ್ಯವಸಾಯೋತ್ಪನ್ನ ಸಂಸ್ಕರಣೆ, ಉತ್ಪನ್ನಗಳ ಕೇಂದ್ರಗಳ ಅಭಿವೃದ್ಧಿಗೆ ಮೀಸಲಿಟ್ಟಿದ್ದಾರೆ. ಪ್ರತಿ ಬೆಳೆಗಳನ್ನು ಶೇಖರಿಸಲು ಜಿಲ್ಲೆಗೊಂದು ಕೋಲ್ಡ್ ಸ್ಟೋರೇಜ್ ಕೇಂದ್ರ, ಟೆಸ್ಟ್ ಲ್ಯಾಬ್ ಕೇಂದ್ರಗಳನ್ನು ತೆರೆಯಲು ಅನುದಾನ ಮೀಸಲಿಟ್ಟಿದ್ದಾರೆ ಎಂದರು. ಜಗತ್ತಿನ ಇತರೆ ದೇಶಗಳು ಗುಣಮಟ್ಟದ ಬಿತ್ತನೆ ಬೀಜ, ಸಿರಿಧಾನ್ಯ, ಸಿರಿಧಾನ್ಯ ಉತ್ಪನ್ನಗಳನ್ನು ಖರೀದಿಸಲು ಸಿದ್ಧರಾಗಿದ್ದು, ಸಣ್ಣ ರೈತರು ಒಟ್ಟಾಗಿ ಉತ್ಪನ್ನಗಳ ಕೇಂದ್ರ ತೆರೆದು ಜಗತ್ತಿನ ಇತರೆ ದೇಶಗಳಿಗೆ ರಫ್ತು ಮಾಡಲು ಮುಂದಾಗಬೇಕು. ಅಪೇರಾ ಸಂಸ್ಥೆ ಮೂಲಕವೂ ಸಹ ರೈತರು ತಮ್ಮ ಉತ್ಪನ್ನಗಳು, ಬೆಳೆಗಳನ್ನು ವಿದೇಶಗಳಿಗೆ ರಫ್ತು ಮಾಡಲು ಅವಕಾಶವಿದ್ದು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಅರ್ಥ್ 360 ಇಕೋ ವೆಂಚರ್ಸ್ ವ್ಯವಸ್ಥಾಪಕ ನಿರ್ದೇಶಕ ಎಂ.ಎನ್ ದಿನೇಶ್ ಕುಮಾರ್ ಮಾತನಾಡಿ, ದೇಶದಲ್ಲಿ ಹಸಿರು ಕ್ರಾಂತಿ ಮೂಲಕ ಭತ್ತ, ಗೋಧಿ ಹೆಚ್ಚು ಬೆಳೆಯುವಂತಾಗಿ ಆಹಾರ ಸ್ವಾವಲಂಬನೆಗಳಿಸುವಂತಾಯಿತು. ಭತ್ತ, ಗೋಧಿ ಸಂಸ್ಕರಣೆ ಸುಲಭವಾಗಿರುವ ಕಾರಣ ಅದನ್ನು ಹೆಚ್ಚು ಬಳಸುವಂತಾಗಿದೆ. ಸಿರಿಧಾನ್ಯಗಳ ಸಂಸ್ಕರಣೆ ಬಹಳ ದೊಡ್ಡ ಸವಾಲು. ಆದ್ದರಿಂದಲೇ ಸಿರಿಧಾನ್ಯಗಳ ಬೆಲೆ ಹೆಚ್ಚಾಗಿದೆ. ಸಿರಿಧಾನ್ಯ ಸಂಸ್ಕರಣೆಯ ಸಂಶೋಧನೆಯಲ್ಲಿ ಭಾರತ ದೇಶ ಮುಂಚೂಣಿಯಲ್ಲಿದೆ ಎಂದರು. ರಾಷ್ಟ್ರೀಯ ಸ್ವಯಂ ಸೇವಕ ಸಿ.ಆರ್.ಮುಕುಂದ ಮಾತನಾಡಿ, ಋಷಿಮುನಿಗಳು ಸಿರಿಧಾನ್ಯ ಆರೋಗ್ಯಕರ ಆಹಾರ ಪರಂಪರೆಯ ಚೌಕಟ್ಟನ್ನು ಹಾಕಿಕೊಟ್ಟಿದ್ದರು. ಆ ಪರಂಪರೆಯನ್ನು ನಾವು ಕಳೆದುಕೊಂಡಿದ್ದೇವೆ. ಈ ಪರಂಪರೆಯನ್ನು ಪುನರುಜ್ಜೀವನಗೊಳಿಸುವುದು ನಮ್ಮ ಜವಾಬ್ದಾರಿ ಎಂದರು.

ಪ್ರಗತಿಪರ ರೈತ ಹೊನ್ನೂರು ಪ್ರಕಾಶ್ ಮಾತನಾಡಿ, ರೈತರು ಬೆಳೆಗಳನ್ನು ಹಾಗೆಯೇ ಮಾರುಕಟ್ಟೆಗೆ ಮಾರುತ್ತಿರುವುದರಿಂದ ರೈತ ಮಕ್ಕಳಿಗೆ ಹೆಣ್ಣು ಕೊಡುತ್ತಿಲ್ಲ. ರೈತರು ಬೆಳೆಯನ್ನು ಉತ್ಪನ್ನಗಳಾಗಿ ಪರಿವರ್ತಿಸಿ ಉದ್ಯಮಿಗಳಾದರೆ ಹೆಣ್ಣು ಕೊಡಲು ಮುಂದಾಗುತ್ತಾರೆ. ಬೆಂಗಳೂರಿನ ಸಿರಿಧಾನ್ಯ ಮೇಳದಲ್ಲಿ ಹಲವಾರು ಕಂಪನಿಗಳು ಮಾತ್ರ ಮಳಿಗೆ ತೆರೆದಿವೆ. ರೈತರೂ ಸಹ ಕಡಿಮೆ ಖರ್ಚಿನಲ್ಲಿ, ಕಡಿಮೆ ನೀರಿನಲ್ಲಿ ಸಿರಿಧಾನ್ಯ ಬೆಳೆಗಳನ್ನು ಬೆಳೆಯುವಂತಾಗಬೇಕು. ಜೊತೆಗೆ ಸಿರಿಧಾನ್ಯವನ್ನು ಉತ್ಪನ್ನಗಳಾಗಿ ಪರಿವರ್ತಿಸಿ ಮೌಲ್ಯವರ್ಧನೆ ನಡೆಸಿದಾಗ ಮಾತ್ರ ಮಾರುಕಟ್ಟೆಯನ್ನು ಕಂಡುಕೊಳ್ಳಬಹುದು. ಆಗ ಮಾತ್ರ ಆರ್ಥಿಕವಾಗಿ ಮುಂದುವರೆಯಲು ಸಾಧ್ಯ ಎಂದರು.

ಪಬ್ಲಿಕ್ ಟಿವಿಯ ಎಚ್.ಆರ್.ರಂಗನಾಥ್ ಮಾತನಾಡಿ, ಭಾರತ ದೇಶ 75 ವರ್ಷಗಳ ನಂತರ ಗ್ರಾಮೀಣ ಭಾರತ ಮಾಯವಾಗಿ ಶೇ.60 ರಷ್ಟು ಮಾತ್ರ ಗ್ರಾಮೀಣ ಭಾರತವಾಗಿದೆ. ಶೇ.40 ರಷ್ಟು ನಗರ ಪ್ರದೇಶವಾಗಿರುವ ಕಾರಣ ಕೃಷಿ ಕಾರ್ಮಿಕರ ವಿರಳತೆ ಕಾಣುತ್ತಿದೆ. ರೈತರು ಆಹಾರ, ವ್ಯವಹಾರ ದೃಷ್ಟಿಯಿಂದ ಸಿರಿಧಾನ್ಯ ಗಳನ್ನು ಬೆಳೆಯಲು ಮುಂದಾಗಬೇಕು. ಅಲ್ಲದೆ ರೈತರೂ ಸಹ ಗ್ರಾಮೀಣ ಅಮೆಜಾನ್ ನಂತಹ ಕಂಪನಿ ತೆರೆಯಬೇಕು. ಆಗ ಮಧ್ಯವರ್ತಿಗಳ ನಿಯಂತ್ರಣ ಜೊತೆಗೆ ಎಲ್ಲರಿಗೂ ಉದ್ಯೋಗ ದೊರಕುತ್ತದೆ ಎಂದರು. ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿದರು. ಹಿರಿಯೂರಿನ ಆದಿಜಾಂಬವ ಪೀಠದ ಷಡಕ್ಷರಮುನಿ ದೇಶಿಕೇಂದ್ರ ಸ್ವಾಮೀಜಿ, ಕಾಗಿನೆಲೆ ಗುರು ಪೀಠದ ನಿರಂಜನಾನಂದಪುರಿ ಸ್ವಾಮೀಜಿ ಶುಭ ಸಂದೇಶ ನೀಡಿದರು. ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು.

ಸಮಾರಂಭದಲ್ಲಿ ಸರಿತಾ, ಡಾ. ಬಿ.ಹೇಮಲಾನಾಯಕ್, ಪ್ರೊ.ಕೊರಿಶೆಟ್ಟರ್, ಮಾಜಿ ಶಾಸಕ ಡಾ.ಭಾರತೀ ಶಂಕರ್, ಸೋಮನಾಥ್, ವೆಂಕಟರಾಮ್ ಜೀ, ಸಂಗೀತ ವಿಶ್ವವಿದ್ಯಾಲಯದ ಕುಲಪತಿ ಬೆಟ್ಟಯ್ಯಕೋಟೆ ಇದ್ದರು.

> **ರೈತರ ಪರಿಸ್ಥಿತಿ ವರ್ಷದಿಂದ ವರ್ಷಕ್ಕೆ ಗಂಭೀರವಾಗುತ್ತಿದೆ. ಸರ್ಕಾರ ಬಿಎಸ್ಸಿ, ಎಂಎಸ್ಸಿ ಅಗ್ರಿಕಲ್ಚರ್ ಓದುವ ರೈತರ ಮಕ್ಕಳಿಗೆ ಶೇ.50 ರಷ್ಟು ಮೀಸಲಾತಿ ನೀಡುತ್ತಿದೆ. ಆದರೆ ವ್ಯಾಸಂಗ ಪೂರೈಸಿದವರು ಯಾರೂ ಸಹ ಹೊಲ, ತೋಟ ಮಾಡಿಲ್ಲ. ಬದಲಾಗಿ ನೌಕರಿಯಲ್ಲಿ ತೊಡಗುತ್ತಿದ್ದಾರೆ. ರೈತರ ಬೆಳೆ ಸಮಸ್ಯೆಗೆ ಹೇಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ. ಸರ್ಕಾರ ಮತ್ತು ಅಧಿಕಾರಿಗಳು ರೈತಪರ ಕಾಳಜಿಯಿಂದ ಮುತು ವರ್ಜಿ ವಹಿಸಿ ಕೆಲಸ ಮಾಡಿದಲ್ಲಿ ರೈತರ ಆತ್ಮಹತ್ಯೆಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ.**
>
> – ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸಭಾಧ್ಯಕ್ಷ.

ಒಂದನೇ ಪುಟದಿಂದ

ದಾಳಿ ನಡೆಸಿ ಹೊತ್ತೊಯ್ದ ಚಿರತೆ


ಕಾಣಿಸಿಕೊಂಡಿದೆ. ಮೂವರನ್ನು ಚಿರತೆ ಬಲಿ ಪಡೆದಿರುವ ಗ್ರಾಮಗಳು ಕೆಲವೇ ಕೆಲವು ಕಿಲೋಮೀಟರ್‌ಗಳ ಅಂತರದಲ್ಲಿದ್ದು, ಇದರಿಂದ ಗ್ರಾಮಸ್ಥರು ತೀವ್ರ ಭಯಭೀತರಾಗಿದ್ದಾರೆ. ಈವರೆಗೂ ಇದೇ ಪ್ರದೇಶದಲ್ಲಿ 2 ಚಿರತೆಗಳು ಸೆರೆಸಿಕ್ಕಿವೆಯಾದರೂ ಮಾನವರನ್ನು ಕೊಂದಿರುವುದು ಈ ಚಿರತೆಗಳೇ ಎಂಬುದರ ಬಗ್ಗೆ ಗ್ರಾಮಸ್ಥರು ಸಂಶಯ ವ್ಯಕ್ತಪಡಿಸಿದ್ದಾರೆ.

ಬಾಲಕನ ಮೇಲೆ ಚಿರತೆ ದಾಳಿ ನಡೆಸಿ, ಹೊತ್ತೊಯ್ದ ವಿಚಾರ ತಿಳಿಯುತ್ತಿದ್ದಂತೆಯೇ ಜಿಲ್ಲಾಧಿಕಾರಿ ರಾಜೇಂದ್ರ, ಡಿಸಿಎಫ್ ಕಮಲಾ ಕರಿಕಾಳನ್, ಎಸಿಎಫ್ ಲಕ್ಷ್ಮೀಕಾಂತ್, ಆರ್‌ಎಫ್‌ಓ ನದೀಮ್, ಪೊಲೀಸ್ ಇನ್ಸ್‌ಪೆಕ್ಟರ್‌ಗಳಾದ ಆನಂದ್, ಲೋಲಾಕ್ಷಿ, ತಲಕಾಡು ಠಾಣೆ ಸಬ್ ಇನ್ಸ್‌ಪೆಕ್ಟರ್ ಪಚ್ಚೇಗೌಡ ಸೇರಿದಂತೆ ಹಲವು ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿದ್ದಾರೆ. ಗ್ರಾಮದ ಮುಖ್ಯ ರಸ್ತೆಯಿಂದ ಕುರುಚಲು ಕಾಡು ಕಡೆಗೆ ರಕ್ತದ ಕಲೆಗಳು ಕಂಡುಬಂದಿರುವುದರಿಂದ ಈ ಬಾಲಕನನ್ನು ಚಿರತೆ ಹೊತ್ತೊಯ್ದಿದೆ ಎಂಬ ನಿರ್ಧಾರಕ್ಕೆ ಬಂದಿರುವ ಅಧಿಕಾರಿಗಳು ರಾತ್ರೋರಾತ್ರಿ ಕುರುಚಲು ಕಾಡಿನಲ್ಲಿ ಶೋಧನಾ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಸಾರ್ವಜನಿಕರು ಎಚ್ಚರಿಕೆಯಿಂದ ಇರಲು ಸೂಚನೆ


ತಿ.ನರಸೀಪುರ ತಾಲೂಕಿನಲ್ಲಿ ಚಿರತೆ ಮನುಷ್ಯರ ಮೇಲೆ ದಾಳಿ ಮಾಡಿ ಬಲಿ ಪಡೆಯುತ್ತಿರುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯು ಜನರಿಗೆ ಎಚ್ಚರಿಕೆಯಿಂದಿರುವಂತೆ ಸಾರ್ವಜನಿಕ ಪ್ರಕಟಣೆ ಹೊರಡಿಸಿದೆ. ಅರಣ್ಯ ಇಲಾಖೆಯ ಪ್ರಕಟಣೆ ಕರಪತ್ರಗಳನ್ನು ಚಿರತೆ ಹಾವಳಿ ಇರುವ ಗ್ರಾಮಗಳ ಸುತ್ತಮುತ್ತ ಹಂಚಲಾಗುತ್ತಿದೆ. ತಾಲೂಕಿನ ಕೆಲ ಗ್ರಾಮಗಳಲ್ಲಿ ಚಿರತೆ ಸೆರೆ ಕಾರ್ಯಾಚರಣೆ ಪ್ರಗತಿಯಲ್ಲಿದ್ದು, ಸಾರ್ವಜನಿಕರು ಎಚ್ಚರಿಕೆ ವಹಿಸಬೇಕೆಂದು ಅರಣ್ಯ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದ್ದು, ಮಕ್ಕಳು, ವೃದ್ಧರು ಮತ್ತು ಮಹಿಳೆಯರು ಯಾವುದೇ ಕಾರಣಕ್ಕೂ ಒಂಟಿಯಾಗಿ ಓಡಾಡಬಾರದು. ಸಂಜೆ 6 ಗಂಟೆ ಒಳಗೆ ಮನೆಗೆ ಸೇರುವುದು. ಯಾವುದೇ ಕಾರಣಕ್ಕೂ ಬಯಲು ಬಹಿರ್ದೆಸೆಗೆ ಹೋಗಬಾರದು. ಚಿರತೆ ಕಂಡು ಬಂದಲ್ಲಿ ಯಾವುದೇ ಕಾರಣಕ್ಕೂ ಹೆಚ್ಚು ಜನ ಸೇರಿ ಗದ್ದಲ ಮಾಡಬಾರದು. ಸಾಕುಪ್ರಾಣಿಯನ್ನು ಚಿರತೆ ದಾಳಿ ನಡೆಸಿ ಕೊಂದು ತಿಂದಿದ್ದರೆ, ಉಳಿದಿದ್ದನ್ನು ಮುಟ್ಟಬಾರದು. ಚಿರತೆ ಬಗ್ಗೆ ಯಾವುದೇ ಮಾಹಿತಿ ಇದ್ದಲ್ಲಿ ಅರಣ್ಯ ಇಲಾಖೆ ಸಹಾಯವಾಣಿ 1926, 9845772744, 9945921926 ಕರೆ ಮಾಡಿ ಮಾಹಿತಿ ನೀಡುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಮೈಸೂರು ವಿಭಾಗದ ಡಿಸಿಎಫ್ ಆಗಿ ಕೆ.ಎನ್.ಬಸವರಾಜ್ ನಿಯೋಜನೆ



ಮೈಸೂರು, ಜ.21(ಎಂಕೆ)– ಮೈಸೂರು ವಿಭಾಗದ ಅರಣ್ಯ ಉಪ ಸಂರಕ್ಷಣಾಧಿಕಾರಿಯಾಗಿ ಕೆ.ಎನ್.ಬಸವರಾಜ್ ವರ್ಗಾವಣೆಯಾಗಿದ್ದಾರೆ.

ಹಾಸನ ವಿಭಾಗದ ಅರಣ್ಯ ಉಪ ಸಂರಕ್ಷಣಾಧಿಕಾರಿಯಾಗಿದ್ದ ಇವರನ್ನು ಮೈಸೂರು ವಿಭಾಗದ ಅರಣ್ಯ ಉಪ ಸಂರಕ್ಷಣಾಧಿಕಾರಿ ಸ್ಥಾನಕ್ಕೆ ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಹೆಚ್.ಆರ್.ಅನುರಾಧ ಆದೇಶ ಹೊರಡಿಸಿದ್ದಾರೆ. ಹಾಗೆಯೇ ಬೆಂಗಳೂರಿನ ಬನ್ನೇರುಘಟ್ಟ ಬಯೋಲಾಜಿಕಲ್ ಪಾರ್ಕ್ ಉಪ ಸಂರಕ್ಷಣಾಧಿಕಾರಿ ಹಾಗೂ ಉಪ ನಿರ್ದೇಶಕರಾಗಿದ್ದ ಕೆ.ಹರೀಶ್ ಅವರನ್ನು ಹಾಸನ ವಿಭಾಗದ ಅರಣ್ಯ ಉಪ ಸಂರಕ್ಷಣಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ.



ಮೈಸೂರಿನ ವಿಜಯನಗರ ಬಡಾವಣೆಯಲ್ಲಿ ಶ್ರೀ ಕೃಷ್ಣದೇವರಾಯ ಜಯಂತಿ ಅಂಗವಾಗಿ ಶ್ರೀ ಕೃಷ್ಣದೇವರಾಯ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಸಿಹಿ ವಿತರಿಸಲಾಯಿತು. ಈ ವೇಳೆ ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್, ಸ್ಥಳೀಯ ಮುಖಂಡರಾದ ಸಿ.ವಿ.ಕೇಶವಮೂರ್ತಿ, ಬಾಬುಸಿಂಗ್, ಪುಟ್ಟಸ್ವಾಮಿ, ದಶರಥ್, ಜಗದೀಶ್, ರೋಹಿತ್ ಸೇರಿದಂತೆ ಇನ್ನಿತರರಿದ್ದರು.

ಒಲಿಂಪಿಕ್: ಆರು ತಂಡಗಳ ಟಿ20 ಸ್ಪರ್ಧೆಗೆ ಐಸಿಸಿ ಶಿಫಾರಸು

ನವದೆಹಲಿ, ಜ.21– ಲಾಸ್ ಏಂಜಲೀಸ್‌ನಲ್ಲಿ ನಡೆಯಲಿರುವ 2028ರ ಒಲಿಂಪಿಕ್ಸ್‌ಗೆ ಕ್ರಿಕೆಟ್ ಸೇರ್ಪಡೆಗೊಳಿಸುವ ವಿಶ್ವಾಸವನ್ನು, ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಹೊಂದಿದೆ. ಪುರುಷ ಮತ್ತು ಮಹಿಳೆಯರ ವಿಭಾಗಗಳಲ್ಲಿ ಆರು ತಂಡಗಳ ಟಿ20 ಮಾದರಿ ಸ್ಪರ್ಧೆ ನಡೆಸಲು ಕ್ರೀಡಾಕೂಟದ ಆಯೋಜನಾ ಸಮಿತಿಗೆ 'ಶಿಫಾರಸು' ಮಾಡಿದೆ. ಕ್ರಿಕೆಟ್ ಸೇರ್ಪಡೆ ಕುರಿತು ಅಂತಿಮ ನಿರ್ಧಾರವನ್ನು ಅಂತರರಾಷ್ಟ್ರೀಯ ಒಲಿಂಪಿಕ್ ಕೌನ್ಸಿಲ್ (ಐಒಸಿ) ಅಕ್ಟೋಬರ್ ವೇಳೆಗೆ ತೆಗೆದುಕೊಳ್ಳಲಿದೆ. ಹೊಸ ಕ್ರೀಡೆಗಳ ಸೇರ್ಪಡೆ ಕುರಿತು ಮಾರ್ಚ್‌ನಲ್ಲಿ ಪಟ್ಟಿ ತಯಾರಿಸಲಾಗುತ್ತದೆ ಎಂದು ಇಎಸ್‌ಪಿಎನ್ ಕ್ರಿಕ್‌ಇನ್ಫೊ ವರದಿ ಮಾಡಿದೆ. ಮುಂಬೈನಲ್ಲಿ ಅಕ್ಟೋಬರ್‌ನಲ್ಲಿ ಐಒಸಿ ಸಭೆ ನಡೆಯುವ ನಿರೀಕ್ಷೆಯಿದ್ದು, ಆಗ ಈ ಪಟ್ಟಿಗೆ ಅನುಮೋದನೆ ಸಿಗಲಿದೆ. ಐಸಿಸಿ ಚೇರ್ಮನ್ ಗ್ರೇಗ್ ಬಾರ್ಕ್ಲೆ ಮುಖ್ಯಸ್ಥರಾಗಿರುವ ಐಸಿಸಿ ಒಲಿಂಪಿಕ್ಸ್ ಕಾರ್ಯಕಾರಿ ಗುಂಪಿಗೆ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರನ್ನು ಸೇರ್ಪಡೆ ಮಾಡಲಾಗಿದೆ. ಇಂದ್ರಾ ನೂಯಿ (ಸ್ವತಂತ್ರ ನಿರ್ದೇಶಕಿ) ಮತ್ತು ಪರಾಗ್ ಮರಾಠೆ (ಅಮೆರಿಕ ಕ್ರಿಕೆಟ್ ಸಂಸ್ಥೆಯ ಮಾಜಿ ಅಧ್ಯಕ್ಷ) ಕೂಡ ಈ ಗುಂಪಿನಲ್ಲಿದ್ದಾರೆ. 2036 ಒಲಿಂಪಿಕ್ಸ್‌ಗೆ ಭಾರತ ಆತಿಥ್ಯ ವಹಿಸುವ ಆಕಾಂಕ್ಷೆಯನ್ನು ಗಮನದಲ್ಲಿಟ್ಟುಕೊಂಡು ಶಾ ಅವರನ್ನು ಸೇರ್ಪಡೆ ಮಾಡಲಾಗಿದೆ.

ತ್ರಿನೇತ್ರ ಸರ್ಕಲ್‌ನಿಂದ ವಿಜಯನಗರ ವಾಟರ್ ಟ್ಯಾಂಕ್‌ವರೆಗಿನ ರಸ್ತೆ ಅಭಿವೃದ್ಧಿ ನೆನೆಗುದಿಗೆ: ಕೆ.ವಿ.ಶ್ರೀಧರ್ ನೇತೃತ್ವದಲ್ಲಿ ನಾಗರಿಕರ ಪ್ರತಿಭಟನೆ

● ಸ್ಥಳದಲ್ಲಿ ಮುಡಾ ಅಧಿಕಾರಿಗಳಿಗೆ ಘೇರಾವ್; ಛೀಮಾರಿ ● ಪ್ರತಿನಿತ್ಯ ಬವಣೆ ಅನುಭವಿಸುತ್ತಿದ್ದ ಜನರ ಆಕ್ರೋಶ

ಮೈಸೂರು, ಜ. 21(ಜಿಎ)– ರಸ್ತೆ ಕಾಮಗಾರಿ ಆರಂಭವಾಗಿ ಮೂರು ತಿಂಗಳು ಕಳೆದರೂ ಪೂರ್ಣಗೊಳ್ಳದೆ ಕುಂಟುತ್ತಾ ಸಾಗುತ್ತಿರುವುದರಿಂದ ಬೇಸತ್ತ ಸ್ಥಳೀಯರು ಕಾರ್ಪೊರೇಟರ್ ಕೆ.ವಿ. ಶ್ರೀಧರ್ ನೇತೃತ್ವದಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧಿಕಾರಿಗಳಿಗೆ ಘೇರಾವ್ ಹಾಕಿದ ಘಟನೆ ಮೈಸೂರಿನ ಗೋಕುಲಂ 3ನೇ ಹಂತದ ತ್ರಿನೇತ್ರ ಸರ್ಕಲ್ ಬಳಿ ಶನಿವಾರ ನಡೆದಿದೆ.

ಗೋಕುಲಂ 3ನೇ ಹಂತದ ತ್ರಿನೇತ್ರ ಸರ್ಕಲ್‌ನಿಂದ ವಿಜಯನಗರ 2ನೇ ಹಂತದ ವಾಟರ್ ಟ್ಯಾಂಕ್‌ವರೆಗಿನ ಕೇವಲ 700 ಮೀಟರ್ ಉದ್ದದ ರಸ್ತೆ ಅಭಿವೃದ್ಧಿ ಕಾಮಗಾರಿ ಕಳೆದ 3 ತಿಂಗಳಿಂದ ನೆನೆಗುದಿಗೆ ಬಿದ್ದಿದೆ. ಆರಂಭದ ಶೂರತ್ವ ಎಂಬಂತೆ ಅಭಿವೃದ್ಧಿಗಾಗಿ ರಸ್ತೆಯನ್ನು ಸಂಪೂರ್ಣವಾಗಿ ಅಗೆದ ನಂತರ ಕಾಮಗಾರಿ ಮುಂದುವರೆಸದೆ ಸ್ಥಗಿತಗೊಳಿಸಿರುವುದರಿಂದ ಈ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರು ನರಕಯಾತನೆ ಅನುಭವಿಸಬೇಕಾಗಿದೆ. ದೂಳಿನಿಂದಾಗಿ ಸಾರ್ವಜನಿಕರು ಅಸ್ತಮಾದಂತಹ ವಿವಿಧ ಕಾಯಿಲೆಗಳಿಗೆ ತುತ್ತಾಗುವ ಅಪಾಯವೂ ಎದುರಾಗಿದೆ. ಈ ಮಧ್ಯೆ ಪ್ರತಿದಿನ ಅಗೆದಿರುವ ಈ ಮಣ್ಣಿನ ರಸ್ತೆಯಲ್ಲಿ ಬೆಳಗ್ಗೆಯಿಂದಲೇ ದೂಳು ಅಡಗಿಸಲು ಟ್ಯಾಂಕರ್‌ನಲ್ಲಿ ನೀರು ಹಾಕುತ್ತಿರುವುದರಿಂದ ಇದು ಕೊಚ್ಚೆಗುಂಡಿಯಾಗಿ ಪರಿಣಮಿಸುತ್ತಿದೆ. ಅಲ್ಲಿ ಸಂಚರಿಸುವ ದ್ವಿಚಕ್ರ ವಾಹನ ಸವಾರರು ಜಾರಿ ಬಿದ್ದು ಗಾಯಗೊಳ್ಳುತ್ತಿರುವ ಘಟನೆಗಳು ದಿನನಿತ್ಯ ನಡೆಯುತ್ತಿವೆ.



ಈ ಸಂಬಂಧ ಕಾರ್ಪೊರೇಟರ್ ಕೆ.ವಿ. ಶ್ರೀಧರ್ ಅವರು ನಗರಪಾಲಿಕೆ ಮತ್ತು ಮುಡಾ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಇಂದು ಬೆಳಗ್ಗೆ ಕಾಮಗಾರಿ ಪರಿಶೀಲನೆಗಾಗಿ ಮುಡಾ ಎಇಇ ಶ್ರೀನಿವಾಸ್ ಅವರು ಆಗಮಿಸಿದಾಗ ಸ್ಥಳೀಯರು ಕೆ.ವಿ.ಶ್ರೀಧರ್ ನೇತೃತ್ವದಲ್ಲಿ ಅವರಿಗೆ ಘೇರಾವ್ ಹಾಕಿದರು. ಅಧಿಕಾರಿಗಳ ವಿರುದ್ಧ ಘೋಷಣೆವುಳ್ಳ ಪ್ಲೇಕಾರ್ಡ್‌ಗಳನ್ನು ಪ್ರದರ್ಶಿಸಿದರು. ಸುಮಾರು 2 ಗಂಟೆಗಳ ಕಾಲ ಮುಡಾ ಎಇಇಗೆ ಸ್ಥಳೀಯರು ಘೇರಾವ್ ಹಾಕಿದ ನಂತರ ಸ್ಥಳಕ್ಕೆ ಆಗಮಿಸಿದ ಮುಡಾ ಹಿರಿಯ ಅಧಿಕಾರಿಗಳು 15 ದಿನಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳಿಸುವ ಭರವಸೆ ನೀಡಿದರು. ಈ ವೇಳೆ 15 ದಿನದಲ್ಲಿ ಕಾಮಗಾರಿ ಮುಗಿಯದಿದ್ದರೆ, ತಮ್ಮ ಹೋರಾಟದ ದಿಕ್ಕು ಬದಲಾಗಲಿದೆ ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ ಸ್ಥಳೀಯರು ಪ್ರತಿಭಟನೆಯನ್ನು ಹಿಂಪಡೆದರು.

> ಹೆಬ್ಬಾಳು ಭಾಗದಲ್ಲಿ ಅನೇಕ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಆದರೆ ಅವುಗಳಲ್ಲಿ ಕೆಲವು ಬರೀ ಶಂಕುಸ್ಥಾಪನೆಗಷ್ಟೇ ಸೀಮಿತವಾಗಿವೆ. ಇನ್ನೂ ಕೆಲವು ಅರ್ಧಂಬರ್ಧ ಆಗಿವೆ. ಗುತ್ತಿಗೆದಾರರು, ಅಧಿಕಾರಿಗಳ ಬೇಜವಾಬ್ದಾರಿತನದಿಂದಾಗಿ ಜನ ಸಮಸ್ಯೆ ಎದುರಿಸುವಂತಾಗಿದೆ. **–ಕೆ.ವಿ.ಶ್ರೀಧರ್, ಕಾರ್ಪೋರೇಟರ್**

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಕಾರ್ಪೊರೇಟರ್ ಕೆ.ವಿ.ಶ್ರೀಧರ್, ಅಧಿಕಾರಿಗಳ ಬೇಜವಾಬ್ದಾರಿತನದಿಂದ ಕಾಮಗಾರಿ ಕುಂಟುತ್ತಾ ಸಾಗುತ್ತಿದೆ. ಇದರ ಪರಿಣಾಮವಾಗಿ ಬಡಾವಣೆಯ ಜನರು ಪ್ರತಿನಿತ್ಯ ಸಂಕಷ್ಟ ಅನುಭವಿಸಬೇಕಾಗಿದೆ. ಜಯದೇವ ಹೃದ್ರೋಗ ಆಸ್ಪತ್ರೆ, ಜಿಲ್ಲಾಸ್ಪತ್ರೆ, ಆಯುರ್ವೇದಿಕ್ ಆಸ್ಪತ್ರೆ, ಪಿಕೆಟಿಬಿ ಆಸ್ಪತ್ರೆಗಳು ಇರುವುದರಿಂದ ಈ ಭಾಗ ಮೆಡಿಕಲ್ ಹಬ್ ಆಗಿದೆ. ಹುಣಸೂರು ಕಡೆಯಿಂದ ಈ ಆಸ್ಪತ್ರೆಗಳಿಗೆ ಬರುವ ಆಂಬುಲೆನ್ಸ್ ಸೇರಿದಂತೆ ಮತ್ತಿತರ ವಾಹನಗಳು ಇದೇ ರಸ್ತೆಯಲ್ಲಿ ಸಂಚರಿಸಬೇಕಾಗಿದೆ. ಇಲ್ಲಿ ವಿದ್ಯಾವರ್ಧಕ ಇಂಜಿನಿಯರಿಂಗ್, ವಿದ್ಯಾವರ್ಧಕ ಪಾಲಿಟೆಕ್ನಿಕ್, ಕೆ. ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು, ಪಿಯು ಕಾಲೇಜು ಸೇರಿದಂತೆ ಪ್ರಮುಖ ವಿದ್ಯಾ ಸಂಸ್ಥೆಗಳಿದ್ದು, ಸಾವಿರಾರು ವಿದ್ಯಾರ್ಥಿಗಳು ಈ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ತೆರಳುವಾಗ ಅಪಘಾತಕ್ಕೀಡಾಗುತ್ತಿದ್ದಾರೆ. ಹಲವಾರು ಕಿಲೋಮೀಟರ್ ರಸ್ತೆಗಳನ್ನು ಕೆಲವೇ ದಿನಗಳಲ್ಲಿ ನೂತನ ತಂತ್ರಜ್ಞಾನ ಬಳಸಿ ನಿರ್ಮಿಸಲಾಗುತ್ತಿದೆ. ಆದರೆ, ಕೇವಲ 700 ಮೀಟರ್ ರಸ್ತೆ ಅಭಿವೃದ್ಧಿ ಕಾಮಗಾರಿ 3 ತಿಂಗಳಾದರೂ ಪೂರ್ಣಗೊಳ್ಳದೇ ಇರುವುದು ಅಧಿಕಾರಿಗಳ ಬೇಜವಾಬ್ದಾರಿತನವನ್ನು ಎತ್ತಿ ತೋರುತ್ತಿದೆ. ಜನಪ್ರತಿನಿಧಿಯಾಗಿ ತಾವೂ ಕೂಡ ಹಲವಾರು ಬಾರಿ ಅಧಿಕಾರಿಗಳನ್ನು ಸಂಪರ್ಕಿಸಿ. ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗದಿದ್ದಾಗ ಅನಿವಾರ್ಯವಾಗಿ ಸ್ಥಳೀಯರೊಡಗೂಡಿ ಪ್ರತಿಭಟನೆಗಿಳಿಯಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು ಎಂದರು. ನಾಳೆಯಿಂದ ಕಾಮಗಾರಿ ತ್ವರಿತಗತಿಯಲ್ಲಿ ನಡೆಯದಿದ್ದರೆ ರಸ್ತೆ ತಡೆ ಮಾಡಲು ಸ್ಥಳೀಯರು ನಿರ್ಧರಿಸಿದ್ದು, ಅಂತಹ ಪರಿಸ್ಥಿತಿ ಎದುರಾದರೆ ತಾವು ಕೂಡ ರಸ್ತೆ ತಡೆಯಲ್ಲಿ ಭಾಗವಹಿಸುವುದಾಗಿ ಕೆ.ವಿ. ಶ್ರೀಧರ್ ತಿಳಿಸಿದರು.

ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಅವರು ಮೂರು ತಿಂಗಳ ಹಿಂದೆ ಈ ಕಾಮಗಾರಿಗೆ ಚಾಲನೆ ನೀಡಿದ್ದರು. ಆ ಸಂದರ್ಭದಲ್ಲಿ ಸ್ಥಳೀಯರು, ಈ ರಸ್ತೆ ಉತ್ತಮವಾಗಿ ಅಭಿವೃದ್ಧಿಗೊಳ್ಳುತ್ತದೆ ಎಂದು ಹರ್ಷ ವ್ಯಕ್ತಪಡಿಸಿದ್ದರು. ಆದರೆ, ರಸ್ತೆ ಅಗೆದ ನಂತರ ಕಾಮಗಾರಿ ಅಷ್ಟಕ್ಕೇ ಸ್ಥಗಿತಗೊಂಡು ಸಂಕಷ್ಟ ಎದುರಾಗಿದ್ದರಿಂದ ಸಹನೆಯ ಕಟ್ಟೆ ಒಡೆದು, ಪ್ರತಿಭಟನೆ ಹಾದಿ ತುಳಿದಿದ್ದಾರೆ.

ಸಿದ್ಧಗಂಗಾ ಡಾ.ಶಿವಕುಮಾರ ಸ್ವಾಮೀಜಿಯವರ ಆದರ್ಶ ಮಾರ್ಗದಲ್ಲಿ ಸಾಗೋಣ

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ ಕರೆ

ಮೈಸೂರು, ಜ.21–ಶಿವಕುಮಾರ ಸ್ವಾಮೀಜಿ ಸೂರ್ಯನಂತೆ ಎಲ್ಲರ ಮನೆ, ಮನಸ್ಸು ಬೆಳಗುವ ಮಹಾನ್ ಚೇತನ. ನಮ್ಮೊಂದಿಗೆ ಸದಾ ಇರುತ್ತಾರೆ. ಅವರನ್ನು ಸ್ಮರಣೆ ಮಾಡುವುದರೊಂದಿಗೆ ಅವರ ದಾರಿಯಲ್ಲಿ ನಾವು ಸಾಗಬೇಕು, ಅವರ ದಾರಿಯಲ್ಲಿ ಸಾಗಿದರೆ ಮಾತ್ರ ಅವರ ಸ್ಮರಣೋತ್ಸವ ಸಾರ್ಥಕವಾಗುತ್ತದೆ ಎಂದು ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ ಹೇಳಿದರು.



ಪ್ರಜ್ಞಾವಂತ ನಾಗರಿಕ ವೇದಿಕೆ ಹಾಗೂ ಜೀವಧಾರ ರಕ್ತ ನಿಧಿ ಕೇಂದ್ರದ ವತಿಯಿಂದ ಶ್ರೀ ಸಿದ್ಧಗಂಗಾ ಶ್ರೀ ಶಿವಕುಮಾರ ಸ್ವಾಮಿಗಳ 3ನೇ ವರ್ಷದ ಪುಣ್ಯಸ್ಮರಣೆಯನ್ನು ಕುವೆಂಪುನಗರದಲ್ಲಿರುವ ಶ್ರೀ ಸಿದ್ಧಗಂಗಾ ಶ್ರೀ ಶಿವಕುಮಾರ ಸ್ವಾಮಿಗಳ ವೃತ್ತದಲ್ಲಿ ಶ್ರೀಗಳ ನುಡಿನಮನ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ಅವರು, ಶ್ರೀಗಳ ದಾರಿಯಲ್ಲಿ ಸಾಗೋಣ, ಶಿವಕುಮಾರ ಸ್ವಾಮೀಜಿಯವರು ಸೂರ್ಯನಂತೆ ಎಲ್ಲರ ಮನೆ, ಮನಸ್ಸು ಬೆಳಗುವ ಮಹಾನ್ ಚೇತನ. ಅವರು ನಮ್ಮೊಂದಿಗೆ ಇಂದಿಗೂ ಇದ್ದಾರೆ, ಮುಂದೆಯೂ ಇರುತ್ತಾರೆ. ಸ್ವಾಮೀಜಿ ಅವರನ್ನು ಸ್ಮರಣೆ ಮಾಡುವುದರೊಂದಿಗೆ ಅವರ ಆದರ್ಶ ಮಾರ್ಗದಲ್ಲಿ ನಾವು ಸಾಗಬೇಕು. ಆಗ ಮಾತ್ರ ಅವರ ಸ್ಮರಣೋತ್ಸವ ಸಾರ್ಥಕವಾಗುತ್ತದೆ ಎಂದು ಹೇಳಿದರು.

ಇಷ್ಟಲಿಂಗ ಪೂಜೆಯನ್ನು ಜಗತ್ತಿಗೆ ತೋರಿಸಿಕೊಟ್ಟವರು ಶಿವಕುಮಾರ ಸ್ವಾಮೀಜಿ. ಇಷ್ಟಲಿಂಗ ಪೂಜೆಯನ್ನು ಇಷ್ಟಪಟ್ಟು ಮಾಡುತ್ತಲೇ ತಮ್ಮ ಶಕ್ತಿ ಪಡೆದುಕೊಳ್ಳುತ್ತಿದ್ದರು ಎಂದರು.

ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷರಾದ ಬಿ.ಎಂ.ರಘು ಮಾತನಾಡಿ, ಶಿವಕುಮಾರ ಸ್ವಾಮೀಜಿಯ ಸ್ಮರಣೆಯೇ ನಮಗೆ ಬೆಳಕು. ಅವರು ಅಪರೂಪದ ಮುತ್ತು. ತಮ್ಮ ಜೀವನವೇ ಒಂದು ಸಂದೇಶ ಎಂಬಂತೆ ಬದುಕಿದ ಶ್ರೀಗಳು ಪ್ರತಿಯೊಬ್ಬರಿಗೂ ಮಾದರಿಯಾಗಿದ್ದಾರೆ ಎಂದರು.

ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಮಾತನಾಡಿ, ಸಿದ್ಧಗಂಗಾ ಶ್ರೀಗಳಿಗೆ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಬೇಕು. ತ್ರಿವಿಧ ದಾಸೋಹಿ ಸಿದ್ಧಗಂಗಾ ಶ್ರೀಗಳು ಮಾಡಿದ ಕಾರ್ಯ ದೇಶಕ್ಕೆ ಮಾದರಿಯಾಗಿದೆ. ಅವರಿಗೆ ಭಾರತ ರತ್ನ ನೀಡಿ ಗೌರವಿಸಿದರೆ ಪ್ರಶಸ್ತಿಗೆ ಗೌರವ ನೀಡಿದಂತಾಗುತ್ತದೆ. ಜಾತಿ–ಮತ, ಪಂಥ, ಭಾಷೆ, ಧರ್ಮ ಎನ್ನದೆ ಲಕ್ಷಾಂತರ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಿ ನಾಡನ್ನು ಶ್ರೀಮಂತಗೊಳಿಸಿದ ಶ್ರೀಗಳಿಗೆ ತಕ್ಷಣವೇ ಭಾರತ ರತ್ನ ಪ್ರಶಸ್ತಿ ಘೋಷಣೆ ಮಾಡಬೇಕು ಎಂದು ಆಗ್ರಹಿಸಿದರು. ಪಾಲಿಕೆ ನಾಮನಿರ್ದೇಶಕ ಜಗದೀಶ್, ಪ್ರಜ್ಞಾವಂತ ನಾಗರಿಕ ವೇದಿಕೆ ಅಧ್ಯಕ್ಷ ಕಡಕೊಳ ಜಗದೀಶ್, ರಾಕೇಶ್, ರಾಜೇಶ್, ಲಿಂಗರಾಜು, ಅಭಿಷೇಕ್‌ಗೌಡ, ಅಪೂರ್ವ ಸುರೇಶ್, ದುರ್ಗಾ ಪ್ರಸಾದ್ ಇನ್ನಿತರರು ಇದ್ದರು.

ಅಂತರರಾಷ್ಟ್ರೀಯ ಲಯನ್ ಸಂಸ್ಥೆ ನೂತನ ಜಿಲ್ಲೆ 317G ಚುನಾಯಿತ ರಾಜ್ಯಪಾಲರಿಗೆ ಸನ್ಮಾನ



ಮೈಸೂರು, ಜ.21–ಮೈಸೂರಿನ ತಿಲಕ್‌ನಗರದಲ್ಲಿರುವ ಲಯನ್ಸ್ ಕ್ಲಬ್ ಆಫ್ ಮೈಸೂರ್ ವತಿಯಿಂದ ಅಂತರರಾಷ್ಟ್ರೀಯ ಲಯನ್ ಸಂಸ್ಥೆ ನೂತನ ಜಿಲ್ಲೆ 317 ಜಿಲ್ಲೆಯ ರಾಜ್ಯಪಾಲರಿಗೆ ಅಭಿನಂದನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಮಾಜಿ ಜಿಲ್ಲಾ ರಾಜ್ಯಪಾಲರಾದ ಲಯನ್ ಕೆದೇವೇಗೌಡ ಕಾರ್ಯಕ್ರಮ ಉದ್ಘಾಟಿಸಿ, ನೂತನ ಜಿಲ್ಲೆ 317 ಚುನಾಯಿತ ರಾಜ್ಯಪಾಲ ಲಯನ್ ಕೃಷ್ಣೇಗೌಡ, ಚುನಾಯಿತ 1ನೇ ಉಪರಾಜ್ಯಪಾಲ ಲಯನ್ ಸುಬ್ರಮಣ್ಯ, 2ನೇ ಉಪ ರಾಜ್ಯಪಾಲ ಲಯನ್ ರಾಜಶೇಖರ್ ಅವರನ್ನು ಅಭಿನಂದಿಸಿದರು. ಅತಿಥಿಗಳಾಗಿ ಪಾಲಿಕೆ ಸದಸ್ಯ ಆರ್.ರಂಗಸ್ವಾಮಿ, ಕ್ಲಬ್ಬಿನ ಅಧ್ಯಕ್ಷ ಲಯನ್ ಬಿ.ಎಲ್.ಗಿರೀಶ್, ಕಾರ್ಯದರ್ಶಿ ಎಚ್.ಬಿ.ಸುರೇಶ್, ಖಜಾಂಚಿ ಎಸ್.ಮುಕೇಶ್, 1ನೇ ಉಪಾಧ್ಯಕ್ಷ ಲಯನ್ ಬಿ.ಭಾರತಿ, ಸದಸ್ಯರಾದ ಲಯನ್ ಜಿ.ಲೋಕೇಶ್, ಶಿವಕುಮಾರ್, ಮೋಹನ್ ಕುಮಾರ್, ಎನ್.ಟಿ.ಶ್ರೀನಿವಾಸ್, ವಿರೂಪಾಕ್ಷ, ಪಿ.ರಮೇಶ್, ಬಿ.ಶಿವಣ್ಣ, ಪ್ರತಿಮಾ ರಮೇಶ್, ಉಮಾಪತಿ, ಸತ್ಯನಾರಾಯಣ್ ರಾವ್, ರಾಮಲಿಂಗಯ್ಯ, ರಾಮಚಂದ್ರರಾವ್, ರಾಮಣ್ಣ, ಗೀತ ಕೃಷ್ಣಮೂರ್ತಿ, ಕೃಷ್ಣಮೂರ್ತಿ ಉಪಸ್ಥಿತರಿದ್ದರು. ಇದೇ ವೇಳೆ ಸೇವಾ ಕಾರ್ಯಕ್ರಮವಾಗಿ ಕ್ಯಾನ್ಸರ್ ಪೀಡಿತ ರೋಗಿಗೆ 15,000 ರೂ.ಗಳನ್ನು ನೀಡಲಾಯಿತು.

ಎನ್.ಆರ್.ಕ್ಷೇತ್ರದಲ್ಲಿ ಬಿಜೆಪಿ ವಿಜಯ ಸಂಕಲ್ಪ ಅಭಿಯಾನ



ಮೈಸೂರು, ಜ.21(ಎಂಕೆ)– ಮೈಸೂರಿನ ರಾಜೇಂದ್ರನಗರದ ಗಣೇಶ್‌ನಗರದಲ್ಲಿ ಬಿಜೆಪಿ ವಿಜಯ ಸಂಕಲ್ಪ ಅಭಿಯಾನ ನಡೆಯಿತು. ಇಲ್ಲಿನ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ನಂಜುಂಡಸ್ವಾಮಿ, ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ ನೀಡಿದರು. ಬಳಿಕ ಪ್ರತಿ ಮನೆ–ಮನೆಗೆ ತೆರಳಿ ರಾಜ್ಯ ಸರ್ಕಾರ ನೀಡಿರುವ ಜನಪರ ಯೋಜನೆಗಳ ಮಾಹಿತಿಯುಳ್ಳ ಕರಪತ್ರ ವಿತರಿಸಿ, ಫಲಾನುಭವಿಗಳಿಗೆ ಸದಸ್ಯತ್ವ ನೀಡಲಾಯಿತು.

ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಮಾಜಿ ಮೇಯರ್ ಸಂದೇಶಸ್ವಾಮಿ, ನರಸಿಂಹರಾಜ ಕ್ಷೇತ್ರದ ಅಧ್ಯಕ್ಷ ಡಾ.ಭಾನುಪ್ರಕಾಶ್, ನಗರ ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಜಿ. ಗಿರಿಧರ್, ಸೋಮಸುಂದರ್, ಚೇತನ್, ಕ್ಷೇತ್ರದ ಕಾರ್ಯದರ್ಶಿಗಳ ಸ್ವಾಮಿಗೌಡ, ಅಲ್ಪಸಂಖ್ಯಾತರ ಘಟಕದ ಅನಿಲ್ ಥಾಮಸ್, ವಿನೋದ್, ಚೇತನ್, ವಿ.ಗಿರಿಧರ್, ನರಸಿಂಹಮೂರ್ತಿ, ಆಶಾ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಜಿಲ್ಲೆಯ ಸರ್ಕಾರಿ ಶಾಲಾ–ಕಾಲೇಜು ವಿದ್ಯುತ್ ಸಂಪರ್ಕ ಕಡಿತಗೊಳಿಸದಂತೆ ಕ್ರಮ ವಹಿಸಿ

ಪ್ರಾಥಮಿಕ–ಪ್ರೌಢಶಿಕ್ಷಣ ಸಚಿವರಲ್ಲಿ ಎಂಎಲ್‌ಸಿ ಮರಿತಿಬ್ಬೇಗೌಡ ಮನವಿ

ಮೈಸೂರು,ಜ.21(ಪಿಎಂ)–ಮೈಸೂರು ಜಿಲ್ಲೆ ಮತ್ತು ತಾಲೂಕು ವ್ಯಾಪ್ತಿಯಲ್ಲಿನ ಸರ್ಕಾರಿ ಶಾಲಾ ಕಾಲೇಜುಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸದಂತೆ ಕ್ರಮ ವಹಿಸಬೇಕೆಂದು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರಲ್ಲಿ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಕೋರಿದ್ದಾರೆ.

ಮೈಸೂರು ಜಿಲ್ಲಾ ಮತ್ತು ತಾಲೂಕು ವ್ಯಾಪ್ತಿಯಲ್ಲಿನ ಸರ್ಕಾರಿ–ಶಾಲಾ ಕಾಲೇಜುಗಳಲ್ಲಿ ಅನುದಾನದ ಕೊರತೆಯಿಂದ ಬಿಲ್ಲನ್ನು ಸಕಾಲದಲ್ಲಿ ಪಾವತಿಸಲು ಸಾಧ್ಯವಾಗದೇ ಇರುವ ಹಿನ್ನೆಲೆಯಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುತ್ತಿದೆ ಎಂದು ತಿಳಿದು ಬಂದಿದೆ. ಪಿಯುಸಿ, ಎಸ್‌ಎಸ್ ಎಲ್‌ಸಿ ಪರೀಕ್ಷೆಗಳು ಮುಗಿಯುವವರೆಗೂ ಸರ್ಕಾರಿ–ಶಾಲಾ ಕಾಲೇಜುಗಳ ವಿದ್ಯುತ್ ಬಾಕಿ ಬಿಲ್ಲನ್ನು ಪಾವತಿಸಲು ಸಮಯಾವಕಾಶ ನೀಡಬೇಕು ಎಂದು ವಿನಂತಿಸಿದ್ದಾರೆ.



ಪಿಯುಸಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಸಮೀಪಿಸುತ್ತಿದ್ದು, ಪೂರ್ವಸಿದ್ಧತಾ ಪರೀಕ್ಷೆಗಳು ನಡೆಯುತ್ತಿವೆ. ಪ್ರಾಯೋಗಿಕ ತರಗತಿಗಳನ್ನು ನಡೆಸಲು ವಿದ್ಯುತ್ ಅನಿವಾರ್ಯ. ಈ ಭಾಗಗಳಲ್ಲಿ ಹಿಂದುಳಿದ ಹಾಗೂ ಗ್ರಾಮೀಣ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ವಿದ್ಯುತ್ ಕಡಿತದಿಂದ ಅವರ ವ್ಯಾಸಂಗಕ್ಕೆ ತೊಂದರೆಯಾಗಲಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸದರಿ ವಿಷಯ ವನ್ನು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಗಂಭೀರವಾಗಿ ಪರಿಗಣಿಸಿ ಕೂಡಲೇ ಅಗತ್ಯ ಅನುದಾನ ಬಿಡುಗಡೆ ಮಾಡಬೇಕು. ಜೊತೆಗೆ ಇಂಧನ ಸಚಿವರೊಂದಿಗೆ ಸಮಾಲೋಚಿಸಿ, ಪರೀಕ್ಷೆ ಮುಗಿಯುವವರೆಗೂ ಸಮಯಾವಕಾಶ ನೀಡುವಂತೆ ಚೆಸ್ಕಾಂ ಅಧಿಕಾರಿಗಳಿಗೆ ಇಂಧನ ಸಚಿವರಿಂದ ನಿರ್ದೇಶನ ಕೊಡಿಸಬೇಕೆಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

ವಿಜಯನಗರದಲ್ಲಿ ಕಾಳಿದಾಸ ರಸ್ತೆಯಿಂದ ಹೆಬ್ಬಾಳ ರಿಂಗ್ ರಸ್ತೆ ಸಂಪರ್ಕಿಸುವ ರಸ್ತೆ 'ರೆಬಲ್‌ಸ್ಟಾರ್ ಡಾ.ಎಂ.ಹೆಚ್.ಅಂಬರೀಶ್ ರಸ್ತೆ'

● ಎರಡು ಕಡೆ ನಾಮಫಲಕ ಅನಾವರಣಗೊಳಿಸಿದ ಸಂಸದೆ ಸುಮಲತಾ ಅಂಬರೀಶ್, ಪುತ್ರ ಅಭಿಷೇಕ್ ● ಕೊನೆಗಾಲದಲ್ಲಿ ಮೈಸೂರಿನಲ್ಲಿ ನೆಲೆಸಬೇಕೆಂಬ ಅಂಬರೀಶ್ ಆಸೆ ಈ ರೀತಿ ಸಾಕಾರ



ಮೈಸೂರು,ಜ.21(ಎಂಕೆ)–ಮೈಸೂರಿನ ವಿಜಯನಗರದ ಕಾಳಿದಾಸ ರಸ್ತೆ ಜಂಕ್ಷನ್(ಜಿ.ಟಿ. ದೇವೇಗೌಡರ ನಿವಾಸದ ಬಳಿ)ನಿಂದ ಹೆಬ್ಬಾಳ ರಿಂಗ್ ರಸ್ತೆವರೆಗಿನ(ಅಭಿಷೇಕ್ ಸರ್ಕಲ್ ಮಾರ್ಗವಾಗಿ)3.5 ಕಿ.ಮೀ ಉದ್ದದ ರಸ್ತೆಗೆ ರೆಬಲ್‌ಸ್ಟಾರ್ ಡಾ.ಎಂ.ಹೆಚ್.ಅಂಬರೀಶ್ ಹೆಸರು ನಾಮಕರಣದೊಂದಿಗೆ ನಾಮಫಲಕಗಳನ್ನು ಶನಿವಾರ ಅನಾವರಣಗೊಳಿಸಲಾಯಿತು.

ಮಂಚೇಗೌಡನ ಕೊಪ್ಪಲಿನ ಅಭಿಷೇಕ್ ಸರ್ಕಲ್, ಕಾಳಿದಾಸ ರಸ್ತೆ ಜಂಕ್ಷನ್‌ನಲ್ಲಿ (ಕಾಳಿದಾಸ ರಸ್ತೆಯಲ್ಲಿರುವ ಶಾಸಕ ಜಿ.ಟಿ. ದೇವೇಗೌಡ ಅವರ ನಿವಾಸದ ಎದುರು) ಹಾಗೂ ಹೆಬ್ಬಾಳ ರಿಂಗ್ ರಸ್ತೆ ಬಳಿ ಅಳವಡಿಸಿರುವ ರೆಬಲ್ ಸ್ಟಾರ್ ಡಾ.ಎಂ.ಹೆಚ್.ಅಂಬರೀಶ್ ರಸ್ತೆಯ ನಾಮ ಫಲಕಗಳನ್ನು ಸಂಸದೆ ಸುಮಲತಾ ಅಂಬರೀಶ್, ನಟ ಅಭಿಷೇಕ್ ಅಂಬರೀಶ್ ಉದ್ಘಾಟಿಸಿದರು.

ಬಳಿಕ ಸಂಸದೆ ಸುಮಲತಾ ಅಂಬರೀಶ್ ಮಾತನಾಡಿ, ಅಂಬರೀಶ್ ಅವರಿಗೆ ಮೈಸೂರೆಂದರೆ ವಿಶೇಷ ಪ್ರೀತಿ. ಅವರು ಬೆಳೆದಿರುವ ಊರಿದು. ಮೈಸೂರಿನಲ್ಲಿ ಅವರ ಸ್ನೇಹಿತರ ಸಂಖ್ಯೆ ಹೆಚ್ಚಾಗಿದೆ. 3.5 ಕಿಮೀ ಉದ್ದದ ರಸ್ತೆಗೆ ಅಂಬರೀಶ್ ಅವರ ಹೆಸರಿಟ್ಟಿರುವುದಕ್ಕೆ ತುಂಬಾ ಸಂತೋಷವಾಗಿದೆ. ಇದನ್ನು ಸಾಧ್ಯವಾಗಿಸಿದ ಅವರ ಅಭಿಮಾನಿಗಳು, ಶಾಸಕ ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್, ಸ್ಥಳೀಯ ಪಾಲಿಕೆ ಸದಸ್ಯರು ಸೇರಿದಂತೆ ಎಲ್ಲರಿಗೂ ಧನ್ಯವಾದ ಸಲ್ಲಿಸುತ್ತೇನೆ ಎಂದರು.

ಹುಟ್ಟಿದ ಪ್ರತಿಯೊಬ್ಬರಿಗೂ ಸಾವು ಖಚಿತ. ಬದುಕಿರುವ ಸಮಯದಲ್ಲಿ ಸಾಧನೆ, ಜನರ ಪ್ರೀತಿ ಸಂಪಾದನೆ ಹಾಗೂ ಯಾವ ರೀತಿ ನಮ್ಮ ಹೆಸರನ್ನು ಉಳಿಸಿಕೊಂಡು ಹೋಗಬೇಕು ಎಂಬುದು ಪ್ರತಿಯೊಬ್ಬರಿಂದಲೂ ಸಾಧ್ಯವಿಲ್ಲ. ಆದರೆ ಆ ಭಾಗ್ಯ, ಅದೃಷ್ಟ ಅಂಬರೀಶ್‌ಗೆ ಸಿಕ್ಕಿತ್ತು. ಈಗಲೂ ಸಿಗುತ್ತಿದೆ. ಅಂಬರೀಶ್ ಅವರು ಸಿನಿಮಾ ರಂಗದಲ್ಲಿ 40 ವರ್ಷ, ರಾಜಕೀಯದಲ್ಲಿ 30 ವರ್ಷ ಇದ್ದರು. ಅವರ ಜೀವನದಲ್ಲಿ ಕಪ್ಪುಚುಕ್ಕೆ ಎಂಬುದಿರಲಿಲ್ಲ. ಅದಕ್ಕೆ ಅವರು ನಡೆದು ಬಂದ ಹಾದಿ, ಪಾಲಿಸಿದ ಸಿದ್ಧಾಂತ ಮುಖ್ಯವಾಗಿದೆ. ಅಂಬರೀಶ್ ಮಂಡ್ಯದ ಗಂಡು ಮಾತ್ರವಲ್ಲ ಕರ್ನಾಟಕದ ಪ್ರತಿಯೊಂದು ಜಿಲ್ಲೆಗೂ ಸೇರಿದವರು ಎಂಬುದಕ್ಕೆ ಅವರ ಅಭಿಮಾನಿಗಳು ಸಾಕ್ಷಿಯಾಗಿದ್ದಾರೆ ಎಂದರು.

ಅಂಬರೀಶ್ ಕನಸು ಈಡೇರಿದೆ: ಸಿನಿಮಾ ಹಾಗೂ ರಾಜಕೀಯ ನಿವೃತ್ತಿ ಬಳಿಕ ಮೈಸೂರಿನಲ್ಲಿ ನೆಲೆಸಬೇಕು ಎಂದು ಅಂಬರೀಶ್ ಹೇಳುತ್ತಿದ್ದರು. ಅದು ಅವರ ಕನಸು ಕೂಡ ಆಗಿತ್ತು. ಅಂಬರೀಶ್ ದೈಹಿಕವಾಗಿ ನಮ್ಮೊಂದಿಗೆ ಇಲ್ಲದಿದ್ದರೂ ರಸ್ತೆಗೆ ಅವರ ಹೆಸರಿಡುವ ಮೂಲಕ ಅಭಿಮಾನಿಗಳು ಶಾಶ್ವತವಾಗಿ ಅವರನ್ನು ಮೈಸೂರಿನಲ್ಲಿ ಉಳಿಸಿಕೊಂಡಿದ್ದಾರೆ ಎಂದು ಕೃತಜ್ಞತೆ ಸಲ್ಲಿಸಿದರು.

ಮಂಚೇಗೌಡ ಎಂದು ಕರೆಯುತ್ತಿದ್ದರು...!: ವಿಶೇಷವೆಂದರೆ ಮಂಚೇಗೌಡನ ಕೊಪ್ಪಲು, ಅಭಿಷೇಕ್ ವೃತ್ತ ಹಾಗೂ ಅಂಬರೀಶ್ ರಸ್ತೆಯೊಂದಿಗೆ ನಮ್ಮ ನಂಟಿದೆ. ಅಂಬರೀಶ್ ಅವರು ಅಭಿಷೇಕ್‌ನನ್ನು ತಮಾಷೆಗೆ ಮಂಚೇಗೌಡ ಎಂದು ಕರೆಯುತ್ತಿದ್ದರು. ಡಾ.ರಾಜ್‌ಕುಮಾರ್ ಅವರು ಕೂಡ ನಮ್ಮ ಮಂಚೇಗೌಡ ಎಲ್ಲಿದ್ದಾನೆ ಎನ್ನುತ್ತಿದ್ದರು. ಅದರಂತೆ ಮಂಚೇಗೌಡಕೊಪ್ಪಲಿನ ಅಭಿಷೇಕ್ ವೃತ್ತದಲ್ಲಿ ಅಂಬರೀಶ್ ಅವರ ಹೆಸರಿನ ರಸ್ತೆಯಿದೆ. ಈ ಪ್ರೀತಿ, ಅಭಿಮಾನಕ್ಕೆ ಸದಾ ಋಣಿಯಾಗಿರುತ್ತೇವೆ ಎಂದು ಧನ್ಯವಾದ ತಿಳಿಸಿದರು.

ಪಾಲಿಕೆ ಸದಸ್ಯರ ಒಮ್ಮತದ ನಿರ್ಧಾರ: ಶಾಸಕ ಎಲ್.ನಾಗೇಂದ್ರ ಮಾತನಾಡಿ, ಸುಮಾರು 6 ಕೋಟಿ ರೂ.ವೆಚ್ಚದಲ್ಲಿ ಅಭಿವೃದ್ಧಿಪಡಿಸಿದ ಕಾಳಿದಾಸ ರಸ್ತೆ ಜಂಕ್ಷನ್‌ನಿಂದ ಹೆಬ್ಬಾಳ ರಿಂಗ್ ರಸ್ತೆವರೆಗಿನ ರಸ್ತೆಗೆ ಡಾ.ಅಂಬರೀಶ್ ಅವರ ಹೆಸರಿಡಲು ಈ ಭಾಗದ ಪಾಲಿಕೆ ಸದಸ್ಯರ ಒಮ್ಮತದ ನಿರ್ಧಾರ ಮುಖ್ಯ ಕಾರಣವಾಗಿದೆ. ಕೌನ್ಸಿಲ್ ಸಭೆಯಲ್ಲಿ ಮಂಡಿಸಿ ಅನುಮತಿ ಕೊಡಿಸಿದ್ದಾರೆ. ಚಲನಚಿತ್ರ ನಟರಲ್ಲೇ ವಿಶೇಷ ಸ್ಥಾನಮಾನ ಹೊಂದಿದ್ದ, ಕರ್ಣ ಎಂಬ ಬಿರುದು ಪಡೆದಿದ್ದ ಅಂಬರೀಶಣ್ಣ ನಮ್ಮ ಜನಾಂಗದ ಗೌರವವನ್ನು ಹೆಚ್ಚಿಸಿದ್ದಾರೆ. ಸುಮಲತಾ ಅಕ್ಕ ಸಂಸದೆಯಾಗಲು ಅಂಬರೀಶಣ್ಣ ಕಾರಣ. ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎಂದು ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟಂತಹ ಹೃದಯ ಶ್ರೀಮಂತಿಕೆಯುಳ್ಳ ವ್ಯಕ್ತಿ. ನಾಡಿನ ಹಿರಿಮೆ–ಗರಿಮೆಯನ್ನು ಹೆಚ್ಚಿಸಿದ ವ್ಯಕ್ತಿಯ ಹೆಸರನ್ನು ಚಾಮರಾಜ ಕ್ಷೇತ್ರದ ಪ್ರಮುಖ ರಸ್ತೆಗೆ ಇಟ್ಟಿರುವುದು ಸಾರ್ಥಕವೆನಿಸುತ್ತದೆ ಎಂದರು.

ಮೇಯರ್ ಶಿವಕುಮಾರ್, ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ಉಪ ಮೇಯರ್ ಡಾ.ರೂಪ, ನಗರಪಾಲಿಕೆ ಸದಸ್ಯರಾದ ಎ.ಯು. ಸುಬ್ಬಯ್ಯ, ಕೆ.ವಿ.ಶ್ರೀಧರ್, ಪ್ರೇಮಾಶಂಕರೇಗೌಡ, ಲಕ್ಷ್ಮಿ ಶಿವಣ್ಣ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಒಕ್ಕಲಿಗ ಸಮುದಾಯದ ಮುಖಂಡ ಕಾಳಿಂಗು, ಬಿಜೆಪಿ ಮುಖಂಡರಾದ ಪುನೀತ್, ಸುರೇಶ್, ಉಮೇಶ್, ನಾಗೇಶ್, ವಿಜಿ, ನರಸೇಗೌಡ, ಶ್ರೀಕಾಂತ್, ಅವಿನಾಶ್, ಗುರುದತ್, ಕಿಶೋರ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು-ಬೆಂಗಳೂರು ರಸ್ತೆಗೆ 'ನಾಲ್ವಡಿ' ಹೆಸರೇ ಸೂಕ್ತ;

ಮೈಸೂರು, ಜ.21(ಎಂಕೆ)– ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಗೆ ಮೈಸೂರು–ಬೆಂಗಳೂರು ರಸ್ತೆಗೆ ನಾಲ್ವಡಿ ಹೆಸರೇ ಸೂಕ್ತ ಎಂದು ಸಂಸದೆ ಸುಮಲತಾ ಅಂಬರೀಶ್ ಅಭಿಪ್ರಾಯಪಟ್ಟರು. ರೆಬಲ್‌ಸ್ಟಾರ್ ಡಾ.ಎಂ.ಹೆಚ್.ಅಂಬರೀಶ್ ರಸ್ತೆಯ ನಾಮಫಲಕಗಳನ್ನು ಉದ್ಘಾಟಿಸಿ ಬಳಿಕ ಮೈಸೂರು–ಬೆಂಗಳೂರು ಹೆದ್ದಾರಿಗೆ ಅಂಬರೀಶ್ ಅವರ ಹೆಸರಿಡಬೇಕು ಎಂಬ ಚರ್ಚೆಗಳು ಕೇಳಿ ಬರುತ್ತಿವೆ ಎಂಬ ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಹೆಬ್ಬಾಳದಲ್ಲಿನ ಈ ರಸ್ತೆಗೂ ಅಂಬರೀಶ್ ಅವರ ಹೆಸರಿಡಿ ಎಂದು ನಾನು ಕೇಳಿಕೊಂಡಿಲ್ಲ. ಅಭಿಮಾನಿಗಳ ಬೇಡಿಕೆಯಂತೆ ಪಾಲಿಕೆ ನಾಮಕರಣ ಮಾಡಿದೆ ಎಂದರು. ಮೈಸೂರು–ಬೆಂಗಳೂರು ಹೆದ್ದಾರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರಿಡಬೇಕು ಎಂದು ಒತ್ತಾಯಿಸಿ ಪತ್ರ ಬರೆದಿದ್ದೇನೆ. ಹಳೇ ಮೈಸೂರು ಭಾಗದ ಪ್ರತಿಯೊಬ್ಬರಿಗೂ ನಾಲ್ವಡಿಯವರ ಕೊಡುಗೆ ಏನೆಂಬುದು ಗೊತ್ತಿದೆ. ಆದ್ದರಿಂದ ಮೈಸೂರು–ಬೆಂಗಳೂರು ರಸ್ತೆಗೆ ನಾಲ್ವಡಿ ಅವರ ಹೆಸರೇ ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಎಂಪಿ ಆಗಿದ್ದೆ ಆಕಸ್ಮಿಕ: ಮುಂಬರುವ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವ ಆಲೋಚನೆ ಇದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಪ್ರತೀ ಚುನಾವಣೆ ಬಂದರೂ ಸ್ಪರ್ಧಿಸುತ್ತಾರೋ, ಇಲ್ಲವೋ ಎಂಬ ಚರ್ಚೆಗಳಾಗುವುದು ಸಾಮಾನ್ಯ. ನಾನು ಎಂಪಿಯಾಗಿದ್ದೇ ಒಂದು ಆಕಸ್ಮಿಕ ಎಂದರು. ನಿಮ್ಮ ಅಭಿಮಾನಿಗಳು ಚುನಾವಣೆಗೆ ಸ್ಪರ್ಧಿಸಲು ಮುಂದಾಗಿದ್ದಾರೆ ಎಂಬ ಮಾತುಗಳು ಕೇಳಿ ಬರುತ್ತಿವೆ ಎಂಬುದಕ್ಕೆ ಪ್ರತಿಕ್ರಿಯಿಸಿದ ಸಂಸದರು, ಅವಕಾಶಗಳು ಎಲ್ಲಿ ಉತ್ತಮವಾಗಿವೆ ಆ ಕಡೆ ಹೋಗಿ ಎಂದು ಹೇಳುತ್ತೇನೆ. ಯಾರಿಗೂ ಇಂತಹ ಪಾರ್ಟಿಗೆ ಹೋಗಿ, ಹೋಗಬೇಡಿ ಎಂದು ಹೇಳುವುದಿಲ್ಲ. ಅವರು ನನ್ನಿಂದ ಯಾವ ರೀತಿ ಸಹಕಾರಬೇಕು ಎಂದು ಸೂಚಿಸಿದರೆ ಮಾಡಲು ಸಿದ್ಧ ಎಂದ ಅವರು, ಬಿಜೆಪಿ ಸೇರುವ ಕುರಿತು ಮುಂದಿನ ದಿನಗಳಲ್ಲಿ ತಿಳಿಯಲಿದೆ ಎಂದರು.

ಉದ್ಯಾನವನಕ್ಕೆ ಅಂಬರೀಶ್ ಅವರ ಹೆಸರಿಡಬೇಕು; ಕಾರ್ಪೋರೇಟರ್ ಕೆ.ವಿ.ಶ್ರೀಧರ್

ಮೈಸೂರಿನಲ್ಲಿ ಡಾ.ರಾಜ್‌ಕುಮಾರ್, ಡಾ.ವಿಷ್ಣುವರ್ಧನ್ ಅವರ ಹೆಸರಿನಲ್ಲಿ ಉದ್ಯಾನವನಗಳಿರುವಂತೆ ದೊಡ್ಡ ಉದ್ಯಾನವನವೊಂದಕ್ಕೆ ಅಂಬರೀಶ್ ಅವರ ಹೆಸರಿಡಬೇಕು ಎಂದು ನಗರ ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ಒತ್ತಾಯಿಸಿದರು.

ಅಂಬರೀಶಣ್ಣನಿಗೆ ಮೈಸೂರೆಂದರೆ ಅವಿನಾಭಾವ ಸಂಬಂಧ. ಅಂಬರೀಶಣ್ಣ ಎಂದರೆ ಕುಂಬಾರಕೊಪ್ಪಲು. ಪ್ರತೀ ವರ್ಷ ಅವರ ಅಭಿಮಾನಿ ಸಂಘದ ವತಿಯಿಂದ ದೊಡ್ಡಮಟ್ಟದ ಕಾರ್ಯಕ್ರಮಗಳನ್ನು ಕುಂಬಾರಕೊಪ್ಪಲಿನಲ್ಲಿ ಆಯೋಜಿಸಲಾಗುತ್ತಿತ್ತು. ಅವರ ಹೆಸರಿನಲ್ಲಿ ಕಬಡ್ಡಿ ಪಂದ್ಯಾವಳಿ ನಡೆಸಲಾಗುತ್ತಿತ್ತು. ಕೌನ್ಸಿಲ್ ಸಭೆಯಲ್ಲಿ ಸರ್ವಾನುಮತ ಪಡೆದು ಹೆಸರಿಟ್ಟಿದ್ದೇವೆ. ಅವರ ಸೇವೆ, ಕೊಡುಗೆಯನ್ನು ಸ್ಮರಿಸುವ ದೃಷ್ಟಿಯಿಂದ ಮೈಸೂರಿನಲ್ಲಿ ದೊಡ್ಡ ಉದ್ಯಾನವನಕ್ಕೆ ಅಂಬರೀಶಣ್ಣನವರ ಹೆಸರಿಡುವ ಮೂಲಕ ಗೌರವ ಸಲ್ಲಿಸಬೇಕು ಎಂದರು.

ಕೃತಜ್ಞತೆ ಸಲ್ಲಿಸಿದ ಅಭಿಷೇಕ್ ಅಂಬರೀಶ್...

ನಾಳೆ ದಿನ ನಾನು ಇಲ್ಲಿದ್ದಾಗ (ಅಭಿಷೇಕ್ ಸರ್ಕಲ್) ಎಲ್ಲಿದ್ದಿಯಾ ಎಂದು ಕೇಳಿದರೆ ನನ್ನ ಸರ್ಕಲ್‌ನಲ್ಲಿ ನನ್ನ ಅಪ್ಪನ ರಸ್ತೆಗೆ ಬಾ ಎಂದು ಕರೆಯುವಂತಾಗಿದೆ. ಇದು ಹೇಗಾಯಿತೋ ಗೊತ್ತಿಲ್ಲ ಎಂದು ಹರ್ಷ ವ್ಯಕ್ತಪಡಿಸಿದ ನಟ ಅಭಿಷೇಕ್ ಅಂಬರೀಶ್, ಶಾಸಕ ನಾಗೇಂದ್ರ ಸೇರಿದಂತೆ ಸ್ಥಳೀಯ ನಗರಪಾಲಿಕೆ ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು.

ಇದಕ್ಕೂ ಮುನ್ನ ರಾಜಕೀಯ ಪ್ರವೇಶ ಸಂಬಂಧ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಜನ ಸೇವೆಗೆ ಬಂದಿದ್ದೇವೆ. ಜನರ ಸೇವೆ ಮಾಡಲು ರಾಜಕೀಯಕ್ಕೆ ಬರಲೇಬೇಕು ಎಂದಿಲ್ಲ. ಹಲವಾರು ರೀತಿಯಲ್ಲಿ ಸೇವೆ ಮಾಡಬಹುದು. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಆಲೋಚನೆ ಸದ್ಯಕ್ಕಿಲ್ಲ. ಮುಂದಿನ ದಿನಗಳಲ್ಲಿ ಏನಾದರೂ ಇದ್ದರೆ ತಿಳಿಸುತ್ತೇನೆ ಎಂದರು.









ಕೊಡಗು ಗಡಿ ಭಾಗದಲ್ಲಿ ಮೊಳಗಿದ ಕನ್ನಡ ಕಹಳೆ

ವಿರಾಜಪೇಟೆಯ ಅರ್ಜಿ ಗ್ರಾಮದಲ್ಲಿ ವೈಭವದ ಕನ್ನಡ ಸಾಹಿತ್ಯ ಸಮ್ಮೇಳನ

ವಿರಾಜಪೇಟೆ, ಜ.21– ಕೊಡಗು ಜಿಲ್ಲೆಯ ಗಡಿ ಭಾಗವಾದ ವಿರಾಜಪೇಟೆ ತಾಲೂಕಿನಲ್ಲಿ ಕನ್ನಡದ ಕಹಳೆ ಮೊಳಗಿತು. ಎಲ್ಲಿ ನೋಡಿದರೂ ಕನ್ನಡದ ಕಂಪು ಹರಡಿತ್ತು. ಕನ್ನಡ ಧ್ವಜಗಳು ರಾರಾಜಿಸಿದವು. ಕನ್ನಡಾಭಿಮಾನಿಗಳ ಸಂಭ್ರಮ–ಸಡಗರದಿಂದ ಭಾಗವಹಿಸಿ ಸಮ್ಮೇಳನಕ್ಕೆ ಮೆರುಗು ತಂದರು.

ತಾಲೂಕಿನ ಅರ್ಜಿ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಆವರಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿದ್ದ 9ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡದ ಹಬ್ಬ ಅದ್ಧೂರಿಯಾಗಿ ನಡೆಯಿತು. ಎಲ್ಲಾ ಕಡೆ ತಳಿರು ತೋರಣ, ಹೂವುಗಳಿಂದ ಅಲಂಕಾರ ಮಾಡಿದ್ದು, ಎಲ್ಲೆಡೆ ಹಬ್ಬದ ವಾತಾವರಣವಿತ್ತು. ಬೇಟೋಳಿ ಗ್ರಾಮ ಪಂಚಾಯಿತಿ ಬಳಿಯಿಂದ ಸಮ್ಮೇಳನದ ಅಧ್ಯಕ್ಷರಾದ ಡಾ. ಎಸ್.ವಿ. ನರಸಿಂಹನ್ ಅವರನ್ನು ಪುಷ್ಪಗಳಿಂದ ಅಲಂಕೃತಗೊಂಡಿದ್ದ ತೆರೆದ ವಾಹನದಲ್ಲಿ ಮೆರವಣಿಗೆ ಮೂಲಕ ಸಮ್ಮೇಳನ ಆಯೋಜಿಸಿದ್ದ ಅರ್ಜಿ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಸಭಾಂಗಣಕ್ಕೆ ಕರೆತರಲಾಯಿತು.

ಮೆರವಣಿಗೆಯಲ್ಲಿ ಕೊಡಗಿನ ಸಾಂಪ್ರದಾಯಿಕ ವಾಲಗ, ಮಂಗಳವಾದ್ಯ, ಚಂಡೆ–ಮದ್ದಲೆ, ಕಳಸ ಹೊತ್ತ ಸುಮಂಗಲಿಯರು, ಕೂಸಾಲೆ, ಡೊಳ್ಳು ಕುಣಿತ, ವೀರಗಾಸೆ, ಪೂಜಾ ಕುಣಿತ, ನಂದಿಧ್ವಜ, ದಫ್, ಬ್ಯಾಂಡ್‌ಸೆಟ್ ಮತ್ತು ಕಲಾ ತಂಡಗಳು ಎಲ್ಲರ ಗಮನ ಸೆಳೆಯಿತು. ಜನರು ಉತ್ಸಾಹದಿಂದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಕನ್ನಡ ಅಭಿಮಾನಿಗಳು ರಸ್ತೆ ಬದಿಯಲ್ಲಿ ಸಾಲುಗಟ್ಟಿ ನಿಂತು ಈ ವೈಭವದ ಮೆರವಣಿಗೆಯನ್ನು ಕಣ್ತುಂಬಿಕೊಂಡರು. ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘ, ಸಂಜೀವಿನಿ ಒಕ್ಕೂಟ, ಸ್ತ್ರೀಶಕ್ತಿ ಸಂಘ ಮತ್ತು ಮಹಿಳಾ ಸ್ವಸಹಾಯ ಸಂಘಗಳು, ಕನ್ನಡಪರ ಘೋಷಣೆಗಳನ್ನು ಕೂಗಿ ಹರ್ಷವ್ಯಕ್ತಪಡಿಸುತ್ತಿದ್ದ ದೃಶ್ಯ ಕಂಡು ಬಂದಿತು. ಇದಕ್ಕೂ ಮೊದಲು ಲೆಫ್ಟಿನೆಂಟ್ ಜನರಲ್ ಕೊದಂಡ ನಂಜಪ್ಪ ಸೋಮಣ್ಣ ದ್ವಾರ, ಮೇ. ಜನರಲ್ ಸೋಮಯಂಡ ಕಾಳಪ್ಪ ಕಾರ್ಯಪ್ಪ ದ್ವಾರ, ಕೊಡಗಿನ ಗೌರಮ್ಮ ದ್ವಾರ, ಕೊಡಗಿನ ಆದಿ ಕವಿ ಹರದಾಸ ಅಪ್ಪಚ್ಚ ಕವಿ ದ್ವಾರಗಳನ್ನು ಅತಿಥಿಗಳು ಉದ್ಘಾಟಿಸಿದರು.

ಸಮ್ಮೇಳನ ನಡೆದ ಸ್ಥಳದಲ್ಲಿ ಭವ್ಯವಾದ ವೇದಿಕೆ ನಿರ್ಮಿಸಲಾಗಿತ್ತು. ಕೊಡಗಿನ ಸಾಹಿತಿ ಐ.ಮಾ.ಮುತ್ತಣ್ಣ ಅವರ ಹೆಸರಿನಲ್ಲಿ ಸಭಾಂಗಣವನ್ನು, ರಘುನಾಥ್ ನಾಯಕ್ ಅವರ ಹೆಸರಿನಲ್ಲಿ ವೇದಿಕೆಯನ್ನು ನಿರ್ಮಿಸಲಾಗಿತ್ತು. ಎಲ್ಲಾ ಕಾರ್ಯಕ್ರಮಗಳು, ವಿಚಾರಗೋಷ್ಠಿಗಳು ಅಚ್ಚುಕಟ್ಟಾಗಿ ನಡೆದವು. ಎಲ್ಲರಿಗೂ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

ಎಲ್ಲಾ ಸಾಹಿತ್ಯಕ್ಕಿಂತ ಕನ್ನಡ ಭಾಷಾ ಸಾಹಿತ್ಯ ಹೆಚ್ಚು ಶ್ರೀಮಂತ: ನರಸಿಂಹನ್

ವಿರಾಜಪೇಟೆ: ಕನ್ನಡ ಭಾಷಾ ಸಾಹಿತ್ಯವು ವಿಶ್ವದ ಇನ್ಯಾವುದೇ ಸಾಹಿತ್ಯಕ್ಕಿಂತ ಹೆಚ್ಚು ಶ್ರೀಮಂತವಾಗಿದೆ ಎಂದು ಭಾಷಾ ತಜ್ಞರು ಅಭಿಪ್ರಾಯ ಪಡುತ್ತಾರೆ. ಕನ್ನಡಕ್ಕೆ ಸುಮಾರು ಎರಡೂವರೆ ಸಾವಿರ ವರ್ಷಗಳ ಶಾಸನಾಧಾರಿತ ಮತ್ತು ಅಕ್ಷರರೂಪದ ಇತಿಹಾಸವಿದೆ ಎಂದು ವಿರಾಜಪೇಟೆ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾದ ಡಾ. ಎಸ್.ವಿ.ನರಸಿಂಹನ್ ತಿಳಿಸಿದ್ದಾರೆ.

ಸಮ್ಮೇಳನದಲ್ಲಿ ಅಧ್ಯಕ್ಷೀಯ ಭಾಷಣ ಮಾಡಿದ ಅವರು, ಕನ್ನಡ ಭಾಷೆಯು ಬೆಳೆದು ಬಂದ ಹಾದಿಯ ಒಂದು ಪಕ್ಷಿನೋಟವನ್ನು ಬೀರೋಣ. ಶತಮಾನಗಳ ಹಿಂದೆ ಈಜಿಪ್ಟ್ ದೇಶದಲ್ಲಿ ದೊರೆತ ಒಂದು ಗ್ರೀಕ್ ನಾಟಕದಲ್ಲಿ ಕನ್ನಡ ಪದಗಳು ಲಭಿಸಿವೆ. ಶಾಸನಗಳು ಕನ್ನಡದ ಪ್ರಾಚೀನತೆಯನ್ನು ಸಾರುತ್ತಿವೆ ಎಂದರು.

ಶಾತವಾಹನ, ಕದಂಬ, ಗಂಗ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ, ಯಾದವ, ಚಿತ್ರದುರ್ಗ, ಕಾಕತೀಯ, ವಿಜಯನಗರ, ಕೆಳದಿ, ಮೈಸೂರು ಮೊದಲಾದ ಕರ್ನಾಟಕ ಸಾಮ್ರಾಜ್ಯದ ದೊರೆಗಳು ಕನ್ನಡ ಕವಿಗಳಿಗೆ ರಾಜಾಶ್ರಯ ನೀಡಿ ಪ್ರೋತ್ಸಾಹಿಸಿ ಕನ್ನಡದ ಬೆಳವಣಿಗೆಗೆ ಕೈಜೋಡಿಸಿದರು. ಇಡೀ ಭಾರತ ದೇಶ ಕಂಡ ಅತ್ಯಂತ ಶ್ರೇಷ್ಠ ಕವಿಗಳು ಈ ನಾಡಿನಲ್ಲಿ ಜನಿಸಿದ್ದಾರೆ ಎನ್ನುವುದೇ ಹೆಮ್ಮೆಯ ವಿಷಯ. ಶ್ರೀವಿಜಯ, ಪಂಪ, ಪೊನ್ನ, ರನ್ನ, ಹರಿಹರ, ರಾಘವಾಂಕ, ಜನ್ನ ಕೇಶಿರಾಜ, ಕುಮಾರವ್ಯಾಸ ಮುಂತಾದವರು ಕನ್ನಡವನ್ನು ತಮ್ಮ ಅದ್ಭುತ ಕೃತಿಗಳಿಂದ ಶ್ರೀಮಂತಗೊಳಿಸಿದರು. ಕನ್ನಡಕ್ಕಾಗಿ ಏನೆಲ್ಲ ಮಾಡಿದರೂ ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲ ಎಂದು ಅವರು ಹೇಳಿದರು.

ಕನ್ನಡ ಭಾಷೆ ಸಂಸ್ಕೃತಿಯನ್ನು ಮೀರಿದಂತೆ ಮುಖ್ಯವಾಗಿ, ಕನ್ನಡದ ಬಗ್ಗೆ ಯಾರಿಗೂ ಕೀಳರಿಮೆ ಬೇಡ. ಇಂಗ್ಲಿಷ್ ಮತ್ತು ಮಲಯಾಳಿ ಶಾಲಾ ವಿದ್ಯಾರ್ಥಿಗಳಿಗೆ ಕನ್ನಡ ಶಿಕ್ಷಕರ ಅಗತ್ಯವಿದೆ. ಕನ್ನಡ ಗ್ರಂಥಾಲಯ ಮತ್ತು ಕನ್ನಡ ಪುಸ್ತಕಗಳ ಮಳಿಗೆ, ಮಾರಾಟ ಓದುಗರಿಗೆ ಉಚಿತವಾಗಿ ನೀಡುವ ಮೂಲಕ ಕನ್ನಡದ ಬಗ್ಗೆ ಹೆಚ್ಚು ಕಾರ್ಯಕ್ರಮಗಳು ನಡೆಯಬೇಕಾಗಿದೆ. ಕನ್ನಡ ಸಾಹಿತ್ಯವನ್ನು ಬೆಳೆಸಲು ಕನ್ನಡಿಗರೆಲ್ಲ ಕನ್ನಡವನ್ನು ಮನಸಾರೆ ಪ್ರೀತಿಸಬೇಕು ಎಂದು ಸಮ್ಮೇಳನದ ಅಧ್ಯಕ್ಷರು ನುಡಿದರು.

ಗಡಿಭಾಗದಲ್ಲಿ ಕನ್ನಡದ ಕಾರ್ಯಕ್ರಮಗಳು ನಡೆಸಬೇಕು

ಉದ್ಘಾಟನಾ ಭಾಷಣ ಮಾಡಿದ ಶಾಸಕ ಕೆ.ಜಿ. ಬೋಪಯ್ಯ

ವಿರಾಜಪೇಟೆ: ಕನ್ನಡ ನಾಡು–ನುಡಿ ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಪ್ರತಿಯೊಬ್ಬರಿಗೂ ಕನ್ನಡದ ಬಗ್ಗೆ ಅಭಿಮಾನ ಇರಬೇಕು ಹಾಗೂ ಗಡಿಭಾಗದಲ್ಲಿ ಕನ್ನಡ ಕಾರ್ಯಕ್ರಮಗಳನ್ನು ನಡೆಸುವಂತಾಗಬೇಕು ಎಂದು ಶಾಸಕ ಕೆ.ಜಿ.ಬೋಪಯ್ಯ ಕರೆ ನೀಡಿದರು.

ವಿರಾಜಪೇಟೆ ಬಳಿಯ ಅರ್ಜಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಆವರಣದಲ್ಲಿ ಕೊಡಗಿನ ಸಾಹಿತಿ ಐ.ಮಾ. ಮುತ್ತಣ್ಣ ಸಭಾಂಗಣದ ರಘುನಾಥ್ ನಾಯಕ್ ವೇದಿಕೆಯಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿದ್ದ 9ನೇ ಸಾಹಿತ್ಯ ಸಮ್ಮೇಳನವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಕಳೆದ ಎರಡು ವರ್ಷಗಳಿಂದ ಸಮ್ಮೇಳನ ನಡೆಸಲು ಅತಿವೃಷ್ಟಿ ಮತ್ತು ಕೊರೊನಾ ಅಡ್ಡಿಯಾಗಿತ್ತು. ಈ ವರ್ಷ ಎಲ್ಲಾ ಕಡೆಗಳಲ್ಲಿ ಹಬ್ಬ, ಉತ್ಸವಗಳು ನಡೆಯುತ್ತಿವೆ. ಕೊಡಗು ಜಿಲ್ಲೆ ಸಾಹಿತಿಗಳು ಹಾಗೂ ವೀರರನಾಡು. ಇಲ್ಲಿ ಸ್ಥಳೀಯ ಆಚಾರ, ವಿಚಾರಗಳು ಮತ್ತು ಸಂಸ್ಕೃತಿಗಳಿಗೆ ಧಕ್ಕೆಯಾಗದಂತೆ ಗಡಿ ಭಾಗದಲ್ಲಿ ಕನ್ನಡಕ್ಕೆ ಮೊದಲ ಆದ್ಯತೆ ನೀಡಬೇಕಾಗಿದೆ ಎಂದರು.

ಮುಖ್ಯ ಭಾಷಣಕಾರರಾದ ಮೈಸೂರಿನ ಯುವರಾಜ ಕಾಲೇಜಿನ ಪ್ರಾಧ್ಯಾಪಕ ಡಾ. ಎಂ.ಪಿ.ರೇಖಾ ವಸಂತ್ ಅವರು ಸಭೆಯನ್ನುದ್ದೇಶಿಸಿ ಮಾತನಾಡಿ, ಎಲ್ಲಾ ಭಾಷೆಯನ್ನು ಪ್ರೀತಿಸೋಣ. ಆದರೆ ಕನ್ನಡ ಭಾಷೆಯನ್ನು ಬೆಳೆಸೋಣ. ನಮ್ಮನ್ನು ನಾವು ಗುರುತಿಸಿಕೊಳ್ಳಲು ಭಾಷೆ ಮುಖ್ಯ. ಇಂಗ್ಲಿಷ್ ಭಾಷೆ ಎಲ್ಲಾ ಭಾಷೆಗೂ ಬೆಳಕು ಇದ್ದಂತೆ. ಮರ ಎಷ್ಟೇ ಎತ್ತರ ಬೆಳೆದರೂ ಅದಕ್ಕೆ ಬೇರು ಮುಖ್ಯ. ಕೊಡಗು ಪಕ್ಕದ ಜಿಲ್ಲೆಗಳಿಗೆ ನೀರು ನೀಡುವುದರೊಂದಿಗೆ ಜ್ಞಾನವನ್ನು ಕೂಡ ನೀಡುತ್ತಿದೆ ಎಂದರು.

ಕೊಡಗು ಕವಿಗಳ ಶ್ರೇಷ್ಠತೆಯನ್ನು ಹೇಳುತ್ತ ಬಂದಿದ್ದಾರೆ. ಕನ್ನಡಕ್ಕೆ ಸೇವೆ ಸಲ್ಲಿಸಿದವರು ಅನೇಕರಿದ್ದಾರೆ. ಜ್ಞಾನಪೀಠ ಪ್ರಶಸ್ತಿಯನ್ನು ಪಡೆದುಕೊಂಡಿರುವುದು ಹೆಮ್ಮೆಯ ಸಂಗತಿ. ಮನುಷ್ಯ ಮನುಷ್ಯರ ನಡುವೆ ಹೊಂದಾಣಿಕೆ ಕಡಿಮೆಯಾಗಿದೆ. ಸ್ಪರ್ಧಾತ್ಮಕ ಜಗತ್ತಿನಲ್ಲಿ ನಾವೆಲ್ಲರೂ ಒಮ್ಮತದಿಂದ ಮುಂದಿನ ಪೀಳಿಗೆಗೆ ಕನ್ನಡವನ್ನು ಉಳಿಸಿ ಬೆಳೆಸುವಂತಾಗಬೇಕು ಎಂದರು.

ಕೊಡಗು ಕನ್ನಡ ಸಾಹಿತ್ಯ ಪರಿಷತ್ ಪೂರ್ವಾಧ್ಯಕ್ಷ ಟಿ.ಪಿ.ರಮೇಶ್ ಅವರು ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿ ಮಾತನಾಡಿ, ಗಡಿನಾಡಿನಲ್ಲಿ ಕನ್ನಡ ಭಾಷೆ, ನಾಡು ನುಡಿ, ನೆಲ, ಜಲ, ಸಂಸ್ಕೃತಿಯನ್ನು ಉಳಿಸಲು ನಾವೆಲ್ಲರೂ ಕನ್ನಡಕ್ಕೆ ಹೆಚ್ಚು ಒತ್ತು ನೀಡಬೇಕು. ಸರ್ಕಾರ ಇಂಗ್ಲಿಷ್ ಶಾಲೆಗಳಿಗೆ ಕನ್ನಡ ಶಿಕ್ಷಕರನ್ನು ನೇಮಕ ಮಾಡುವಂತಾಗಬೇಕು ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಪಿ.ಕೇಶವಕಾಮತ್ ಅವರು ಸಮ್ಮೇಳನ ಅಧ್ಯಕ್ಷರಾದ ಡಾ.ಎಸ್.ವಿ.ನರಸಿಂಹನ್ ಅವರಿಗೆ ಕನ್ನಡ ಧ್ವಜ ಹಸ್ತಾಂತರ ಮಾಡಿದ ಬಳಿಕ ಮಾತನಾಡಿ, ಕನ್ನಡ ಭಾಷೆ ಉಳಿಸಿ ಬೆಳೆಸಲು ಜಿಲ್ಲೆಯಲ್ಲಿ ಹೆಚ್ಚು ಕನ್ನಡ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಾಗಿ ತಿಳಿಸಿದರು.

ಅರ್ಜಿ ಗ್ರಾಮದ ಸಂತ ಅಂಥೋಣಿ ದೇವಾಲಯದ ಧರ್ಮ ಗುರುಸ್ವಾಮಿ ರೋನಿ ರವಿಕುಮಾರ್, ಗುಂಡಿಗೆರೆ ಮೌಲಾನ ಸಿ.ಪಿ.ಅಹಮದ್ ಮದನಿ ಅವರುಗಳು ಕನ್ನಡ ಭಾಷೆ ಉಳಿಸಿ ಬೆಳೆಸುವಂತೆ ಮನವಿ ಮಾಡಿದರು.

ಕನ್ನಡ ಸಾಹಿತ್ಯ ಪರಿಷತ್ ವಿರಾಜಪೇಟೆ ತಾಲೂಕು ಅಧ್ಯಕ್ಷ ರಾಜೇಶ್ ಪದ್ಮನಾಭ ಅವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಪೊನ್ನಂಪೇಟೆ ಕ.ಸಾಪ. ಅಧ್ಯಕ್ಷ ಕೋಳೇರ ದಯಾ ಚಂಗಪ್ಪ, ಕುಶಾಲನಗರ ಅಧ್ಯಕ್ಷ ಕೆ.ಎಸ್.ಮೂರ್ತಿ, ಮಡಿಕೇರಿಯ ಅಂಬೇಕಲ್ ನವೀನ್, ಡಿಸಿಸಿ ಬ್ಯಾಂಕ್ ಜಿಲ್ಲಾ ನಿರ್ದೇಶಕ ರಘು ನಾಣಯ್ಯ, ಜಿಪಂ ಮಾಜಿ ಸದಸ್ಯ ಶಶಿ ಸುಬ್ರಮಣಿ, ಅರ್ಜಿ ಹಾಗೂ ಬೇಟೋಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪಾರ್ವತಿ ಮತ್ತು ಯಶೋದಾ ಮತ್ತಿತರರು ಉಪಸ್ಥಿತರಿದ್ದರು. ಸಂತ ಅನ್ನಮ್ಮ ಶಾಲಾ ವಿದ್ಯಾರ್ಥಿಗಳು ನಾಡಗೀತೆ ಹಾಡಿದರೆ, ಜಯಪ್ರಕಾಶ್ ನಾರಾಯಣ ಶಾಲಾ ಮುಖ್ಯ ಶಿಕ್ಷಕ ಲಾಲ್ ಕುಮಾರ್ ರೈತ ಗೀತೆ, ಪ್ರಗತಿ ಶಾಲೆಯ ವಿದ್ಯಾರ್ಥಿಗಳು ಹಚ್ಚೇವು ಕನ್ನಡದ ದೀಪ ಗೀತೆಯನ್ನು ಹಾಡಿ ಕಾರ್ಯಕ್ರಮಕ್ಕೆ ಮೆರಗು ನೀಡಿದರು. ಪತ್ರಕರ್ತರಾದ ಉಷಾ ಪ್ರೀತಮ್ ಮತ್ತು ರಜಿತಾ ಕಾರ್ಯಪ್ಪ ಕಾರ್ಯಕ್ರಮ ನಿರೂಪಿಸಿದರು.

ನಾಡ ಪೆದ ಆಶಾ ಕೊಡವ ಚಿತ್ರಕ್ಕೆ ಪ್ರಶಸ್ತಿಗಳ ಸುರಿಮಳೆ

ಮಡಿಕೇರಿ, ಜ.21– ಈರಮಂಡ ಹರಿಣಿ ವಿಜಯ್ ಹಾಗೂ ಕೊಟ್ಟುಕತ್ತೀರ್ ಯಶೋಧ ಪ್ರಕಾಶ್ ನಿರ್ಮಿಸಿರುವ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ನಿರ್ದೇಶನದ 'ನಾಡ ಪೆದ ಆಶಾ' ಕೊಡವ ಚಿತ್ರಕ್ಕೆ ಪ್ರಶಸ್ತಿಗಳು ಹುಡುಕಿಕೊಂಡು ಬರುತ್ತಿವೆ.

ಅಸ್ಸಾಂನ ವಿಂಗ್ಸ್ ಇಂಟರ್‌ನ್ಯಾಷನಲ್ ಕ್ರಿಟಿಕ್ಸ್ ಫಿಲಂನಲ್ಲಿ ಅತ್ಯುತ್ತಮ ಚಿತ್ರ ಪ್ರಶಸ್ತಿ, ಉತ್ತಮ ಚಿತ್ರ ವಿಮರ್ಶಕರ ಪ್ರಶಸ್ತಿ, ಉತ್ತಮ ಸಂಭಾಷಣೆ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದೆ.

ದೆಹಲಿಯ 7ನೇ ವಾಲೆಟ್ ಅಂತರರಾಷ್ಟ್ರೀಯ ಚಿತ್ರೋತ್ಸವ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ, ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನು ಕೂಡ ಗಳಿಸಿಕೊಂಡಿದೆ.

ಡೆಹರಾಡೂನ್, ಚಂಡೀಘಡ್, ಕೊಲ್ಕತ್ತಾ, ಮೈಸೂರು, ಬೆಂಗಳೂರು, ಹುಬ್ಬಳ್ಳಿ, ಹೈದರಾಬಾದ್, ಮುಂಬೈಗಳಲ್ಲಿ ನಡೆದ ಪ್ರತಿಷ್ಠಿತ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ 'ನಾಡ ಪೆದ ಆಶಾ' ವಿವಿಧ ವಿಭಾಗಗಳಲ್ಲಿ 16 ಪ್ರಶಸ್ತಿಗಳನ್ನು ಗಳಿಸಿದೆ. ಮತ್ತಷ್ಟು ಪ್ರಶಸ್ತಿಗಳು ಬರುವ ನಿರೀಕ್ಷೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿರುವ ಚಿತ್ರತಂಡ, ಕೊಡವ ಭಾಷಾ ಚಲನಚಿತ್ರವೊಂದು ಇಷ್ಟು ದೊಡ್ಡ ಮಟ್ಟದಲ್ಲಿ ಹೆಸರು ಮಾಡುತ್ತಿರುವುದು ಕೊಡಗಿಗೆ ಹೆಗ್ಗಳಿಕೆಂಯ ವಿಚಾರವಾಗಿದೆ ಎಂದು ಹರ್ಷವನ್ನು ಹಂಚಿಕೊಂಡಿದೆ.



ಬಿಜೆಪಿ ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ

ಕೇಂದ್ರ, ರಾಜ್ಯ ಸರ್ಕಾರಗಳ ಸಾಧನೆ ತಿಳಿಸಿ ಬಿಜೆಪಿ ಬೆಂಬಲಿಸಲು ಮನವಿ



ಚಾಮರಾಜನಗರ, ಜ.21– ರಾಜ್ಯಾದ್ಯಂತ ಶನಿವಾರದಿಂದ ಆರಂಭವಾದ ಬಿಜೆಪಿ ವಿಜಯ ಸಂಕಲ್ಪ ಅಭಿಯಾನ ಜಿಲ್ಲೆಯಲ್ಲಿಯೂ ಸಾಂಕೇತಿಕವಾಗಿ ಚಾಲನೆ ನೀಡಲಾಯಿತು.

ನಗರದ ಕೊಳದ ಬೀದಿ ಗಣಪತಿ ದೇವಸ್ಥಾನದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಆರ್. ಸುಂದರ್ ಪಕ್ಷದ ಬಾವುಟವನ್ನು ಹಿಡಿದು ಪಕ್ಷದ ಪರವಾಗಿ ಘೋಷಣೆ ಕೂಗುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು.

ಪಕ್ಷದ ಮುಖಂಡರು ನಗರದ ದೊಡ್ಡಂಗಡಿ ಬೀದಿ, ಚಿಕ್ಕಂಗಡಿ ಬೀದಿ, ಸಂತೇಮರಳ್ಳಿ ವೃತ್ತ, ಸಂಪಿಗೆ ರಸ್ತೆ ಮೂಲಕ ಬಿಜೆಪಿ ಜಿಲ್ಲಾ ಕಚೇರಿಯವರೆಗೆ ಮೆರವಣಿಗೆ ನಡೆಸಿದರು.

ಈ ವೇಳೆ ಮನೆಗಳು, ಅಂಗಡಿ– ಮುಂಗಟ್ಟುಗಳು, ಬೀದಿ ಬದಿ ವ್ಯಾಪಾರಿಗಳನ್ನು ಸಂಪರ್ಕಿಸಿದ ಕಾರ್ಯಕರ್ತರು ಕೇಂದ್ರ ಮತ್ತು ರಾಜ್ಯ ಸರ್ಕಾರ ಸಾಧನೆಯನ್ನು ಬೆಂಬಲಿಸಿ, ಪ್ರಧಾನಿ ಮೋದಿ ಅವರ ಕೈ ಬಲಪಡಿಸಲು ರಾಜ್ಯದಲ್ಲಿ ಮತ್ತೇ ಬಿಜೆಪಿ ಅಧಿಕಾರ ತರಲು ಸಹಕರಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು, ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಅಮ್ಮನಪುರ ಮಲ್ಲೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ನಾಗಶ್ರೀ ಪ್ರತಾಪ್, ಮಂಗಲ ಶಿವಕುಮಾರ್, ಉಪಾಧ್ಯಕ್ಷ ಎ.ಆರ್. ಬಾಲರಾಜು, ಬಿಜೆಪಿ ಜಿಲ್ಲಾ ವಕ್ತಾರ ಅಯ್ಯನಪುರ ಶಿವಕುಮಾರ್, ಮುಖಂಡರಾದ ಡಾ.ಎ.ಆರ್. ಬಾಬು, ಮಂಡಲದ ಅಧ್ಯಕ್ಷ ಬಸವಣ್ಣ, ನಾಗರಾಜು, ನಗರಸಭಾ ಅಧ್ಯಕ್ಷೆ ಆಶಾ ನಟರಾಜು, ಸದಸ್ಯರಾದ ಕುಮುದಾ, ಮನೋಜ್ ಪಟೇಲ್, ಮುಖಂಡರಾದ ಕೂಡ್ಲೂರು ಹನುಮಂತಶೆಟ್ಟಿ, ಬೇಡರಪುರ ಬಸವಣ್ಣ, ನಗರಮಂಡಲ ಅಧ್ಯಕ್ಷ ರಾಜು, ಎಸ್.ಬಾಲಸುಬ್ರಮಣ್ಯ, ನೂರೊಂದು ಶೆಟ್ಟಿ, ಅಭಿಯಾನದ ಪ್ರಭಾರಿ ನಟರಾಜು, ಪದ್ಮಾ, ಕೂಸಣ್ಣ ಎಚ್.ಬಿ. ಮಹೇಶ್, ಮಾಧ್ಯಮ ಪ್ರಮುಖ್ ಮಂಜುನಾಥ್ ಸೇರಿದಂತೆ ಇತರರು ಇದ್ದರು.

ನಂತರ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿ ಅವರ ನಾಲ್ಕನೇ ಸಂಸ್ಕರಣಾರ್ಥ ದಾಸೋಹ ನಡೆಸಲಾಯಿತು.

ವಿಚಾರಣೆಗೆ ಹೆದರಿ ಆತ್ಮಹತ್ಯೆಗೆ ಯತ್ನಿಸಿದ ಕಾನ್‌ಸ್ಟೇಬಲ್

ಚಾಮರಾಜನಗರ, ಜ.21– ವಿಚಾರಣೆಗೆ ಹೆದರಿದ ಪೊಲೀಸ್ ಕಾನ್‌ಸ್ಟೇಬಲ್ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ನಗರದಲ್ಲಿ ಶುಕ್ರವಾರ ರಾತ್ರಿ ನಡೆದಿದೆ. ಮೂಲತಃ ಹಾಸನ ಜಿಲ್ಲೆಯ ರಾಮನಹಳ್ಳಿ ಗ್ರಾಮದ ನಿವಾಸಿಯಾದ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆ ಕಾನ್‌ಸ್ಟೇಬಲ್ ಎಚ್.ಆರ್.ಮಹೇಶ್ ಆತ್ಮಹತ್ಯೆಗೆ ಯತ್ನಿಸಿದವರಾಗಿದ್ದು, ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಘಟನೆಯ ವಿವರ: ಬೀಟ್ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿರುವ ಆರೋಪದಲ್ಲಿ ಏಳು ಕಾನ್‌ಸ್ಟೇಬಲ್‌ಗಳನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ(ಎಸ್‌ಪಿ) ಶಿವಕುಮಾರ್ ವರ್ಗಾವಣೆ ಮಾಡಿದ್ದರು. ಜೊತೆಗೆ ಅವರ ವಿರುದ್ಧ ತನಿಖೆಗೂ ಅಧಿಕಾರಿಗಳಿಗೆ ಸೂಚಿಸಿದ್ದರು.

> ಶುಕ್ರವಾರ ರಾತ್ರಿ ಮಹೇಶ್ ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂಬ ಮಾಹಿತಿ ಬಂತು. ತಕ್ಷಣವೇ ಡಿವೈಎಸ್‌ಪಿ ಹಾಗೂ ಇನ್‌ಸ್ಪೆಕ್ಟರ್ ಸ್ಥಳಕ್ಕೆ ತೆರಳಿ ಪರಿಶೀಲಿಸಿದರು. ಮಹೇಶ್ ಅವರನ್ನು ಆಸ್ಪತ್ರೆಗೂ ದಾಖಲಿಸಲಾಗಿದೆ. ವೈಯಕ್ತಿಕ ಕಾರಣಕ್ಕೆ ಈ ರೀತಿ ಮಾಡಿಕೊಂಡಿದ್ದಾಗಿ ಅವರು ಹೇಳಿದ್ದಾರೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಿ ವರದಿ ನೀಡುವಂತೆ ಡಿವೈಎಸ್‌ಪಿ ಪ್ರಿಯದರ್ಶಿಣಿ ಸಾಣೆಕೊಪ್ಪ ಅವರಿಗೆ ತಿಳಿಸಲಾಗಿದೆ. ಮಹೇಶ್ ಅವರ ಜೀವಕ್ಕೆ ಅಪಾಯ ಇಲ್ಲ.
>
> –ಟಿ.ಪಿ. ಶಿವಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ವರ್ಗಾವಣೆಗೊಂಡ ಏಳು ಮಂದಿಯಲ್ಲಿ ಮಹೇಶ್ ಕೂಡಾ ಒಬ್ಬರು. ಅವರನ್ನು ಹನೂರು ಠಾಣೆಗೆ ವರ್ಗ ಮಾಡಲಾಗಿತ್ತು.

ಇದರಿಂದ ಮನನೊಂದು ಅವರು ಶುಕ್ರವಾರ ರಾತ್ರಿ ಮೈಗೆ ಬೆಂಕಿ ಹಂಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಕೂಡಲೇ ಅವರನ್ನು ಸಿಮ್ಸ್‌ಗೆ ದಾಖಲಿಸಲಾಗಿದ್ದು, ಮಹೇಶ್ ಅವರ ಕೈ, ಪಕ್ಕೆಲುಬಿನ ಭಾಗ, ಎಡ ತೊಡೆಭಾಗದಲ್ಲಿ ಸುಟ್ಟ ಗಾಯಗಳಾಗಿದೆ.

ಈ ಬಗ್ಗೆ ಜಿಲ್ಲಾ ಸರ್ಜನ್ ಡಾ.ಕೃಷ್ಣಪ್ರಸಾದ್ ಪ್ರತಿಕ್ರಿಯಿಸಿ, ಮಹೇಶ್ ಅವರನ್ನು ಶುಕ್ರವಾರ ರಾತ್ರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆತರಲಾಗಿತ್ತು. ಮೈಮೇಲೆ ಸುಟ್ಟಗಾಯಗಳಿದ್ದವು. ತಕ್ಷಣವೇ ಕರ್ತವ್ಯದಲ್ಲಿದ್ದ ಸರ್ಜನ್ ಅವರಿಗೆ ಚಿಕಿತ್ಸೆ ನೀಡಿದರು. ಈಗ ವಿಶೇಷ ವಾರ್ಡ್‌ಗೆ ಸ್ಥಳಾಂತರಿಸಲಾಗಿದ್ದು, ಆರೋಗ್ಯ ಸ್ಥಿರವಾಗಿದೆ ಎಂದರು.

ನಾಳೆ ಬಾಲ್ಯವಿವಾಹ ನಿಷೇಧ ಕುರಿತು ತರಬೇತಿ ಕಾರ್ಯಾಗಾರ

ಚಾಮರಾಜನಗರ, ಜ.21– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಬಾಲ್ಯವಿವಾಹ ನಿಷೇಧ ಕುರಿತು ಭಾಗೀದಾರರಿಗೆ ತರಬೇತಿ ಕಾರ್ಯಾಗಾರವನ್ನು ಜ.23ರಂದು ಬೆಳಗ್ಗೆ 10 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಹಳೆ ಕೆ.ಡಿ.ಪಿ. ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಶ್ರದ್ಧಾ ಭಕ್ತಿಯೊಂದಿಗೆ ತ್ರಿವಿಧ ದಾಸೋಹಿಯ ಪುಣ್ಯಸ್ಮರಣೆ



ಚಾಮರಾಜನಗರ, ಜ21– ತ್ರಿವಿಧದಾಸೋಹಿ, ದೇಶ ಕಂಡ ಆಧುನಿಕ ಸಂತ, ಸಿದ್ದಗಂಗೆಯ ಪುಣ್ಯ ಪುರುಷ ಡಾ.ಶಿವಕುಮಾರ ಸ್ವಾಮೀಜಿಯವರ 4ನೇ ಪುಣ್ಯಸ್ಮರಣೆಯನ್ನು ದಾಸೋಹ ದಿನವನ್ನಾಗಿ ಜಿಲ್ಲಾ ಕೇಂದ್ರದ ವಿವಿಧೆಡೆ ಶ್ರದ್ಧಾ ಭಕ್ತಿಯೊಂದಿಗೆ ಆಚರಿಸಿ, ಅನ್ನದಾಸೋಹ ಮಾಡಲಾಯಿತು.

ನಗರದ ಜಿಲ್ಲಾಡಳಿತ ಭವನದ ಬಳಿ ಇರುವ, ಅಧ್ಯಕ್ಷ ಹೋಟೆಲ್ ಮುಂಭಾಗ ಸೇರಿದಂತೆ ವಿವಿಧೆಡೆ ಡಾ. ಶಿವಕುಮಾರ ಸ್ವಾಮೀಜಿಯವರ ಭಾವಚಿತ್ರ ಇಟ್ಟು ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಅನ್ನದಾಸೋಹ ಮಾಡಲಾಯಿತು.

ಈ ಸಂದರ್ಭದಲ್ಲಿ ಹರವೆ ವಿರಕ್ತ ಸರ್ಪಭೂಷಣ ಸ್ವಾಮೀಜಿ ಮಾತನಾಡಿ, ಈ ನಾಡು ಕಂಡ ಪುಣ್ಯ ಪುರುಷರಲ್ಲಿ ಡಾ. ಶಿವಕುಮಾರ ಸ್ವಾಮೀಜಿ ಒಬ್ಬರು, ಸಹಸ್ರಾರು ವಿದ್ಯಾರ್ಥಿಗಳಿಗೆ ಅನ್ನ, ವಿದ್ಯೆ ಆಶ್ರಯ ನೀಡಿ ಅವರ ಬದುಕನ್ನು ಬೆಳಗಿದ ಪುಣ್ಯಾತ್ಮರು ಎಂದರು.

12ನೇ ಶತಮಾನದ ಬಸವಾದಿ ಶರಣರು ಕಂಡಂತಹ ದಾಸೋಹ, ಜ್ಞಾನದ ಚಿಂತನೆ ಪ್ರಸ್ತುತ ಸನ್ನಿವೇಶದಲ್ಲಿ ಅತ್ಯಗತ್ಯವಾಗಿದೆ, ಬಸವಣ್ಣನವರ ಅನುಯಾಯಿಯಾಗಿ ತಮ್ಮ ಜೀವಿತಾವಧಿಯ ಉದ್ದಕ್ಕೂ ನುಡಿದಂತೆ ನಡೆದರು, ಮಠ ಮಾನ್ಯಗಳು ನೊಂದವರಿಗೆ ಯಾವ ರೀತಿ ನೆರವಾಗಬೇಕು ಎಂಬುದನ್ನು ತೋರಿಸಿದರು, ಕಾಯಕ ದಾಸೋಹಕ್ಕೆ ಮಹತ್ವ ನೀಡಿದ ಶ್ರೀಗಳು ಹಸಿದು ಬಂದ ಜನರಿಗೆ ಅನ್ನ ನೀಡಿದರು. ಅವರು ಕಾರುಣ್ಯ ಪುರುಷರು ಎಂದರು. ಇಂದು ರಾಜ್ಯಾದ್ಯಂತ ದಾಸೋಹ ದಿನವನ್ನಾಗಿ ಆಚರಿಸಲಾಗುತ್ತದೆ, ಅದರಂತೆ ಅಧ್ಯಕ್ಷ ಹೋಟೆಲ್‌ನ ಕುಮಾರ್ ಇಂದು ಸಂಜೆಯವರೆಗೆ ಉಚಿತವಾಗಿ ಅನ್ನ ದಾಸೋಹ ಮಾಡುತ್ತಿದ್ದಾರೆ, ದಾಸೋಹದ ಚಿಂತನೆ ಪವಿತ್ರವಾದ ಕಾರ್ಯ ಎಂದರು.

ಈ ಸಂದರ್ಭದಲ್ಲಿ ಮೂಡ್ಲುಪುರ ನಂದೀಶ್, ಕುಮಾರ್ ಅಧ್ಯಕ್ಷ ಹೋಟೆಲ್, ನಾಗೇಂದ್ರ (ಪುಟ್ಟು) ಬಸವರಾಜು, ಎನ್.ಜಿ. ಪ್ರಶಾಂತ್, ಆಲೂರು ಮಲ್ಲು ಮಲ್ಲಿಕಾರ್ಜುನ್, ಸೋಮು, ರಮೇಶ್‌ಬಾಬು, ಶಿವಕುಮಾರ್, ಬಸಪ್ಪ, ವಿಶ್ವನಾಥ್, ಹಿರಿಬೇಗೂರು ಗುರುಸ್ವಾಮಿ, ಪ್ರಕಾಶ್, ಕಂಠಿ, ತೊರವಳ್ಳಿ ಕುಮಾರ್, ಕುಮಾರಸ್ವಾಮಿ, ಮಲ್ಲಿಕಾರ್ಜುನ, ರಾಜು, ಮಹೇಶ್ ಇತರರು ಇದ್ದರು

ಗ್ರಾಮ ಒನ್ ಕೇಂದ್ರ ತೆರೆಯಲು ಅರ್ಜಿ ಆಹ್ವಾನ

ಚಾಮರಾಜನಗರ, ಜ.21– ಜಿಲ್ಲೆಯಲ್ಲಿ ಪ್ರಸ್ತುತ ಬಾಕಿ ಇರುವ 62 ಗ್ರಾಮ ಪಂಚಾಯಿತಿಗಳಲ್ಲಿ 72 ಗ್ರಾಮ ಒನ್ ಕೇಂದ್ರಗಳನ್ನು ತೆರೆಯಲು ಆಸಕ್ತ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಗ್ರಾಮ ಒನ್ ಅನ್ನು ಸೇವಾ ಸಿಂಧು ಯೋಜನೆಯಡಿ ರೂಪಿಸಲಾಗಿದೆ. ಸರ್ಕಾರದ ಸೇವೆಗಳನ್ನು ಮನೆ ಬಾಗಿಲಿಗೆ ತಲುಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದ್ದು, ಇದರಡಿ 750ಕ್ಕೂ ಹೆಚ್ಚು ನಾಗರಿಕ ಸೇವೆಗಳನ್ನು ಪಡೆಯಲು ಅವಕಾಶವಿದೆ.

ಬಾಕಿ ಇರುವ 62 ಗ್ರಾಮ ಪಂಚಾಯಿತಿಗಳಲ್ಲಿ 72 ಗ್ರಾಮ ಒನ್ ಕೇಂದ್ರಗಳನ್ನು ತೆರೆಯಬೇಕಿದೆ. ಗ್ರಾಮ ಒನ್ ಕೇಂದ್ರಗಳನ್ನು ತೆರೆಯಲು ಆಸಕ್ತಿಯುಳ್ಳ ಅಭ್ಯರ್ಥಿಗಳು http://gramaonebls.com/applicant-registration ಜಾಲತಾಣದಲ್ಲಿ ಆನ್‌ಲೈನ್ ಮುಖಾಂತರ ಜ.31ರೊಳಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ ದೂ.ಸಂ. 080–69008800 ಸಂಪರ್ಕಿಸುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿವುಡುತನ, ಮಾತಿನ ತೊಂದರೆಗಳ ಬೃಹತ್ ತಪಾಸಣಾ ಶಿಬಿರ ಯಶಸ್ವಿ

ಶಿಬಿರದಲ್ಲಿ 350ಕ್ಕೂ ಹೆಚ್ಚು ಮಂದಿಗೆ ತಜ್ಞವೈದ್ಯರಿಂದ ತಪಾಸಣೆ



ಚಾಮರಾಜನಗರ, ಜ.21– ಜೆಎಸ್‌ಎಸ್ ಆಸ್ಪತ್ರೆ, ಮೈಸೂರು ಹಾಗೂ ಡಾ.ಬಾಬು ಸೋಷಿಯಲ್ ವೆಲ್‌ಫೇರ್ ಅಂಡ್ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಕಿವುಡುತನ ಹಾಗೂ ಮಾತಿನ ತೊಂದರೆವುಳ್ಳವರಿಗೆ ಉಚಿತ ಬೃಹತ್ ತಪಾಸಣಾ ಶಿಬಿರ ಇಂದು ಯಶಸ್ವಿಯಾಗಿ ನಡೆಯಿತು.

ಶಿಬಿರದಲ್ಲಿ ಕಿವಿ ದೋಷವುಳ್ಳವರು, ಮಾತು ಬಾರದವರು ಸೇರಿದಂತೆ 350ಕ್ಕೂ ಹೆಚ್ಚು ಮಂದಿ ತಪಾಸಣೆ ಮಾಡಿಸಿಕೊಂಡರು. ಜೆಎಸ್‌ಎಸ್ ಅಸ್ಪತ್ರೆಯ ತಜ್ಞ ವೈದ್ಯರ ತಂಡವು ಕಿವಿ ಕೇಳಿಸದ, ಮಾತು ಬಾರದ ವೃದ್ಧರು, ಮಹಿಳೆಯರು ಹಾಗೂ ಮಕ್ಕಳನ್ನು ತಪಾಸಣೆ ಮಾಡಿ, ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು. ಕೆಲವರಿಗೆ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಆಸ್ಪತ್ರೆಗೆ ಶಿಫಾರಸ್ಸು ಮಾಡಿದರೆ, ಇನ್ನು ಕೆಲವರಿಗೆ ಉಚಿತವಾಗಿ ಔಷಧಿಗಳನ್ನು ವಿತರಣೆ ಮಾಡಿದರು.

ಶಿಬಿರಕ್ಕೆ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಗಿಡಕ್ಕೆ ನೀರೆರುವ ಮೂಲಕ ಚಾಲನೆ ನೀಡಿ ಮಾತನಾಡಿ, ಸ್ವತಃ ವೈದ್ಯರಾಗಿರುವ ಡಾ. ಎ.ಆರ್. ಬಾಬು ಅವರು ತಮ್ಮ ಹೆಸರಿನಲ್ಲಿ ಚಾರಿಟಬಲ್ ಟ್ರಸ್ಟ್ ರಚನೆ ಮಾಡಿಕೊಂಡು ಸಾಮಾಜಿಕ ಸೇವೆ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇಂದು ಜೆಎಸ್‌ಎಸ್ ಆಸ್ಪತ್ರೆಯ ಸಹಯೋಗದಲ್ಲಿ ಪ್ರಥಮ ಬಾರಿಗೆ ನಗರದಲ್ಲಿ ನಡೆಯುತ್ತಿರುವ ಕಿವುಡುತನ ಹಾಗೂ ಮಾತಿನ ತೊಂದರೆವುಳ್ಳವರಿಗೆ ಉಚಿತ ತಪಾಸಣಾ ಶಿಬಿರವು ಜಿಲ್ಲೆಯ ಜನತೆಗೆ ಹೆಚ್ಚಿನ ಉಪಯುಕ್ತವಾಗಿದೆ. ಇಂಥ ಶಿಬಿರವನ್ನು ತಾವೆಲ್ಲರು ಹೆಚ್ಚಾಗಿ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಶಿಬಿರದ ನೇತೃತ್ವ ವಹಿಸಿದ್ದ ಟ್ರಸ್ಟ್ ಅಧ್ಯಕ್ಷ ಡಾ.ಎ.ಆರ್.ಬಾಬು ಮಾತನಾಡಿ, ಗ್ರಾಮೀಣ ಜನರ ಆರೋಗ್ಯ ಬಗ್ಗೆ ಜಾಗೃತಿ ಮೂಡಿಸುವ ಜೊತೆಗೆ ಉಚಿತ ಶಿಬಿರಗಳನ್ನು ನಡೆಸಿ ಉತ್ತಮ ಆರೋಗ್ಯ ಸೇವೆಯನ್ನು ನೀಡುವ ಆಶಯ ನಮ್ಮದಾಗಿದೆ. ಈಗಾಗಲೇ ಚಾಮರಾಜನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಣ್ಣಿನ ಉಚಿತ ತಪಾಸಣೆ ಶಿಬಿರ, ಹೃದಯರೋಗ ತಪಾಸಣೆ ಶಿಬಿರಗಳನ್ನು ನಡೆಸಲಾಗುತ್ತಿದೆ. ನಮ್ಮ ಟ್ರಸ್ಟ್ ಹಾಗೂ ಜೆಎಸ್‌ಎಸ್ ಆಸ್ಪತ್ರೆ ಮೈಸೂರು ಸಹಯೋಗದಲ್ಲಿ ಪ್ರಥಮ ಬಾರಿಗೆ ಬೃಹತ್ ಕಿವುಡುತನ ಹಾಗೂ ಮಾತಿನ ತೊಂದರೆಗಳ ತಪಾಸಣಾ ಶಿಬಿರ ಅಯೋಜಿಸಲಾಗಿದೆ. ಶಿಬಿರದಲ್ಲಿ 350ಕ್ಕೂ ಹೆಚ್ಚು ಮಂದಿ ತಪಾಸಣೆಯಲ್ಲಿ ಭಾಗವಹಿಸಿದ್ದಾರೆ ಎಂದರು.

ಈ ವೇಳೆ ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ಜೆಎಸ್‌ಎಸ್ ಆಸ್ಪತ್ರೆ ಅಧೀಕ್ಷಕ ಡಾ. ಗೋವಿಂದಶೆಟ್ಟಿ, ಚಾಮುಲ್ ಅಧ್ಯಕ್ಷ ವೈ.ಸಿ. ನಾಗೇಂದ್ರ ಹಿರಿಯ ನಿರ್ದೇಶಕ ಎಚ್.ಎಸ್. ಬಸವರಾಜು, ಜಿಲ್ಲಾ ಆಸ್ಪತ್ರೆ ಸ್ಥಾನಿಕ ವೈದ್ಯಾಧಿಕಾರಿ ಡಾ.ಮಹೇಶ್, ಜಿಪಂ ಮಾಜಿ ಸದಸ್ಯ ಆರ್. ಬಾಲರಾಜು, ಎಪಿಎಂಸಿ ಅಧ್ಯಕ್ಷ ಮನೋಜ್ ಪಟೇಲ್, ನಗರಸಭಾ ಮಾಜಿ ಸದಸ್ಯ ಗಣೇಶ್ ದಿಕ್ಷೀತ್, ಮುಖಂಡರಾದ ಕಿಲಗೆರೆ ಬಸವರಾಜು, ನೂರೊಂದು ಶೆಟ್ಟಿ, ಶಿವಣ್ಣ, ನಲ್ಲೂರು ಶ್ರೀನಾಥ್, ಎಲ್. ಸುರೇಶ್ ಇತರರು ಉಪಸ್ಥಿತರಿದ್ದರು.

ಹೆಚ್ಚುವರಿ ಶಾಲಾ ಕೊಠಡಿಗಳ ಉದ್ಘಾಟನೆ

ಚಾಮರಾಜನಗರ, ಜ.21– ತಾಲೂಕಿನ ಯಡಪುರ ಹಾಗೂ ಶಿವಪುರ ಗ್ರಾಮಗಳ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ತಲಾ 10.60 ಲಕ್ಷ ರೂ.ವೆಚ್ಚದಲ್ಲಿ ನಿರ್ಮಿಸಲಾಗಿರುವ ಹೆಚ್ಚುವರಿ ಶಾಲಾ ಕೊಠಡಿಗಳನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ಎರಡು ಗ್ರಾಮಗಳಲ್ಲಿನ ಶಾಲೆಗಳಲ್ಲಿನ ಕೊಠಡಿಗಳ ಕೊರತೆಯಿದ್ದು, ಕೊಠಡಿ ನಿರ್ಮಿಸಿಕೊಡಬೇಕು ಎಂಬ ಮನವಿಯನ್ನು ಗ್ರಾಮಸ್ಥರು ತಮಗೆ ಸಲ್ಲಿಸಿದ್ದರು. ಅದರಂತೆ ಎರಡು ಗ್ರಾಮಗಳ ಶಾಲೆಗಳಲ್ಲಿ ಶಿಕ್ಷಣ ಇಲಾಖೆ ಅನುದಾನದಲ್ಲಿ ಹೆಚ್ಚುವರಿ ಕೊಠಡಿ ನಿರ್ಮಿಸಿ ಲೋಕಾರ್ಪಣೆ ಮಾಡಲಾಗಿದೆ ಎಂದು ಅವರು ಹೇಳಿದರು.

ಕಾರ್ಮಿಕ ಕನಿಷ್ಠ ವೇತನ ಸಲಹಾ ಮಂಡಳಿ ಮಾಜಿ ಅಧ್ಯಕ್ಷ ಆರ್. ಉಮೇಶ್, ಗ್ರಾಪಂ ಅಧ್ಯಕ್ಷೆ ಎಂ.ಸಿ.ಮಹದೇವಮ್ಮ, ಉಪಾಧ್ಯಕ್ಷ ಯಡಪುರ ಮಹದೇವಸ್ವಾಮಿ, ಗ್ರಾಪಂ ಸದಸ್ಯರು, ಮುಖ್ಯಶಿಕ್ಷಕರು, ಸಹಶಿಕ್ಷಕರು, ಶಾಲಾಭಿವೃದ್ಧಿ ಸಮಿತಿ ಸದಸ್ಯರು, ಗ್ರಾಮಸ್ಥರು, ಮುಖಂಡರು ಹಾಜರಿದ್ದರು.

ಮೈಸೂರು ಮಿತ್ರ

ಅಮಿತ್ ಶಾ ಮತ್ತೊಂದು ಟೂರ್: ಬೆಂಗಳೂರು, ಮಂಡ್ಯ ಗೇಮ್ ಪ್ಲ್ಯಾನ್



ಬೆಂಗಳೂರು, ಜ.21– ಇದೇ ತಿಂಗಳು ಕಡೇ ವಾರದಲ್ಲಿ ಅಮಿತ್ ಶಾ ಮತ್ತೆ ಬೆಂಗಳೂರಿಗೆ ಮತ್ತೊಂದು ಟೂರ್ ಮಾಡಲಿದ್ದಾರೆ. ಆಪರೇಷನ್ ಓಲ್ಡ್ ಮೈಸೂರು ಟಾಸ್ಕ್‌ಗೆ ಅಮಿತ್ ಶಾ ಪೂರ್ಣ ಪ್ರಮಾಣದ ಚಿಕಿತ್ಸೆ ನೀಡುವ ಸಾಧ್ಯತೆ ಇದೆ. ಇದೇ ವೇಳೆ ಮಂಡ್ಯ ವಿಚಾರದಲ್ಲಿ ಸುಮಲತಾ ಜೊತೆ ಶಾ ಅವರೇ ನೇರವಾಗಿ ಮಾತುಕತೆ ನಡೆಸಲು ರಾಜ್ಯ ಬಿಜೆಪಿ ಪ್ಲ್ಯಾನ್ ಮಾಡಿದೆ.

ಈಗಾಗಲೇ ಮಂಡ್ಯ, ಮದ್ದೂರು ಕ್ಷೇತ್ರಗಳಲ್ಲಿ ಸುಮಲತಾ ಅವರಿಗಾಗಿ ಬಿಜೆಪಿ ಟಿಕೆಟ್ ಕಾಯ್ದಿರಿಸಿದೆ. ಸುಮಲತಾ ಬಂದರೆ ಅವರು ಹೇಳುವವರಿಗೆ ಟಿಕೆಟ್ ಎನ್ನುತ್ತಿದೆ ರಾಜ್ಯ ಬಿಜೆಪಿ ಘಟಕ. ಮಂಡ್ಯ ಜಿಲ್ಲೆಯಲ್ಲಿ ಸುಮಲತಾ ಅವರಿಗೆ ಮಿನಿಮಮ್ ಮೂರು ಟಿಕೆಟ್ ಎಂಬ ಮಂಡ್ಯ ಟಾರ್ಗೆಟ್ ಟಾಸ್ಕ್ ಕೊಡಲು ಬಿಜೆಪಿ ತಂತ್ರ ಹೂಡಿದೆ. ಹೀಗಾಗಿ ಜನವರಿ ಅಂತ್ಯದೊಳಗೆ ಅಮಿತ್ ಶಾ ಅವರೇ ಸುಮಲತಾ ಜೊತೆ ಮಾತನಾಡಲಿದ್ದು, ಬಳಿಕ ಸುಮಲತಾ ತಮ್ಮ ನಿರ್ಧಾರ ಫೈನಲ್ ಮಾಡ್ತಾರೆ ಎನ್ನಲಾಗಿದೆ. ಅಮಿತ್ ಶಾ ಮಾತುಕತೆ ಯಶಸ್ವಿಯಾದರೆ ಶಿವರಾತ್ರಿಗೂ ಮುನ್ನವೇ ಸುಮಲತಾ ನಿರ್ಧಾರ ಪ್ರಕಟಿಸುವ ಸಾಧ್ಯತೆ ಎನ್ನುತ್ತಿವೆ ಮೂಲಗಳು. ಇದರ ಜೊತೆಗೆ ಟಾರ್ಗೆಟ್ ಬೆಂಗಳೂರು ಅಮಿತ್ ಶಾ ಟೂರ್‌ನ ಮತ್ತೊಂದು ವಿಶೇಷ. ರಾಜಧಾನಿಯಲ್ಲಿ ಬಿಜೆಪಿ ಬಿಗಿ ಮಾಡಲು ಮೆಗಾ ರೋಡ್ ಶೋಗೆ ಪ್ಲ್ಯಾನ್ ಮಾಡಲಾಗುತ್ತಿದೆ. ಬೆಂಗಳೂರಿನಲ್ಲಿ ವೀಕ್ ಇರುವ ಕ್ಷೇತ್ರಗಳಲ್ಲಿ ಹವಾ ಎಬ್ಬಿಸಲು ಅಮಿತ್ ಶಾ ಸೂಚನೆ ನೀಡಿದ್ದು, ಬೆಂಗಳೂರಿನ ಎರಡ್ಮೂರು ಕ್ಷೇತ್ರಗಳಲ್ಲಿ ರೋಡ್ ಶೋಗೆ ಅಮಿತ್‌ಶಾ ಟೈಂ ಕೊಟ್ಟಿದ್ದಾರೆ ಎನ್ನಲಾಗಿದೆ.

ಒಂದನೇ ಪುಟದಿಂದ

ನಿಚ್ಚಳ ಬಹುಮತ ಖಚಿತ

ಕಮಿಷನ್ ಆಸೆಗೆ ಒಳಗಾಗಿ ಅಭಿವೃದ್ಧಿ ಕಾರ್ಯವನ್ನು ಕುಂಠಿತಗೊಳಿಸಿದೆ. ಎಲ್ಲಾ ಇಲಾಖೆಗಳಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಲೂಟಿ ಮಾಡಲೇ ಅಧಿಕಾರಕ್ಕೆ ಬಂದಿರುವವರಂತೆ ಅಕ್ರಮ ಎಸಗುತ್ತಿ ದ್ದಾರೆ. ಬಿಜೆಪಿ ಬಣ್ಣ ಬಯಲಾಗಿದೆ. ಹಾಗಾಗಿ ಮುಂಬರುವ ಚುನಾವಣೆಯಲ್ಲಿ ಜನರೇ ಬಿಜೆಪಿಗೆ ತಕ್ಕ ಪಾಠ ಕಲಿಸಲು ನಿರ್ಧರಿಸಿದ್ದಾರೆ ಎಂದರು. ರಾಜ್ಯಕ್ಕೆ ಈ ಹಿಂದೆ 5 ವರ್ಷ ಭ್ರಷ್ಟಾಚಾರ ರಹಿತ, ಪಾರದರ್ಶಕ ಹಾಗೂ ಸುಭದ್ರ ಸರ್ಕಾರವನ್ನು ಕಾಂಗ್ರೆಸ್ ನೀಡಿದೆ. ಈ ಅವಧಿಯಲ್ಲಿ ಅನ್ನಭಾಗ್ಯ, ಕ್ಷೀರಭಾಗ್ಯ, ಸಾಲ ಮನ್ನಾ, ಮನಸ್ವಿನಿ ಸೇರಿದಂತೆ ಹಲವು ಜನಪರ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ. ಪ್ರಣಾಳಿಕೆಯಲ್ಲಿ ಕೊಟ್ಟ ಭರವಸೆಯನ್ನು ಸಂಪೂರ್ಣವಾಗಿ ಈಡೇರಿಸಿದ್ದೇವೆ. ಐದು ವರ್ಷದ ಅವಧಿಯಲ್ಲಿ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲದಂತೆ ಆಡಳಿತ ನಡೆಸಿದ್ದೇವೆ. ಹಾಗಾಗಿ ರಾಜ್ಯದ ಜನರಿಗೆ ಕಾಂಗ್ರೆಸ್ ಸರ್ಕಾರದ ಮೇಲೆ ನಂಬಿಕೆ ಇದೆ. ನಮ್ಮ ಸರ್ಕಾರ ಕೊಟ್ಟ ಕಾರ್ಯಕ್ರಮಗಳನ್ನು ನೆನೆಸಿಕೊಳ್ಳುತ್ತಿದ್ದಾರೆ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬೆಂಬಲ ನೀಡಲು ಜನತೆ ಉತ್ಸುಕರಾಗಿದ್ದಾರೆ ಎಂದು ತಿಳಿಸಿದರು. ಈ ಚುನಾವಣೆಯಲ್ಲಿ ನಾವು 130ಕ್ಕೂ ಹೆಚ್ಚು ಸ್ಥಾನ ಗಳಿಸುತ್ತೇವೆ. ಜೆಡಿಎಸ್, ಬಿಜೆಪಿ, ಬೇರೆ ಯಾರು ಏನೇ ಹೇಳಿದರೂ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ನಿಶ್ಚಿತ. ಜನ ಬದಲಾವಣೆ ಬಯಸಿದ್ದಾರೆ. ಭ್ರಷ್ಟ ಬಿಜೆಪಿಯನ್ನು ಅಧಿಕಾರದಿಂದ ಕಿತ್ತುಹಾಕಲು ತೀರ್ಮಾನ ಮಾಡಿದ್ದಾರೆ. ನಾವು ಈಗಾಗಲೇ ಸುಮಾರು 8 ರಿಂದ 9 ಜಿಲ್ಲೆಗಳಲ್ಲಿ ಯಾತ್ರೆ ಮಾಡಿದ್ದೇವೆ. ಫೆ.28ರವರೆಗೆ ಯಾತ್ರೆ ಮಾಡಿ ಸುಮಾರು 22 ಜಿಲ್ಲೆಗಳಲ್ಲಿ ಪ್ರಚಾರ ಮುಂದುವರೆಸುತ್ತೇವೆ. ಯಾತ್ರೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಜನರ ಒಲವು ನಮ್ಮ ಕಡೆಗಿದೆ. ಹಾಗಾಗಿ ಕನಿಷ್ಠ 130 ಸೀಟುಗಳಲ್ಲಿ ನಾವು ಗೆಲ್ಲುತ್ತೇವೆ ಎಂದು ಪುನರುಚ್ಚರಿಸಿದರು.

ಜಮೀರ್–ಸಿದ್ದರಾಮಯ್ಯ ರಹಸ್ಯ ಮಾತುಕತೆ

ಶುಕ್ರವಾರ ರಾತ್ರಿ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಶಾಸಕ ಜಮೀರ್ ಅಹಮ್ಮದ್ ರಹಸ್ಯ ಮಾತುಕತೆ ನಡೆಸಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸೋಲಿಸಲು 500 ಕೋಟಿ ರೂ. ಆಫರ್ ನೀಡಲಾಗಿದೆ ಎಂಬ ಆರೋಪಕ್ಕೆ ಪ್ರತಿಕ್ರಿಯೆ ನೀಡಲು ಸಿದ್ದರಾಮಯ್ಯ ನಿರಾಕರಿಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಖಂಡರಾದ ಕೆ.ಎಸ್.ಶಿವರಾಮು, ಕುಮಾರ್, ಮೈಸೂರು ಬಸವಣ್ಣ, ರಘು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬಿಜೆಪಿ ತಂತ್ರ ಫಲಿಸದು: ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಸಚಿವ ಅಮಿತ್ ಶಾ ಸೇರಿದಂತೆ ಯಾರೇ ಬಂದರೂ ಕರ್ನಾಟಕದ ಮತದಾರರ ಮೇಲೆ ಪರಿಣಾಮ ಬೀರುವುದಿಲ್ಲ. ನಡ್ಡಾ ಯಾರು ಅವರು ನಮಗೇನು ಮಾಡಿದ್ದಾರೆ ಡಬ್ಬಲ್ ಇಂಜಿನ್ ಸರ್ಕಾರ ಇದ್ದರೂ ರಾಜ್ಯಕ್ಕೆ ಮೋದಿ ಅವರು ಏನು ಮಾಡಿದ್ದಾರೆ. ನಾವು ಅಧಿಕಾರದಲ್ಲಿದ್ದಾಗ ಮಾಡಿದ ಕೆಲಸಗಳನ್ನು ಜನ ನೋಡಿದ್ದಾರೆ. ನಾವು ನುಡಿದಂತೆ ನಡೆದವರು. ಜನ ನಮ್ಮ ಮಾತನ್ನು ನಂಬುತ್ತಾರೆ ಎಂದರು.

ನಾವು ಅಧಿಕಾರಕ್ಕೆ ಬಂದರೆ ಉಚಿತವಾಗಿ 200 ಯುನಿಟ್ ವಿದ್ಯುತ್ ಕೊಡುತ್ತೇವೆ. ಪ್ರತೀ ಮನೆಯ ಯಜಮಾನಿಗೆ ತಿಂಗಳಿಗೆ ರೂ. 2,000 ಕೊಡುತ್ತೇವೆ ಎಂದು ಹೇಳಿದ್ದೇವೆ. ಇನ್ನು ಮುಂದೆ ನಮ್ಮ ಪ್ರಣಾಳಿಕೆಯಲ್ಲಿ ಮಾಡುವ ಎಲ್ಲಾ ಘೋಷಣೆಗಳನ್ನು ಈಡೇರಿಸುತ್ತೇವೆ. ಈ ಹಿಂದಿನ ನಮ್ಮ ಪ್ರಣಾಳಿಕೆಯ 99% ಭರವಸೆಗಳನ್ನು ಈಡೇರಿಸಿದ್ದೆವು, ಮುಂದೆಯೂ ಈಡೇರಿಸುತ್ತೇವೆ. ಜನರ ನಂಬಿಕೆ, ವಿಶ್ವಾಸವನ್ನು ನಾವು ಉಳಿಸಿಕೊಂಡಿದ್ದೇವೆ. ಹಾಗಾಗಿ ಜನರ ಒಲವು ಕಾಂಗ್ರೆಸ್ ಮೇಲಿದೆ ಎಂದು ತಿಳಿಸಿದರು.

ಕೋಲಾರದಲ್ಲಿ ಗೆದ್ದೇ ಗೆಲ್ತೆನೆ...: ನಾನು ಕೋಲಾರದಲ್ಲೇ ಸ್ಪರ್ಧಿಸಲು ಇಚ್ಛಿಸಿದ್ದೇನೆ. ಕೋಲಾರಕ್ಕೆ ಬಿ.ಎಲ್.ಸಂತೋಷ್, ಅಮಿತ್ ಶಾ, ನಡ್ಡಾ, ಮೋದಿ ಯಾರಾದರೂ ಬರಲಿ ನಾನು ಗೆದ್ದೇ ಗೆಲ್ಲುತ್ತೇನೆ. ಬಾದಾಮಿಯಲ್ಲಿ ಅಮಿತ್ ಶಾ ಅವರು ರಾಮುಲು ಅವರನ್ನು ಕರೆದುಕೊಂಡು ಹೋಗಿ ನನ್ನ ವಿರುದ್ಧ ನಿಲ್ಲಿಸಿದ್ದರು. ಸಾಮಾನ್ಯವಾಗಿ ಪಟ್ಟಣಶೆಟ್ಟಿ ಅವರಿಗೆ ಟಿಕೆಟ್ ಕೊಡಬೇಕಾಗಿತ್ತು. ಆದರೆ ನನ್ನನ್ನು ಸೋಲಿಸುವ ಉದ್ದೇಶದಿಂದ ರಾಮುಲು ಅವರಿಗೆ ಟಿಕೆಟ್ ಕೊಟ್ಟರು. ನಾನು ಬಾದಾಮಿಗೆ ಹೋಗಿದ್ದು ಎರಡೇ ದಿನ. ಒಂದಿನ ನಾಮಿನೇಷನ್ ಹಾಕೋಕೆ, ಇನ್ನೊಂದಿನ ಓಟು ಕೇಳೋಕೆ. ಬಾದಾಮಿಯಲ್ಲಿ ಬಿಜೆಪಿಯವರು ಕೋಟ್ಯಾಂತರ ರೂ. ಖರ್ಚು ಮಾಡಿದರೂ ಗೆದ್ರಾ. ಕೋಲಾರದಲ್ಲೂ ಅವರು ಗೆಲ್ಲಲ್ಲ ಎಂದರು.

ದೂರದ ಕಾರಣ: ನಾನು ಸೋಲುತ್ತೇನೆ ಎಂಬ ಭಯದಿಂದ ಬಾದಾಮಿ ಕ್ಷೇತ್ರದಿಂದ ದೂರ ಸರಿಯುತ್ತಿಲ್ಲ. ಇಂದಿಗೂ ಬಾದಾಮಿ ಜನ ಹೆಲಿಕಾಪ್ಟರ್ ಕೊಡಿಸುತ್ತೇವೆ. ಇಲ್ಲೇ ಸ್ಪರ್ಧಿಸುವಂತೆ ಒತ್ತಾಯಿಸುತ್ತಿದ್ದಾರೆ. ಆದರೆ, ಬೆಂಗಳೂರಿನಿಂದ ಬಾದಾಮಿ ತುಂಬಾ ದೂರವಿದೆ. ನನಗೂ ವಯಸ್ಸಾಗ್ತಾ ಇದೆ. ದೂರ ಇದ್ದರೆ ಪದೇ ಪದೆ ಕ್ಷೇತ್ರಕ್ಕೆ ಭೇಟಿ ನೀಡಿ ಜನರ ಕಷ್ಟ ಕೇಳಲು ಆಗುವುದಿಲ್ಲ. ಪಕ್ಷ ಅಧಿಕಾರಕ್ಕೆ ಬಂದರೆ ಕ್ಷೇತ್ರ ಹತ್ತಿರದಲ್ಲಿದ್ದರೆ ಹೆಚ್ಚು ಕೆಲಸ ಮಾಡಬಹುದು. ಅದಕ್ಕೆ ಹತ್ತಿರದ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದೇನೆ ಎಂದು ಸ್ಪಷ್ಟಪಡಿಸಿದರು.

ನಿನ್ನೆ ಕಾಂಗ್ರೆಸ್ ಸೇರಿದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಸ್ಥಳೀಯ ನಾಯಕರು ಇಂದು ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ನಂತರ ಜ.26ರಂದು ಮೈಸೂರು ನಗರದಲ್ಲಿ ನಡೆಯಲಿರುವ ಕಾಂಗ್ರೆಸ್ ಜಿಲ್ಲಾ ಮಟ್ಟದ ಸಮಾವೇಶಕ್ಕೆ ಹೆಚ್ಚಿನ ಜನರನ್ನು ಕರೆತರಲು ಮಾತುಕತೆ ನಡೆಸಿ, ಹಾಸನದ ಕಾರ್ಯಕ್ರಮಕ್ಕೆ ತೆರಳಿದರು.

ಸಿದ್ದು ಸೋಲಿಸಿ: ದಲಿತ ಸಿಎಂ ಅಭಿಯಾನ

ಸಿದ್ದರಾಮಯ್ಯ ಅವರಿಗೆ ತಕ್ಕ ಪಾಠ ಕಲಿಸಲಾಗುವುದು ಎಂಬ ಸಂದೇಶವನ್ನು ರವಾನೆ ಮಾಡುತ್ತಿದ್ದೇವೆ ಎಂದಿದ್ದಾರೆ. ಸಿದ್ದರಾಮಯ್ಯ ಅವರನ್ನು ಸೋಲಿಸಿ ದಲಿತ ಮುಖ್ಯಮಂತ್ರಿ ಹಾದಿ ಸುಗಮಗೊಳಿಸಿ ಎಂಬ ಮನವಿ ಇರುವ ಕರ ಪತ್ರವನ್ನು ಹಂಚುತ್ತಿರುವ ಮುಖಂಡರು, ಸಿದ್ದರಾಮಯ್ಯ ಅವರನ್ನು ಸೋಲಿ ಸುವ ಮೂಲಕ ಕೋಲಾರದಲ್ಲಿ ದಲಿತರು ಸ್ವಾಭಿಮಾನ ಮೆರೆಯೋಣ ಅನ್ನೋ ಮನವಿಯನ್ನು ಮಾಡುತ್ತಿದ್ದಾರೆ. ರಾಜ್ಯದಲ್ಲಿ ದಲಿತ ನಾಯಕರಾಗಿದ್ದ ಜಿ.ಪರಮೇಶ್ವರ್, ಮಲ್ಲಿಕಾರ್ಜುನ ಖರ್ಗೆ, ಶ್ರೀನಿವಾಸ ಪ್ರಸಾದ್, ಧ್ರುವನಾರಾಯಣ್, ಕೆ.ಹೆಚ್.ಮುನಿಯಪ್ಪರನ್ನು ಬದಿಗೊತ್ತಿ ಸಿದ್ದರಾಮಯ್ಯ ಸಿಎಂ ಆಗಿದ್ದಾರೆ. ದಲಿತ ಸಮುದಾಯ ಕಾಂಗ್ರೆಸ್‌ನ್ನು ಬೆಂಬಲಿಸಿಕೊಂಡು ಬಂದಿದ್ದು ಈವರೆಗೂ ದಲಿತ ಸಿಎಂ ಮಾಡಿಲ್ಲ. ಸಿದ್ದರಾಮಯ್ಯ ಸಿಎಂ ಆಗಲು ದಲಿತರಿಗೆ ಸಿಎಂ ಸ್ಥಾನ ಕೈ ತಪ್ಪುವಂತೆ ಮಾಡಿದ್ದಾರೆ. ಸಿದ್ದರಾಮಯ್ಯ ಸೋತರೆ ಕಾಂಗ್ರೆಸ್‌ನಲ್ಲಿ ದಲಿತರು ಸಿಎಂ ಆಗುವ ಸಾಧ್ಯತೆಯಿದೆ ಎಂದು ಸಾರ್ವಜನಿಕರಿಗೆ ಕರ ಪತ್ರ ಹಂಚಿ ಸಿದ್ದರಾಮಯ್ಯರನ್ನು ಸೋಲಿಸಲು ಸಾರ್ವಜನಿಕರಲ್ಲಿ ಮನವಿ ಮಾಡಲಾಗುತ್ತಿದೆ.

ಬಿಜೆಪಿ ಚುನಾವಣಾ ಉಸ್ತುವಾರಿ

ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಮೂಲಕ ರಾಜ್ಯದಲ್ಲಿ ಬಿಜೆಪಿಯ ಪರವಾದ ಅಲೆ ಎಬ್ಬಿಸುವ ಕೆಲಸ ಮಾಡುತ್ತಿದ್ದಾರೆ. ಒಂದು ಕಾರ್ಯಕ್ರಮ ಜನರಿಂದ ಮಾಸುವ ಮುನ್ನವೇ ಮತ್ತೊಂದು ಕಾರ್ಯಕ್ರಮ ಹಮ್ಮಿಕೊಂಡು ಪಕ್ಷದ ಪರವಾದ ನಿಲುವು ಜನರ ಮನಸ್ಸಿನಲ್ಲಿ ಉಳಿಸುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಚುನಾವಣೆಯಲ್ಲಿ ಗೆದ್ದು ಮತ್ತೆ ಅಧಿಕಾರಕ್ಕೆ ಬರಲೇಬೇಕು ಎಂಬ ಗುರಿ ಹಾಕಿಕೊಂಡಿರುವ ಸಂತೋಷ್, ಹಿಂದುತ್ವದ ಸಾಂಪ್ರದಾಯಿಕ ಅಸ್ತ್ರಗಳನ್ನು ಈ ಚುನಾವಣೆಯಲ್ಲಿ ಪ್ರಮುಖವಾಗಿ ಬಳಸುತ್ತಿದ್ದಾರೆ.

ರಾಜ್ಯದ ಹಿಂದಿನ ಚುನಾವಣೆಗಳಲ್ಲಿ ಯಡಿಯೂರಪ್ಪ ಅವರನ್ನು ಮುಂಚೂಣಿಯಲ್ಲಿ ಬಿಟ್ಟು ವೀರಶೈವ ಮತ್ತು ಪಕ್ಷದ ಸಾಂಪ್ರದಾಯಿಕ ಮತಗಳನ್ನು ಪಡೆಯಲು ಸಫಲರಾಗುತ್ತಿದ್ದರು. ಆದರೆ, ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಜಾತಿ ಓಲೈಕೆಗಿಂತ ಮೋದಿ ವರ್ಚಸ್ಸು ಹಾಗೂ ಹಿಂದುತ್ವದ ಆಧಾರದ ಮೇಲೆ ಚುನಾವಣಾ ವೇದಿಕೆ ಸಿದ್ಧಪಡಿಸುತ್ತಿದ್ದಾರೆ. ಇದಕ್ಕೆ ಇಂಬು ನೀಡುವಂತೆ ಪ್ರಧಾನಿ ಒಂದಲ್ಲ ಒಂದು ಸರ್ಕಾರಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಸರ್ಕಾರದ ಯೋಜನೆಗಳನ್ನು ತಿಳಿಸುವ ನೆಪದಲ್ಲಿ ಪಕ್ಷಕ್ಕೆ ಪರೋಕ್ಷ ಪ್ರಚಾರ ಮಾಡುತ್ತಿದ್ದಾರೆ. ಇದರ ನಡುವೆಯೇ ಅಮಿತ್ ಷಾ ಮತ್ತು ನಡ್ಡಾ ಸತತವಾಗಿ ವಿವಿಧ ಸಮಾಜದ ಮಠಗಳು ಮತ್ತು ಮಠಾಧೀಶರನ್ನು ಭೇಟಿಯಾಗಿ ಸಹಕಾರ ಕೋರುತ್ತಿದ್ದಾರೆ. ಸಂತೋಷ್ ಮಾರ್ಗದರ್ಶನದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಿಡುವು ತೆಗೆದುಕೊಳ್ಳದೇ ಕಾಲಿಗೆ ಚಕ್ರ ಕಟ್ಟಿಕೊಂಡು ರಾಜ್ಯದೆಲ್ಲೆಡೆ ಒಂದಲ್ಲ ಒಂದು ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಆಡಳಿತ ಪರವಾದ ಅಲೆ ಸೃಷ್ಟಿಸಲು ಮತ್ತು ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಪ್ರಾಕೃತಿಕ ದೃಶ್ಯ ಸೆರೆ ಹಿಡಿಯಲು ಛಾಯಾಗ್ರಾಹಕನಿಗೆ ತಾಳ್ಮೆ ಅಗತ್ಯ

● ಹಿರಿಯ ಸಾಹಿತಿ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ಅಭಿಮತ ● ರಾಮ್‌ಸನ್ಸ್ ಕಲಾ ಪ್ರತಿಷ್ಠಾನದಲ್ಲಿ ನೈಜ ಛಾಯಾಚಿತ್ರಗಳ ಪ್ರದರ್ಶನಕ್ಕೆ ಚಾಲನೆ



ಮೈಸೂರು, ಜ.21(ಎಂಟಿವೈ)– ಪ್ರಕೃತಿಯ ಉತ್ತಮ ಛಾಯಾಚಿತ್ರ ಸೆರೆ ಹಿಡಿಯಬೇಕಾದರೆ ಛಾಯಾಗ್ರಾಹಕರಿಗೆ ತಾಳ್ಮೆ ಅಗತ್ಯ ಎಂದು ವಿದ್ವಾಂಸ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಇಟ್ಟಿಗೆಗೂಡು ಬಡಾವಣೆಯಲ್ಲಿರುವ ರಾಮ್‌ಸನ್ಸ್ ಕಲಾಪ್ರತಿಷ್ಠಾನದ ಆವರಣದಲ್ಲಿ ಮೈಸೂರು ಆರ್ಟ್ ಗ್ಯಾಲರಿ ಹಾಗೂ ರಾಮ್‌ಸನ್ಸ್ ಕಲಾ ಪ್ರತಿಷ್ಠಾನ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸ್ವಾತಂತ್ರ್ಯೋತ್ಸವದ ಅಮೃತೋತ್ಸವ ಘಮಲು ಸಾಧಕರ ಸಂವಾದದ ಮಜಲು ಒಂದು ಹಿನ್ನೋಟ ಹಾಗೂ ನೈಜ ಛಾಯಾಚಿತ್ರಗಳ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಉತ್ತಮ ಛಾಯಾಗ್ರಹಣಕ್ಕಾಗಿ ತಪಸ್ಸು ಮಾಡಬೇಕು. ಅದಕ್ಕೆ ಪ್ರಮುಖವಾಗಿ ತಾಳ್ಮೆ ಇರಬೇಕಾಗುತ್ತದೆ ಸಹನೆಯ ಮನೋಭಾವ ಇದ್ದಷ್ಟೂ ಉತ್ತಮ ಚಿತ್ರ ಸೆರೆ ಹಿಡಿಯಬಹುದಾಗಿದೆ. ಈ ನಿಟ್ಟಿನಲ್ಲಿ ಅಂತರಂಗದ ದೃಷ್ಟಿ ಜಾಗೃತವಾಗಿರಬೇಕು ಎಂದು ಸಲಹೆ ನೀಡಿದರು.

ಛಾಯಾಗ್ರಾಹಕರಿಗೆ ಅಂತರಂಗದ ದೃಷ್ಟಿ ಸರಿಯಾಗಿಲ್ಲದಿದ್ದರೆ ಕ್ಯಾಮರಾದಲ್ಲಿ ಸುಂದರವಾದ ಚಿತ್ರಗಳು ಸೆರೆಯಾಗುವುದಿಲ್ಲ. ಛಾಯಾಚಿತ್ರ ಹಾಗೂ ಚಿತ್ರಗಳಿಗೆ ಕಾಲವನ್ನು ತಡೆ ಹಿಡಿದು ನಿಲ್ಲಿಸುವ ಶಕ್ತಿ ಇದೆ. ಕಾಲದ ಸ್ಥಿರ ಸ್ಥಿತಿಯೇ ಛಾಯಾಚಿತ್ರವಾಗಿದೆ. ಪ್ರಕೃತಿಯ ಸೃಷ್ಟಿಯನ್ನು ಸೆರೆ ಹಿಡಿಯಲು ಛಾಯಾಗ್ರಾಹಕನಿಗೆ ಪ್ರತಿಭೆ ಮುಖ್ಯ. ಯಾವ ಸಮಯದಲ್ಲಿ ಕ್ಲಿಕ್ಕಿಸಿದರೆ, ಸುಂದರ ಚಿತ್ರ ಸೆರೆ ಹಿಡಿಯಬಹುದು ಎಂಬ ಮಾಹಿತಿ ತಿಳಿದಿರಬೇಕು. ಸುಂದರ ಛಾಯಾಚಿತ್ರ ಕಲಾಕೃತಿಯ ಹಿಂದೆ ಛಾಯಾಗ್ರಾಹಕನ ಅನುಭವದ ಕಥೆ ಇರುತ್ತದೆ. ಅದನ್ನು ನೋಡುವ ಸಹೃದಯದಲ್ಲೂ ಹೊಸ ಕಥೆ, ಕಲ್ಪನೆ ಮೂಡಿಸಲು ಅದಕ್ಕೆ ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ವನ್ಯಜೀವಿ ಛಾಯಾಗ್ರಾಹಕ, ವಿಜ್ಞಾನ ಲೇಖಕ ಎಸ್. ರಾಮಪ್ರಸಾದ್ ಅವರನ್ನು ಸನ್ಮಾನಿಸಲಾಯಿತು. ಬಳಿಕ ಮಾತನಾಡಿದ ಅವರು, ಕೇರಳದಲ್ಲಿ ಮೆಡಿಕಲ್ ರೆಪ್ರಸೆಂಟೇಟಿವ್ ಆಗಿದ್ದ ನನ್ನ ಅಣ್ಣ, 1953ರಲ್ಲಿ ಚಿಕ್ಕ ಕ್ಯಾಮರಾವೊಂದನ್ನು ನನಗೆ ಕೊಡುಗೆ ನೀಡಿದ್ದರು. ಆ ಕ್ಯಾಮರಾ ನನ್ನ ಛಾಯಾಗ್ರಹಣದ ಪಯಣಕ್ಕೆ ಕಾರಣವಾಯಿತು. ಅದು ವನ್ಯಜೀವಿಗಳ ಸುತ್ತ ಅಲೆದಾಡುವಂತೆ ಮಾಡಿತು. ನಮ್ಮನ್ನು ನಾವು ಕಾಣಲು ನಮ್ಮೊಳಗೆ ನಾವು ಇಣುಕಬೇಕು. ಆಗ ವ್ಯಕ್ತಿತ್ವ ಅರಿಯಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಮೈಸೂರು ಆರ್ಟ್ ಗ್ಯಾಲರಿಯ ಕಲಾವಿದ ಎಲ್.ಶಿವಲಿಂಗಪ್ಪ ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಪತ್ರಕರ್ತ ರಮೇಶ್ ಐ.ಉತ್ತಪ್ಪ ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಕಲಾಪೋಷಕ ಆರ್.ಜಿ. ಸಿಂಗ್, ಗಾನಭಾರತೀ ಅಧ್ಯಕ್ಷ ಡಾ.ರಮಾ ವಿ.ಬೆಣ್ಣೂರು, ರಾಮಸನ್ಸ್ ಕಲಾಪ್ರತಿಷ್ಠಾನದ ಅಧ್ಯಕ್ಷ ಅಜಯಕುಮಾರ್ ಸಿಂಗ್, ಮೈಸೂರು ಆರ್ಟ್ ಗ್ಯಾಲರಿ ಕಾರ್ಯದರ್ಶಿ ಡಾ.ಜಮುನಾ ರಾಣಿ ಮಿರ್ಲೆ, ಸಂಚಾಲಕ ಶ್ರೀಕಂಠಮೂರ್ತಿ, ರಂಗಕರ್ಮಿ ರಾಜಶೇಖರ ಕದಂಬ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು. ಕಾರ್ಯಕ್ರಮದ ಅಂಗವಾಗಿ ಹಿರಿಯ ಛಾಯಾಗ್ರಾಹಕ ಎಸ್.ರಾಮಪ್ರಸಾದ್ ಅವರ ವನ್ಯಜೀವಿ, ಪ್ರಕೃತಿಯ ಸುಂದರ ಛಾಯಾಚಿತ್ರಗಳನ್ನು ಪ್ರದರ್ಶಿಸಲಾಗಿತ್ತು

ಜ.25ರಿಂದ 29ರವರೆಗೆ ನಿರಂತರ ರಂಗ ಉತ್ಸವ



ಮೈಸೂರು,ಜ.21(ಪಿಎಂ)– ಹವ್ಯಾಸಿ ರಂಗಭೂಮಿ ಸಂಘಟನೆಯಾದ ನಿರಂತರ ಫೌಂಡೇಷನ್ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಜ.25ರಿಂದ 29ರವರೆಗೆ ನಾಟಕಗಳ ಪ್ರದರ್ಶನ 'ನಿರಂತರ ರಂಗ ಉತ್ಸವ' ಏರ್ಪಡಿಸಿದೆ ಎಂದು ಫೌಂಡೇಷನ್‌ನ ಅಧ್ಯಕ್ಷ ಎಂ.ಎಂ.ಸುಗುಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 16ನೇ ವರ್ಷದ ಉತ್ಸವ ಇದಾಗಿದ್ದು, ರಾಜ್ಯದ ನಾನಾ ಭಾಗಗಳ ರಂಗತಂಡಗಳು ಈ ಉತ್ಸವದಲ್ಲಿ ಪ್ರದರ್ಶನ ನೀಡಲಿವೆ. ಈ ಬಾರಿಯೂ ಸಮಗ್ರತೆಯ ಸಂಕೇತವಾಗಿ ನಮ್ಮ ಮಹಾಕಾವ್ಯಗಳಿಂದ ಹಿಡಿದು, ಕಾಳಿದಾಸ ಮತ್ತು ಶೇಕ್ಸ್‌ಪಿಯರ್‌ನ ನಾಟಕಗಳ ಪ್ರಸ್ತುತಿಯೂ ಇರಲಿದೆ ಎಂದು ಹೇಳಿದರು.

ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಪ್ರತಿದಿನ ಸಂಜೆ 6.30ಕ್ಕೆ ನಾಟಕಗಳ ಪ್ರದರ್ಶನ ನಡೆಯಲಿದ್ದು, ಪ್ರತಿ ಪ್ರದರ್ಶನಕ್ಕೆ 100 ರೂ. ಟಿಕೆಟ್ ವ್ಯವಸ್ಥೆ ಮಾಡಲಾಗಿದೆ. ಜ.25ರಂದು ಸಂಜೆ 6.15ಕ್ಕೆ ಉದ್ಘಾಟನಾ ಸಮಾರಂಭ ಹಮ್ಮಿಕೊಂಡಿದ್ದು, ಕವಿ ಕೋಟಿಗಾನಹಳ್ಳಿ ರಾಮಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಬಳಿಕ ಸಂಜೆ 6.30ಕ್ಕೆ ಧಾರವಾಡದ ಗೊಂಬೆಮನೆ ತಂಡದಿಂದ 'ಶಾಂತಕವಿಗಳ ವಿಶ್ರಾಂತಿ' ನಾಟಕ ಪ್ರದರ್ಶನಗೊಳ್ಳಲಿದೆ. ಪ್ರಕಾಶ್ ಗರುಡ ರಚನೆ ಮತ್ತು ನಿರ್ದೇಶನ ಈ ನಾಟಕಕ್ಕೆ ಇದ್ದು, ಕನ್ನಡದ ಆದ್ಯ ನಾಟಕಕಾರ ಎಂದು ಹೆಸರಾದ ಸಕ್ಕರಿ ಬಾಳಾಚಾರ್ಯ (ಶಾಂತಕವಿ) ಅವರ ಜೀವನ ಮತ್ತು ಸಾಧನೆ ಕುರಿತ ನಾಟಕ ಇದಾಗಿದೆ ಎಂದು ತಿಳಿಸಿದರು.

ಜ.26ರಂದು ನಿರಂತರ ತಂಡದಿಂದ ಜಯರಾಂ ರಾಯಪುರ ರಚನೆಯ 'ವಾರಸುದಾರ' ನಾಟಕ ಪ್ರದರ್ಶನಗೊಳ್ಳಲಿದೆ. ಪ್ರಸಾದ್ ಕುಂದೂರು ಅವರ ನಿರ್ದೇಶನವಿರುವ ಈ ನಾಟಕವು ಮೊಗಲ್ ರಾಜರ ಇತಿಹಾಸದ ಮೇಲೆ ಬೆಳಕು ಚೆಲ್ಲಲಿದೆ. ಜ.27ರಂದು ಬೆಂಗಳೂರಿನ ಅನೇಕ ತಂಡದಿಂದ ಪ್ರೊ.ಕೆ.ಈ.ರಾಧಾಕೃಷ್ಣ ರಚನೆಯ 'ನವಿಲು ಪುರಾಣ' ಪ್ರದರ್ಶನಗೊಳ್ಳಲಿದೆ. ವಿನಾಶಕಾರಿ ಯುದ್ಧದ ಪರಿಣಾಮ ನೆಲೆ ಕಳೆದುಕೊಂಡು ನಿರಾಶ್ರಿತವಾದ ನವಿಲು ಈ ನಾಟಕದ ಕೇಂದ್ರ ಬಿಂದು. ಇದರ ಸುತ್ತ ಪುರಾಣ, ಇತಿಹಾಸ ಮತ್ತು ವರ್ತಮಾನ ಕಾಲಘಟ್ಟಗಳ ಹಲವು ಘಟನೆಗಳು ಅನಾವರಣಗೊಳ್ಳಲಿವೆ ಎಂದು ಹೇಳಿದರು.

ಜ.28ರಂದು ಬೆಳ್ಳಾವೆ ನರಹರಿಶಾಸ್ತ್ರಿ ರಚನೆಯ 'ಮಿಸ್.ಸದಾರಮೆ' ನಾಟಕವನ್ನು ಬೆಂಗಳೂರಿನ ಸಮಷ್ಟಿ ತಂಡ ಸಾದರಪಡಿಸಲಿದೆ. ಮಂಜುನಾಥ್ ಎಲ್. ಬಡಿಗೇರ ಅವರ ನಿರ್ದೇಶನ ಇದಕ್ಕಿದ್ದು, ನರಹರಿಶಾಸ್ತ್ರಿ ಅವರಿಂದ ರಚಿತವಾದ 'ಸದಾರಮಾ ನಾಟಕಂ'ನ ಪರಿಷ್ಕೃತ ಆವೃತ್ತಿ ಇದಾಗಿದೆ. ವರ್ತಕ ಬಂಗಾರ ಶೆಟ್ಟಿಯ ಪುತ್ರಿ ಸದಾರಮೆಯನ್ನು ರಾಜಕುಮಾರನು ಮದುವೆಯಾಗಿ ಅವಳೊಂದಿಗೆ ದೇಶಾಂತರ ಹೋಗುವ ಕಥಾ ಸಾರಾಂಶವನ್ನು ಇದು ಒಳಗೊಂಡಿದೆ ಎಂದರು.

ಜ.29ರಂದು ಕೆ.ಪಿ.ಲಕ್ಷ್ಮಣ್ ಅವರ ರಚನೆ ಮತ್ತು ನಿರ್ದೇಶನದ 'ದಕ್ಲಕಥಾ ದೇವಿಕಾವ್ಯ' ನಾಟಕವನ್ನು ಬೆಂಗಳೂರಿನ ಜಂಗಮ ಕಲೆಕ್ಟಿವ್ ತಂಡವು ಪ್ರದರ್ಶಿಸಲಿದೆ. ಈ ನಾಟಕವು ಅಸ್ಪೃಶ್ಯತೆಯ ನೋವಿನ ಚಿತ್ರಣ ನೀಡಲಿದೆ. ಇದಕ್ಕೂ ಮುನ್ನ ಸಂಜೆ 6.15ಕ್ಕೆ ಸಮಾರೋಪ ಸಮಾರಂಭ ಹಮ್ಮಿಕೊಂಡಿದ್ದು, ಅತಿಥಿಗಳಾಗಿ ಕವಿ ಆರಿಫ್ ರಾಜಾ, ಬಿಬಿಎಂಪಿ ವಿಶೇಷ ಆಯುಕ್ತ ಜಯರಾಂ ರಾಯಪುರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು. ಇದೇ ವೇಳೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮತ್ತು ಒಡನಾಡಿ ಸೇವಾ ಸಂಸ್ಥೆ ಪರಶು ಉತ್ಸವದ ಪೋಸ್ಟರ್ ಬಿಡುಗಡೆ ಮಾಡಿದರು. ಫೌಂಡೇಷನ್ ಟ್ರಸ್ಟಿ ಶ್ರೀನಿವಾಸ್ ಪಾಲಹಳ್ಳಿ ಮತ್ತಿತರರು ಗೋಷ್ಠಿಯಲ್ಲಿದ್ದರು.

ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ

ಸಮುದಾಯದ ಶ್ರೇಯೋಭಿವೃದ್ಧಿ ಬಗ್ಗೆ ಚರ್ಚಿಸಿಲ್ಲ; ಕಾಂಗ್ರೆಸ್ ಆರೋಪ



ಮೈಸೂರು,ಜ.21(ಪಿಎಂ)– ಮೈಸೂರಿನಲ್ಲಿ ಇತ್ತೀಚೆಗೆ ನಡೆದ ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಸಮುದಾಯದ ಶ್ರೇಯೋಭಿವೃದ್ಧಿ ಬಗ್ಗೆ ಯಾವುದೇ ಚರ್ಚೆ ನಡೆಸಿಲ್ಲ. ಇದು ಕೇವಲ ಕಣ್ಣೊರೆಸುವ ತಂತ್ರವಷ್ಟೇ ಎಂದು ಕಾಂಗ್ರೆಸ್ ನಗರ ವಕ್ತಾರ ರಾಜೇಶ್ ದೂರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಲಿತ ಸಮುದಾಯದ ಶಿಕ್ಷಣ, ಉದ್ಯೋಗ, ಸಾಮಾಜಿಕ ಸಬಲೀಕರಣದ ಬಗ್ಗೆ ಚರ್ಚಿಸಿಲ್ಲ. ದಲಿತರ ಮೇಲಿನ ದೌರ್ಜನ್ಯ ತಡೆಗೆ ಸರ್ಕಾರದ ಮೇಲೆ ಒತ್ತಡ ಹಾಕುವ ಬಗ್ಗೆಯೂ ನಿರ್ಣಯ ಕೈಗೊಂಡಿಲ್ಲ. ಕಾಂಗ್ರೆಸ್‌ನಿಂದ ಮಾತ್ರವೇ ಎಸ್‌ಸಿ ಸಮುದಾಯದ ಶ್ರೇಯೋಭಿವೃದ್ಧಿ ಸಾಧ್ಯ ಎಂದು ಹೇಳಿದರು.

ಮೈಸೂರಿನಲ್ಲಿ ಡಾ.ಅಂಬೇಡ್ಕರ್ ಭವನ ನಿರ್ಮಿಸಲು ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿದ್ದಾಗ ಅನುದಾನ ಬಿಡುಗಡೆ ಮಾಡಿದ್ದರು. ಈಗಿನ ಬಿಜೆಪಿ ಸರ್ಕಾರ ಸದರಿ ಅಂಬೇಡ್ಕರ್ ಭವನ ಕಾಮಗಾರಿ ಪೂರ್ಣಗೊಳಿಸಲು ಆಸಕ್ತಿ ತೋರುತ್ತಿಲ್ಲ. ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಈ ಭವನದ ಕಾಮಗಾರಿ ಪೂರ್ಣಗೊಳಿಸುವ ಬಗ್ಗೆ ಚರ್ಚೆ ನಡೆಸಿಲ್ಲ. ಇವರ ಸರ್ಕಾರ 1ರಿಂದ 8ನೇ ತರಗತಿಯ ವಿದ್ಯಾರ್ಥಿವೇತನ ತಡೆಹಿಡಿದಿದೆ ಎಂದು ದೂರಿದರು.

ಪ್ರಿಯಾಂಕ್ ಖರ್ಗೆಯವರು ಸಮಾಜ ಕಲ್ಯಾಣ ಸಚಿವರಾಗಿದ್ದಾಗ ಐರಾವತ ಯೋಜನೆಯಡಿ ಎಸ್‌ಸಿ–ಎಸ್‌ಟಿ ಸಮುದಾಯದವರ ಸ್ವಯಂ ಉದ್ಯೋಗಕ್ಕೆ 5 ಲಕ್ಷ ರೂ. ಸಬ್ಸಿಡಿ ನೀಡಲಾಗುತ್ತಿತ್ತು. ಬಿಜೆಪಿ ಸರ್ಕಾರ ಬಂದ ಬಳಿಕ ಸಬ್ಸಿಡಿ ಕಡಿತ ಮಾಡಲಾಗಿದೆ. ಸಮಾಜ ಕಲ್ಯಾಣ ಇಲಾಖೆಗೆ ಕಾಂಗ್ರೆಸ್ ಸರ್ಕಾರ 39 ಸಾವಿರ ಕೋಟಿ ಮೀಸಲಿಟ್ಟಿತ್ತು. ಆದರೆ ಬಿಜೆಪಿ ಸರ್ಕಾರ ಕೇವಲ 28 ಸಾವಿರ ಕೋಟಿ ನೀಡಿದೆ ಎಂದರು. ಕಾಂಗ್ರೆಸ್ ಮುಖಂಡರಾದ ಕುರುಬಾರಹಳ್ಳಿ ಪ್ರಕಾಶ್, ಪ್ರವೀಣ್, ಸಂತೋಷ್‌ಕುಮಾರ್ ಗೋಷ್ಠಿಯಲ್ಲಿದ್ದರು.

ಜ.24ರಿಂದ ಶ್ರುತಿಮಂಜರಿ ಪ್ರತಿಷ್ಠಾನದ 25ನೇ ವಾರ್ಷಿಕ ಸಂಗೀತೋತ್ಸವ



ಮೈಸೂರು,ಜ.21(ಪಿಎಂ)– ಶ್ರುತಿಮಂಜರಿ ಪ್ರತಿಷ್ಠಾನದ 25ನೇ ವಾರ್ಷಿಕ ಸಂಗೀತೋತ್ಸವ 'ಶ್ರುತಿಮಂಜರಿ ರಜತ ಸಂಭ್ರಮ' ಜ.24ರಿಂದ 29ರವರೆಗೆ ರೋಟರಿ ಪಶ್ಚಿಮ ಮೈಸೂರು ಸಹಯೋಗದೊಂದಿಗೆ ನಡೆಯಲಿದೆ ಎಂದು ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ ಡಾ.ಆರ್.ಎನ್.ಶ್ರೀಲತಾ ತಿಳಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಲಾಪೋಷಕರ ಸಹಕಾರದಿಂದ ಪ್ರತಿಷ್ಠಾನವು 25 ವರ್ಷಗಳನ್ನು ಪೂರೈಸಿದೆ. ಈ ಸಂದರ್ಭದಲ್ಲಿ ಹಮ್ಮಿಕೊಂಡಿರುವ 25ನೇ ವಾರ್ಷಿಕ ಸಂಗೀತೋತ್ಸವ ಮೈಸೂರಿನ ಸರಸ್ವತಿಪುರಂನ ರೋಟರಿ ಪಶ್ಚಿಮದ ಸಭಾಂಗಣದಲ್ಲಿ ನಡೆಯಲಿದೆ. ಸಾರ್ವಜನಿಕರಿಗೆ ಪ್ರವೇಶ ಉಚಿತವಿದೆ ಎಂದರು.

ಜ.24ರಂದು ಸಂಜೆ 6ಕ್ಕೆ ಸಂಗೀತೋತ್ಸವದ ಉದ್ಘಾಟನಾ ಸಮಾರಂಭ ಏರ್ಪಡಿಸಿದ್ದು, ಪಿಟೀಲು ವಿದ್ವಾಂಸರೂ ಆದ ಆಕಾಶವಾಣಿ ನಿವೃತ್ತ ನಿಲಯ ಕಲಾವಿದ ವಿದ್ವಾನ್ ಹೆಚ್.ಕೆ.ನರಸಿಂಹಮೂರ್ತಿ ಸಂಗೀತೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ರೋಟರಿ ಪಶ್ಚಿಮದ ಅಧ್ಯಕ್ಷ ಉಲ್ಲಾಸ್ ಪಂಡಿತ್ ಅಧ್ಯಕ್ಷತೆ ವಹಿಸಲಿದ್ದಾರೆ. ಬಳಿಕ ಸಂಜೆ 7ಕ್ಕೆ ಕರ್ನಾಟಕ ಶಾಸ್ತ್ರೀಯ ಸಂಗೀತ ನಡೆಯಲಿದೆ ಎಂದು ಹೇಳಿದರು.

ಜ.25ರಂದು ಸಂಜೆ 6ಕ್ಕೆ ಪಂಡಿತ್ ಪ್ರವೀಣ್ ಗೋಡ್ಖಿಂಡಿ ಮತ್ತು ಸಂಗಡಿಗರು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಬಾನ್ಸುರಿ ವಾದನ ನಡೆಸಿಕೊಡಲಿದ್ದಾರೆ. ಜ.26ರಂದು ಸಂಜೆ 6ಕ್ಕೆ ವಿದ್ವಾನ್ ವಿಠ್ಠಲ್ ರಾಮಮೂರ್ತಿ ಮತ್ತು ವಿದ್ವಾನ್ ಶ್ರೀಹರಿ ವಿಠ್ಠಲ್ ಅವರು ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ದ್ವಂದ್ವ ಪೀಟಿಲು ವಾದನ ನಡೆಸಿಕೊಡಲಿದ್ದಾರೆ. ಜ.27ರಂದು ಸಂಜೆ 6ಕ್ಕೆ ವಿದುಷಿ ಡಾ.ಆರ್.ಎನ್.ಶ್ರೀಲತಾ ರಚಿಸಿದ ಕೃತಿಗಳ ಗಾಯನವನ್ನು ಅವರ ಶಿಷ್ಯ ವೃಂದ ಸಾದರಪಡಿಸಲಿದೆ ಎಂದು ತಿಳಿಸಿದರು.

ಪದ್ಮಶ್ರೀ ಪುರಸ್ಕೃತ ವಿದ್ವಾನ್ ಆರ್.ಎನ್.ತ್ಯಾಗರಾಜನ್ ಅವರು ನಡೆಸಿದ ಸಂಗೀತ ಕಾರ್ಯಾಗಾರದ ವಿದ್ಯಾರ್ಥಿಗಳು ಕರ್ನಾಟಕ ಶಾಸ್ತ್ರೀಯ ಸಂಗೀತ ಪ್ರಸ್ತುತಪಡಿಸಲಿದ್ದಾರೆ. ಜ.28ರಂದು ಸಂಜೆ 6ಕ್ಕೆ ಪದ್ಮಶ್ರೀ ಪುರಸ್ಕೃತ ವಿದ್ವಾನ್ ಆರ್.ಎನ್.ತ್ಯಾಗರಾಜನ್ ಅವರಿಂದ ಗಾಯನ ನಡೆಯಲಿದೆ. ಜ.29ರಂದು ಬೆಳಗ್ಗೆ 10ಕ್ಕೆ ನಾಡಿನ ಪ್ರಸಿದ್ಧ ವಿದ್ವಾಂಸರು ಮತ್ತು ವಿದುಷಿಯರಿಂದ ಗೋಷ್ಠಿ ಗಾಯನ ನಡೆಯಲಿದೆ. ಇದೇ ದಿನ ಸಂಜೆ 6ಕ್ಕೆ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಲಯ–ಲಾವಣ್ಯ ಕಾರ್ಯಕ್ರಮವನ್ನು ವಿದ್ವಾನ್ ಆನೂರು ಅನಂತಕೃಷ್ಣ ಶರ್ಮ ಮತ್ತು ವೃಂದದವರು ಪ್ರಸ್ತುತಪಡಿಸಲಿದ್ದಾರೆ ಎಂದರು. ಶ್ರುತಿಮಂಜರಿ ಪ್ರತಿಷ್ಠಾನದ ಕಾರ್ಯದರ್ಶಿ ಎಂ.ಕೆ.ಸೀತಾರಾಮ್, ಖಜಾಂಚಿ ಕೆ.ಎಸ್.ಸುರೇಶ್, ರೋಟರಿ ಪಶ್ಚಿಮದ ಅಧ್ಯಕ್ಷ ಉಲ್ಲಾಸ್ ಪಂಡಿತ್, ಕಾರ್ಯದರ್ಶಿ ಶ್ರೀನಾಥ್ ಗೋಷ್ಠಿಯಲ್ಲಿದ್ದರು.

ಜಸಿಂಡಾ ಅಡೆರ್ನ್ ರಾಜೀನಾಮೆ: ಕ್ರಿಸ್ ಹಿಪ್ಕಿನ್ಸ್ ನ್ಯೂಜಿಲ್ಯಾಂಡ್‌ ಮುಂದಿನ ಪ್ರಧಾನಿ



ವೆಲ್ಲಿಂಗ್ಟನ್, ಜ.21– ಜಸಿಂಡಾ ಅಡೆರ್ನ್ ಅವರ ದಿಢೀರ್ ರಾಜೀನಾಮೆಯಿಂದ ತೆರವಾಗಿರುವ ನ್ಯೂಜಿಲೆಂಡ್ ಪ್ರಧಾನಿ ಸ್ಥಾನಕ್ಕೆ ಪೊಲೀಸ್ ಮತ್ತು ಶಿಕ್ಷಣ ಸಚಿವ ಕ್ರಿಸ್ ಹಿಪ್ಕಿನ್ಸ್ ಅವರು ಆಯ್ಕೆಯಾಗಲಿದ್ದಾರೆ. ಸಹ ಸಂಸದರಿಂದ ಏಕೈಕ ನಾಮನಿರ್ದೇಶನವನ್ನು ಸ್ವೀಕರಿಸಿದ ನಂತರ ಆಡಳಿತಾರೂಢ ಲೇಬರ್ ಪಾರ್ಟಿ ಶನಿವಾರ ಈ ವಿಷಯ ತಿಳಿಸಿದೆ.

ದೇಶದ 41ನೇ ಪ್ರಧಾನಿಯಾಗಿ 44 ವರ್ಷದ ಕ್ರಿಸ್ ಹಿಪ್ಕಿನ್ಸ್ ಅಧಿಕಾರ ಸ್ವೀಕರಿಸುವ ಸಾಧ್ಯತೆಗಳಿವೆ ಎಂದು ವರದಿಯಾಗಿದೆ. 42 ವರ್ಷದ ಜಸಿಂಡ ಆಡೆರ್ನ್ ಅವರು ದಿಢೀರ್ ರಾಜೀನಾಮೆ ಘೋಷಣೆ ಮಾಡಿದ ಬಳಿಕ, ಲೇಬರ್ ಪಕ್ಷ ಹಿಪ್ಕಿನ್ಸ್ ಅವರನ್ನು ಆಯ್ಕೆ ಮಾಡಿದೆ. ಕ್ರಿಸ್ ಹಿಪ್ಕಿನ್ಸ್ ಅವರು ಜಸಿಂಡ ಸಂಪುಟದಲ್ಲಿ ಶಿಕ್ಷಣ ಸಚಿವರಾಗಿದ್ದರು. ಲಾಕ್‌ಡೌನ್ ಸಮಯದಲ್ಲಿ ಅವರ ಕಾರ್ಯನಿರ್ವಹಣೆ ಜನರ ಮೆಚ್ಚುಗೆಗೆ ಪಾತ್ರವಾಗಿತ್ತು. ಪಕ್ಷವು ಸದ್ಯ ಜನಾಭಿಪ್ರಾಯದಲ್ಲಿ ಹಿನ್ನಡೆ ಅನುಭವಿಸಿದೆ.

ವಿದ್ಯಾರ್ಥಿಗಳಿಂದ ಕುಕ್ಕರಹಳ್ಳಿ ಕೆರೆ ಆವರಣದ ಸ್ವಚ್ಛತೆ

ಕಾಲೇಜಿನ 70 ಎನ್‌ಎಸ್‌ಎಸ್ ವಿದ್ಯಾರ್ಥಿಗಳಿಂದ ಸ್ವಚ್ಛತಾ ಅಭಿಯಾನ



> ಕಾವೇರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಘಟಕದ 70 ವಿದ್ಯಾರ್ಥಿಗಳು ಶ್ರಮದಾನದಲ್ಲಿ ಪಾಲ್ಗೊಂಡಿದ್ದರು. ಕೆಲವರು ಕೆರೆ ದಡದಲ್ಲಿ ಶೇಖರಣೆಯಾಗಿದ್ದ ಪ್ಲಾಸ್ಟಿಕ್ ವಸ್ತುಗಳನ್ನು ಸಂಗ್ರಹಿಸಿದರೆ, ಮತ್ತಷ್ಟು ಮಂದಿ ಕೆರೆಯಲ್ಲಿ ತೇಲುತ್ತಿದ್ದ ಹಯಾಸಿಂತ್ ಕಳೆ ಗಿಡವನ್ನು ದಡಕ್ಕೆ ಎಳೆದು ಸ್ವಚ್ಛಗೊಳಿಸಿದರು. ವಿದ್ಯಾರ್ಥಿಗಳು ಸ್ವಯಂ ಪ್ರೇರಣೆಯಿಂದ ಶ್ರಮದಾನದಲ್ಲಿ ಪಾಲ್ಗೊಂಡಿದ್ದು ಸಂತೋಷ ತಂದಿದೆ
> – ಡಾ.ಕೆ.ಎಂ.ಜಯರಾಮಯ್ಯ, ಅಧ್ಯಕ್ಷ, ಕುಕ್ಕರಹಳ್ಳಿ ಕೆರೆ ಉಳಿಸಿ ಹೋರಾಟ ಸಮಿತಿ

ಮೈಸೂರು, ಜ.21(ಎಂಟಿವೈ)– ಮೈಸೂರಿನ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಕಾವೇರಿ ಪ್ರಥಮ ದರ್ಜೆ ಕಾಲೇಜಿನ 70ಕ್ಕೂ ಹೆಚ್ಚು ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಶ್ರಮದಾನದ ಮೂಲಕ ಕೆರೆ ಆವರಣದಲ್ಲಿ ಬಿದ್ದಿದ್ದ ಪ್ಲಾಸ್ಟಿಕ್ ಸೇರಿದಂತೆ ನಿರುಪಯುಕ್ತ ವಸ್ತುಗಳನ್ನು ಸಂಗ್ರಹಿಸಿದರು.

ಸತತ ಮಳೆಯಿಂದಾಗಿ ಈ ಬಾರಿ ಕುಕ್ಕರಹಳ್ಳಿ ಕೆರೆ ತುಂಬಿ ಕಳೆ ಕಟ್ಟಿದೆ. ಮಳೆ ನೀರಿನೊಂದಿಗೆ ಕೆರೆ ಸೇರಿದ್ದ ಪ್ಲಾಸ್ಟಿಕ್ ಕವರ್, ಬಾಟಲ್ ಸೇರಿದಂತೆ ನಾನಾ ತ್ಯಾಜ್ಯಗಳು ಕೆರೆ ದಡದಲ್ಲಿ ಸಂಗ್ರಹವಾಗಿದ್ದವು. ಈ ಹಿನ್ನೆಲೆಯಲ್ಲಿ ಶನಿವಾರ ಬೆಳಗ್ಗೆ ಕಾವೇರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಘಟಕದ 70 ವಿದ್ಯಾರ್ಥಿಗಳು ಕುಕ್ಕರಹಳ್ಳಿ ಉಳಿಸಿ ಹೋರಾಟ ಸಮಿತಿಯ ಅಧ್ಯಕ್ಷ ಪ್ರೊ.ಕೆ.ಎಂ.ಜಯರಾಮಯ್ಯ, ಪ್ರಾಂಶುಪಾಲರಾದ ಪದ್ಮಾವತಿ ನೇತೃತ್ವದಲ್ಲಿ ಕುಕ್ಕರಹಳ್ಳಿಕೆರೆ ಬಳಿ ಆಗಮಿಸಿ ಸ್ವಚ್ಛತಾ ಕಾರ್ಯ ನಡೆಸಿ, ಸುಮಾರು 4 ಮೂಟೆಗಳಷ್ಟು ತ್ಯಾಜ್ಯ ಸಂಗ್ರಹಿಸಿದರು.

ಕೆಲವು ವಿದ್ಯಾರ್ಥಿಗಳು ಕೆರೆಯಲ್ಲಿ ತೇಲುತ್ತಿದ್ದ ಹಯಾಸಿಂತ್ ಕಳೆ ಗಿಡ ಹೊರಗೆ ತೆಗೆದು ಕೆರೆ ಸಂರಕ್ಷಣೆಗೆ ಯತ್ನಿಸಿದರು. ಶ್ರಮದಾನದಲ್ಲಿ ಸಂಗ್ರಹವಾದ ತ್ಯಾಜ್ಯ ವಸ್ತುಗಳನ್ನು ಕೆರೆ ಉಸ್ತುವಾರಿ ಸಿಬ್ಬಂದಿ ಅಲ್ಲಿಂದ ಹೊರಗೆ ಸಾಗಿಸಿದರು.

ಕಾಯಕ ಸಮಾಜಗಳ ಮೀಸಲಾತಿ ಹೆಚ್ಚಳಕ್ಕೆ ಒತ್ತಾಯ

ನಾಳೆ ಕಾಯಕ ಸಮಾಜಗಳ ಒಕ್ಕೂಟದ ಪರಿಷತ್ತಿನ ಮಹಾ ಅಧಿವೇಶನ



ಮೈಸೂರು,ಜ.21(ಪಿಎಂ)– ಕಾಯಕ ಸಮಾಜಗಳಿಗೆ (ಪ್ರವರ್ಗ–2ಎ) ಶೇ.15 ರಷ್ಟಿರುವ ಮೀಸಲಾತಿ ಪ್ರಮಾಣವನ್ನು ಶೇ.27ಕ್ಕೆ ಹೆಚ್ಚಿಸಬೇಕೆಂಬುದೂ ಸೇರಿದಂತೆ ಈ ಸಮುದಾಯಗಳ ಶ್ರೇಯೋಭಿವೃದ್ಧಿ ಸಂಬಂಧ ಹಲವು ನಿರ್ಣಯಗಳನ್ನು ಜ.23ರಂದು ಹಮ್ಮಿಕೊಂಡಿರುವ ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ರಾಜ್ಯ ಪ್ರತಿನಿಧಿಗಳ ಪರಿಷತ್ತಿನ ಮಹಾ ಅಧಿವೇಶನದಲ್ಲಿ ಕೈಗೊಳ್ಳಲಾಗುವುದು ಎಂದು ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಸಿ.ಪುಟ್ಟಸಿದ್ದಶೆಟ್ಟಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಅಧಿವೇಶನ ನಡೆಯಲಿದೆ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಕಾಯಕ ಸಮಾಜಗಳ ಶ್ರೇಯೋಭಿವೃದ್ಧಿಗೆ ಪ್ರಾಧಿಕಾರ ರಚಿಸಬೇಕೆಂಬುದು ಸೇರಿದಂತೆ ಹಲವು ಮಹತ್ವದ ನಿರ್ಣಯಗಳನ್ನು ಅಧಿವೇಶನದಲ್ಲಿ ಕೈಗೊಳ್ಳಲಾಗುವುದು ಎಂದು ಹೇಳಿದರು.

ಹೈಕೋರ್ಟ್ ತಡೆಗೆ ಸ್ವಾಗತ: ಪಂಚಮಸಾಲಿ ಸಮುದಾಯಕ್ಕೆ ಪ್ರವರ್ಗ 2ಡಿ, ಒಕ್ಕಲಿಗ ಸಮುದಾಯಕ್ಕೆ 2ಸಿ ಎಂಬ ಹೊಸ ಪ್ರವರ್ಗ ಸೃಷ್ಟಿಸಿ ವಿಶೇಷ ಮೀಸಲಾತಿ ನೀಡಲು ರಾಜ್ಯ ಸರ್ಕಾರ ಕೈಗೊಂಡಿದ್ದ ನಿರ್ಣಯಕ್ಕೆ ಹೈಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿ, ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸೂಚನೆ ನೀಡಿದೆ. ನಮ್ಮ ಒಕ್ಕೂಟ ಹೈಕೋರ್ಟ್‌ನ ಈ ತೀರ್ಪನ್ನು ಸ್ವಾಗತಿಸುತ್ತದೆ. ಜೊತೆಗೆ ಅಂತಿಮ ತೀರ್ಪು ಸಹ ಯಥಾಸ್ಥಿತಿ ಕಾಯ್ದುಕೊಳ್ಳುವಂತೆಯೇ ಬರಲಿದೆ ಎಂಬ ವಿಶ್ವಾಸವಿದೆ ಎಂದು ತಿಳಿಸಿದರು.

ಇಡಬ್ಲ್ಯೂಎಸ್ ರದ್ದುಗೊಳಿಸಿ: ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಯಕ ಸಮುದಾಯಗಳನ್ನು ತುಳಿಯಲು ಷಡ್ಯಂತರ ನಡೆಸಿವೆ. ಶೇ.2ರಷ್ಟು ಜನಸಂಖ್ಯೆ ಹೊಂದಿರುವ ಸಮುದಾಯಗಳಿಗೆ ಇಡಬ್ಲ್ಯೂಎಸ್ ಮೂಲಕ ಶೇ.10ರಷ್ಟು ಮೀಸಲಾತಿ ನೀಡಿರುವುದು ಕಾಯಕ ಸಮಾಜಗಳನ್ನು ತುಳಿಯುವ ಕ್ರಮವಾಗಿದ್ದು, ಸಂವಿಧಾನದ ಆಶಯಕ್ಕೆ ವಿರುದ್ಧವೂ ಆಗಿದೆ. ಇಡಬ್ಲ್ಯೂಎಸ್ ಮೀಸಲಾತಿಯನ್ನು ಕೂಡಲೇ ರದ್ದುಗೊಳಿಸಬೇಕು ಎಂದು ಒತ್ತಾಯಿಸಿದರು.

ಮೀಸಲಾತಿಗಾಗಿ ಮಠಾಧೀಶರು ತಮ್ಮ ಸಮುದಾಯವನ್ನು ಪ್ರಚೋದಿಸಿ ಬೀದಿಗಿಳಿದು ಹೋರಾಟ ನಡೆಸುತ್ತಿರುವುದು ಜಾತ್ಯಾತೀತ ತತ್ವಕ್ಕೆ ತಿಲಾಂಜಲಿ ಇಟ್ಟಂತೆ. ಮಠಾಧೀಶರ ಮೀಸಲಾತಿ ಹೋರಾಟಕ್ಕೆ ಸರ್ಕಾರ ಮಣಿಯುತ್ತಿರುವುದು ಖಂಡನೀಯ. ಅಲ್ಲದೆ, ಹಲವು ಮಂತ್ರಿಗಳು ತಮ್ಮ ಸಮುದಾಯ ಮೀಸಲಾತಿ ಪರವಾಗಿ ನಿಂತಿರುವುದು ಸರಿಯಲ್ಲ. ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿ ಕಾಯಕ ಸಮಾಜಗಳು ಶೇ.70 ರಷ್ಟು ಜನಸಂಖ್ಯೆ ಹೊಂದಿದ್ದು, ನಮ್ಮ ಬೇಡಿಕೆಗಳಿಗೆ ಸರ್ಕಾರ ಸ್ಪಂದಿಸದೇ ಇದ್ದರೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಅವರನ್ನು ಮನೆಗೆ ಕಳುಹಿಸುವಷ್ಟು ಓಟು ನಮ್ಮ ಸಮುದಾಯಗಳಲ್ಲಿವೆ ಎಂದು ಎಚ್ಚರಿಕೆ ನೀಡಿದರು. ವಕೀಲೆ ಪೂರ್ಣಿಮಾ, ಒಕ್ಕೂಟದ ರಾಜ್ಯ ಉಪಾಧ್ಯಕ್ಷ ನಾಗೇಶ್, ಮುಖಂಡರಾದ ಯೋಗೀಶ್‌ಉಪ್ಪಾರ್, ರಮೇಶ್ ಗೋಷ್ಠಿಯಲ್ಲಿದ್ದರು.


ಶ್ರೇಷ್ಠ ಸೃಷ್ಟಿ

ಶಾಲಗ್ರಾಮ









ನಂ ಶ್ರೀಕಂಠ ಕುಮಾರ್

ಮೊ: 9481067333

> "ನದಿಯಲ್ಲಿ ಲಭ್ಯವಾಗುವ ಶಾಲಗ್ರಾಮಗಳು ಅತ್ಯಂತ ನುಣುಪಾದುದು, ಚಿಕ್ಕಬಿಲ ಅದರೊಳಗೆ ಮನೋಜ್ಞ ರೇಖೋಪರೇಖೆಗಳ ಸುಂದರ ಸುದರ್ಶನಗಳು, ತೀರ್ಥ ನೀಡುವ ಶಾಲಗ್ರಾಮ, ಬಂಗಾರ ನೀಡುವ ಶಾಲಗ್ರಾಮ, ರತ್ನಗರ್ಭ ಶಾಲಗ್ರಾಮ ಹೀಗೆ ವಿಭಿನ್ನ, ಚಿತ್ರವಿಚಿತ್ರ ಬಗೆಯ ಸೊಬಗುಗಳು. ಈ ಶಾಲಗ್ರಾಮಗಳಲ್ಲಿ ನಾಮ, ರೂಪ, ಗಾತ್ರ, ರೇಖೆಗಳಿಂದ ಭಗವಂತನ ನಾನಾ ವಿಧದ ಪ್ರತೀಕಗಳನ್ನು ಗುರುತಿಸಲಾಗಿದೆ. ಶಾಲಗ್ರಾಮವನ್ನು ದಿನವೂ ಮುಟ್ಟಿ ಯಾರು ಪೂಜಿಸುವರೋ ಅಂತಹವರ ಕರಸ್ಪರ್ಶವನ್ನು ದೇವತೆಗಳ ಜೊತೆ ಇಂದ್ರನೂ ಬಯಸುತ್ತಾನೆ. ಅಲ್ಲದೇ ಗರುಡ ಪುರಾಣ, ಪದ್ಮ ಪುರಾಣ, ಅಗ್ನಿ ಪುರಾಣ, ನರಸಿಂಹ ಪುರಾಣ ಹಾಗೂ ವರಾಹ ಪುರಾಣದಲ್ಲೂ ಶಾಲಗ್ರಾಮದ ಸೃಷ್ಟಿಯ ಬಗ್ಗೆ ವಿವರಿಸಲಾಗಿದೆ.

ಶಾಲಗ್ರಾಮವು ಹಿಂದೂ ಧರ್ಮೀಯರಿಗೆ ಪರಮ ಪವಿತ್ರವಾದ ಪ್ರಕೃತಿದತ್ತ, ವಿಶಿಷ್ಟವಾದ ಒಂದು ಶಿಲೆ. ನಮ್ಮ ಮನದ ಭಾವನೆಗಳು ಧನಾತ್ಮಕವಾಗಿರುವಾಗ ಶಾಲಗ್ರಾಮದ ಶಿಲೆಯಿಂದ ಧನಾತ್ಮಕ ಪ್ರತಿಕ್ರಿಯೆ ಬರುತ್ತದೆ. ಇದು ಭೂಮಂಡಲದಲ್ಲಿರುವ ಅದ್ಭುತ ಭೂಗರ್ಭ ಸಂಪತ್ತು. ಪ್ರತಿಯೊಂದು ದೇವಾಲಯದಲ್ಲೂ ಶಾಲಗ್ರಾಮವು ಇರುವುದು ಸಾಮಾನ್ಯ. ಮೂಲ ದೇವರಿಗೆ ನಡೆಯುವಂತಹ ಎಲ್ಲಾ ಸೇವೆಗಳು ಶಾಲಗ್ರಾಮಗಳಿಗೂ ಲಭಿಸುತ್ತದೆ. ಶಾಲಗ್ರಾಮ ಶುದ್ಧತೆಯ ಪ್ರತೀಕ, ದೇವರ ವಿಸ್ಮಯ ಸೃಷ್ಟಿ, ಪೂಜೆಯ ಪ್ರಧಾನಾಂಗ ಶಾಲಗ್ರಾಮ. ತೀರ್ಥ ಆಗಬೇಕಾದರೆ ಪೂಜೆಗೆ ಶಾಲಗ್ರಾಮವು ಇರಲೇಬೇಕು. ಈ ಶಿಲೆಯೇ ಒಂದು ಆಕರ್ಷಣೆಯ ಸೆಲೆ. ಇದು ನೇಪಾಳ ರಾಷ್ಟ್ರದಿಂದ ಪವಿತ್ರ ಪರ್ವತ ಶ್ರೇಣಿಯಲ್ಲಿ ಶಾಲಗ್ರಾಮ ಎಂಬ ಗ್ರಾಮದ ಮುಖಾಂತರ ಹರಿದು ಬರುವ ಕಾಲಿ ಗಂಡಕೀ ನದಿಯಲ್ಲಿ ಮಾತ್ರ ಲಭ್ಯವಾಗುವ ಅಮೋನಿಯಾಯುಕ್ತ ಪ್ರಾಣಿ ಅವಶೇಷಗಳಿಂದ ಕೂಡಿದ ಶಿಲೆ. ಅಲ್ಲದೇ ಹಿಮವತ್ಪರ್ವತ ಮತ್ತು ಭೂಗರ್ಭದಲ್ಲಿಯೂ ಅಪರೂಪವಾಗಿ ಶಾಲಗ್ರಾಮವು ಲಭ್ಯವಿದೆ.

ಸ್ಕಂದ ಪುರಾಣದ ಅಸುರಖಂಡದ ಕಥೆಯ ಪ್ರಕಾರ ಗಂಡಕೀ ನದಿಯ ಹುಟ್ಟು ಮತ್ತು ಶಾಲಗ್ರಾಮಗಳ ಕಥೆ ಈ ರೀತಿಯಾಗಿದೆ. ಗಂಡಕೀ ಎಂಬ ಸ್ಥಿರ ಮನಸಿನ ಸಾತ್ವಿಕ ಸ್ತ್ರೀಯು ತ್ರಿಮೂರ್ತಿ ದೇವರುಗಳೇ ಅವಳ ಪುತ್ರರಾಗಬೇಕು ಎಂಬ ಅಪೇಕ್ಷೆಯಿಂದ ಹಿಮಾಲಯ ಪರ್ವತದಲ್ಲಿ ಕಠಿಣವಾದ ತಪಸ್ಸಿಗೆ ಕೂರುತ್ತಾಳೆ. ಗಂಡಕೀಯ ತಪಸ್ಸಿಗೆ ಮೆಚ್ಚಿದ ತ್ರಿಮೂರ್ತಿಗಳು ಅವಳೆದುರು ಪ್ರತ್ಯಕ್ಷರಾಗಿ ಬೇಕಾದ ವರವನ್ನು ಬೇಡುವಂತೆ ಹೇಳುತ್ತಾರೆ. ಆಗ ಗಂಡಕೀಯು ನೀವು ಮೂವರೂ ನನ್ನ ಮಕ್ಕಳಾಗಿ ಹುಟ್ಟಿ ಭೂಮಿಯ ಸಮಸ್ತ ಜನರನ್ನು ಸುಖೀಗಳನ್ನಾಗಿಸುವಂತೆ ಕೋರುತ್ತಾಳೆ.

ತ್ರಿಮೂರ್ತಿಗಳು ಇದಕ್ಕೊಪ್ಪದೇ ಇದ್ದಾಗ ಗಂಡಕೀಯು ತನ್ನ ಹಠವನ್ನು ಬಿಡುವುದೇ ಇಲ್ಲ. ಹತಾಶಳಾದ ಗಂಡಕೀಯು ಕುಪಿತಗೊಂಡು ತ್ರಿಮೂರ್ತಿಗಳ ಸಹಿತ ಎಲ್ಲಾ ದೇವರುಗಳು ಹುಳಗಳಾಗಿ ಎಂದು ಶಪಿಸುತ್ತಾಳೆ. ಆಗ ತ್ರಿಮೂರ್ತಿಗಳು ನೀನು ಅವಿವೇಕಿ ಮನುಷ್ಯಳು, ನಿನ್ನ ತಪಸ್ಸಿಗೆ ಮೆಚ್ಚಿ ನಿನ್ನನ್ನು ಅನುಗ್ರಹಿಸಲು ಬಂದಾಗ ನೀನು ನಮ್ಮನ್ನೇ ಶಪಿಸಿದ್ದೀಯ. ಆದುದರಿಂದ ನೀನು ಕೃಷ್ಣವರ್ಣದ ಜಡವಾದ ನದಿಯಾಗು ಎಂದು ಪ್ರತಿ ಶಾಪ ನೀಡುತ್ತಾರೆ.

ಇದರಿಂದ ಚಿಂತಾಕ್ರಾಂತರಾದ ಇತರೆ ದೇವತೆಗಳು ಶ್ರೀ ಮಹಾವಿಷ್ಣುವಿನ ಮೊರೆ ಹೋಗುತ್ತಾರೆ. ಆಗ ಮಹಾವಿಷ್ಣುವು ನನ್ನ ಇನ್ನೊಂದು ಶಾಪದಿಂದ ಇಬ್ಬರು ಭಕ್ತರು ಜಲರಾಕ್ಷಸರಾಗಿ ಜನ್ಮವೆತ್ತಿದ್ದಾರೆ. ನಾನು ಅವರ ಆತ್ಮಗಳಿಗೆ ಮೋಕ್ಷವನ್ನಿತ್ತು ಅವರ ಕಳೇಬರಗಳನ್ನು ಪ್ರವೇಶಿಸುತ್ತೇನೆ. ಅವರ ಶವಗಳು ಕೊಳೆತಾಗ ದೇವತೆಗಳಾದ ನೀವು ಎಲುಬಿನ ಮಜ್ಜೆ ಮತ್ತು ಕೊಬ್ಬಿನ ಹುಳಗಳಾಗಿ ಕಳೇಬರದ ಗಟ್ಟಿಭಾಗಗಳ ಒಳಗೆ ಸೇರಿಕೊಳ್ಳಬಹುದು. ನಿಮ್ಮನ್ನು ವಜ್ರಕೀಟಗಳೆಂದು ಕರೆಯುತ್ತಾರೆ. ನಾನು ಪ್ರವೇಶಿಸುವಂಥ ರಾಕ್ಷಸರ ದೇಹಗಳು ಗಂಡಕೀ ನದಿಯಲ್ಲಿ ಮುಳುಗಿ ನಂತರ ನದಿಯ ಚಕ್ರತೀರ್ಥ ಎಂಬಲ್ಲಿ ಶಾಲಗ್ರಾಮವಾಗಿ ಚಕ್ರರೂಪದಲ್ಲಿ ಕಾಣಿಸಿಕೊಳ್ಳುತ್ತೇನೆ. ಹೀಗೆ ಭಗವಂತನೇ ಆ ಶಿಲೆಗಳಲ್ಲಿ ಇದ್ದು ಎಲ್ಲರನ್ನೂ ಅನುಗ್ರಹಿಸುತ್ತಿದ್ದಾನೆ ಎಂಬುದು ಆಸ್ತಿಕರ ನಂಬಿಕೆ.

ನದಿಯಲ್ಲಿ ಲಭ್ಯವಾಗುವ ಶಾಲಗ್ರಾಮಗಳು ಅತ್ಯಂತ ನುಣುಪಾದುದು, ಚಿಕ್ಕಬಿಲ ಅದರೊಳಗೆ ಮನೋಜ್ಞ ರೇಖೋಪರೇಖೆಗಳ ಸುಂದರ ಸುದರ್ಶನಗಳು, ತೀರ್ಥ ನೀಡುವ ಶಾಲಗ್ರಾಮ, ಬಂಗಾರ ನೀಡುವ ಶಾಲಗ್ರಾಮ, ರತ್ನಗರ್ಭ ಶಾಲಗ್ರಾಮ ಹೀಗೆ ವಿಭಿನ್ನ, ಚಿತ್ರವಿಚಿತ್ರ ಬಗೆಯ ಸೊಬಗುಗಳು. ಈ ಶಾಲಗ್ರಾಮಗಳಲ್ಲಿ ನಾಮ, ರೂಪ, ಗಾತ್ರ, ರೇಖೆಗಳಿಂದ ಭಗವಂತನ ನಾನಾ ವಿಧದ ಪ್ರತೀಕಗಳನ್ನು ಗುರುತಿಸಲಾಗಿದೆ. ಶಾಲಗ್ರಾಮವನ್ನು ದಿನವೂ ಮುಟ್ಟಿ ಯಾರು ಪೂಜಿಸುವರೋ ಅಂತಹವರ ಕರಸ್ಪರ್ಶವನ್ನು ದೇವತೆಗಳ ಜೊತೆ ಇಂದ್ರನೂ ಬಯಸುತ್ತಾನೆ. ಅಲ್ಲದೇ ಗರುಡ ಪುರಾಣ, ಪದ್ಮ ಪುರಾಣ, ಅಗ್ನಿ ಪುರಾಣ, ನರಸಿಂಹ ಪುರಾಣ ಹಾಗೂ ವರಾಹ ಪುರಾಣದಲ್ಲೂ ಶಾಲಗ್ರಾಮದ ಸೃಷ್ಟಿಯ ಬಗ್ಗೆ ವಿವರಿಸಲಾಗಿದೆ. ಅನಾದಿಕಾಲದಿಂದಲೂ ಆಸ್ತಿಕರು ಪ್ರಕೃತಿದತ್ತವಾದ ಈ ಶಿಲೆಯನ್ನು ಪೂಜಿಸುತ್ತಾ ಅದರಲ್ಲಿ ದೇವರ ಸಾನ್ನಿಧ್ಯವನ್ನು ಅರಿತುಕೊಂಡು ಪ್ರಕೃತಿಯನ್ನು ಆರಾಧಿಸುವ ಕ್ರಮವು ನಡೆದು ಬಂದಿದೆ.

ಶಾಲಗ್ರಾಮಗಳು ಸ್ವಾಭಾವಿಕವಾಗಿ ಶ್ರೀ ಮಹಾವಿಷ್ಣುವಿನೊಂದಿಗೆ ಸಂಬಂಧ ಹೊಂದಿದ್ದು ಇವುಗಳನ್ನು ವಿಷ್ಣುವಿನ ಪ್ರತೀಕ ಎಂದು ತಿಳಿಯಲಾಗಿದೆ. ಅದರಲ್ಲೂ ಕೆಲವು ಶಾಲಗ್ರಾಮಗಳು ಶಿವನ ಪ್ರತೀಕವಾದಂತೆ, ಕೆಲವು ಶಾಲಗ್ರಾಮಗಳು ದೇವಿಯ ಅಥವಾ ಲಕ್ಷ್ಮಿಯ ಪ್ರತೀಕದಂತೆ, ಸೂರ್ಯನ ಪ್ರತೀಕದಂತೆ, ಇನ್ನೂ ಕೆಲವು ಶಾಲಗ್ರಾಮಗಳು ಗಣಪತಿಯ ಪ್ರತೀಕದಂತೆ ಕಾಣಬರುತ್ತದೆ. ಈ ಶಾಲಗ್ರಾಮವು ಐದು ರೂಪದ ದೇವರುಗಳನ್ನು ಹೊಂದಿ ಅದರ ಪ್ರತೀಕವಾಗಿರುವುದರಿಂದಲೇ ಪಂಚಾಯತನ ಪೂಜೆ ನಡೆಸುವಂತಾಯಿತು ಎನ್ನಲಾಗಿದೆ. ನಿತ್ಯ ಒಂದು ಶಾಲಗ್ರಾಮವನ್ನಿಟ್ಟು ಪೂಜಿಸಿದರೆ ತುಂಬಾ ಒಳ್ಳೆಯ ಮತ್ತು ಉತ್ತಮ ಪೂಜಾ ಕಾರ್ಯ. ಆರು ಶಾಲಗ್ರಾಮಗಳನ್ನಿಟ್ಟು ಪೂಜಿಸಿದರೆ ಅದು ಕ್ಷೇತ್ರ ಎಂದೆನಿಸುವುದು. ಹನ್ನೆರಡು ಶಾಲಗ್ರಾಮಗಳನ್ನು ಪೂಜಿಸಿದರೆ ಅದು ಪಾಪ ನಾಶ ಮಾಡುವ ಕ್ಷೇತ್ರವಾಗುವುದು. ನೂರೆಂಟು ಶಾಲಗ್ರಾಮಗಳನ್ನು ಪೂಜಿಸಿದರೆ ಅದು ತೀರ್ಥ ಕ್ಷೇತ್ರವಾಗುವುದು. ಒಂದು ಸಾವಿರ ಮತ್ತು ಅದಕ್ಕೂ ಹೆಚ್ಚು ಶಾಲಗ್ರಾಮಗಳನ್ನು ಪೂಜಿಸಿದರೆ ಅದು ಹರಿಧಾಮ ಎನಿಸುವುದು. ಶಾಲಗ್ರಾಮಗಳಲ್ಲಿ ವಿಷ್ಣು ಶಾಲಗ್ರಾಮಗಳು, ಬ್ರಹ್ಮ ಶಾಲಗ್ರಾಮಗಳು ಹಾಗೂ ಮಹೇಶ್ವರ ಶಾಲಗ್ರಾಮಗಳು ಸೃಷ್ಟಿಯಲ್ಲಿರುತ್ತದೆ. ಸಾಕ್ಷಾತ್ ವಿಷ್ಣುವಿನ ಪ್ರತೀಕವಾದ ಈ ಶಿಲೆಯನ್ನು ರಾಮ, ಕೃಷ್ಣ, ನೃಸಿಂಹ, ವರಾಹ, ಕೇಶವ, ವಾಸುದೇವ, ಹಯಗ್ರೀವ, ಮತ್ಸ್ಯ, ಕೂರ್ಮ ಮತ್ತು ವಾಮನ ಎಂದು ವರ್ಗೀಕರಿಸಲಾಗಿದೆ. ಶಾಲಗ್ರಾಮ ಎಂಬ ಅದ್ಭುತ ಸೃಷ್ಟಿಗೆ ಭೂಗರ್ಭ ಶಾಸ್ತ್ರ, ವನಸ್ಪತಿ ಶಾಸ್ತ್ರ, ಆಕಾಶ ವಿಜ್ಞಾನ, ಧ್ವನಿ ತರಂಗ ಶಾಸ್ತ್ರ, ಜಲದರ್ಶನ ಶಾಸ್ತ್ರ ಮತ್ತು ಸೃಷ್ಟಿ ರಚನಾ ಶಾಸ್ತ್ರ ಹೀಗೆ ಏಳು ಶಾಸ್ತ್ರಗಳ ಸಂಬಂಧವಿದೆ ಎನ್ನಲಾಗಿದೆ. ಅಲ್ಲದೇ ಶಾಲಗ್ರಾಮ ಸಂಬಂಧ ಶೈವ ತಾಂತ್ರಿಕ, ವೈಷ್ಣವ ತಾಂತ್ರಿಕ ಮತ್ತು ಶಾಕ್ತ ತಾಂತ್ರಿಕ ಎಂಬ ಮೂರು ಬಗೆಯ ತಂತ್ರಗಳಿವೆ. ಶಾಲಗ್ರಾಮ ಚಕ್ರಾಂಕಿತ ನಿತ್ಯವು ಎಲ್ಲಿ ಸನ್ನಿಹಿತವಾಗಿದೆಯೋ ಅಲ್ಲಿ ಮೂರು ಯೋಜನ ಸುತ್ತಲೂ ಭಗವಂತನ ವಿಶೇಷ ಸನ್ನಿಧಾನವಿರುವುದು. ಶಾಲಗ್ರಾಮವನ್ನು ಗೃಹಗಳಲ್ಲಿಯೂ ಇಟ್ಟು ಪೂಜಿಸುವುದರಿಂದ ಸರ್ವ ರೀತಿಯ ಮನೋರಥ ಪಡೆಯಲು ಸಾಧ್ಯ. ಶಾಲಗ್ರಾಮವು ಸನ್ಯಾಸಿಗಳಿಗೂ ಸಹ ಪರಮಪೂಜ್ಯವಾಗಿದೆ.

ತ್ರೇತಾಯುಗದಲ್ಲಿ ಶ್ರೀರಾಮಚಂದ್ರನು ತನ್ನ ತಂದೆ ದಶರಥ ಮಹಾರಾಜನು ತೀರಿಕೊಂಡಾಗ ಪಲ್ಗುಣಿ ಎಂಬ ನದಿಯ ತಟದಲ್ಲಿ 108 ಶಾಲಗ್ರಾಮಗಳನ್ನಿರಿಸಿ ಅದರ ಮುಂಭಾಗದಲ್ಲಿ ಪಿತೃಪಿಂಡ ಪ್ರದಾನ ಮಾಡಿದರೆಂಬುದು ಪುರಾಣದಲ್ಲಿ ಲಭ್ಯ ಸನ್ನಿವೇಶವಾಗಿದೆ. ಉಡುಪಿಯ ಕಡೆಗೋಲು ಶ್ರೀಕೃಷ್ಣ, ಪಂಡರಾಪುರದ ಶ್ರೀ ವಿಠಲ ಹಾಗೂ ಬದರಿಕಾಶ್ರಮದ ಶ್ರೀ ಬದರಿನಾಥನ ವಿಗ್ರಹವು ಶಾಲಗ್ರಾಮ ಶಿಲೆಯಿಂದ ಕೆತ್ತಲ್ಪಟ್ಟಿದೆ ಎಂದು ಹೇಳಲಾಗಿದೆ. ಉಡುಪಿಯ ಚಕ್ರಾಂಕಿತವಾದ ಶಾಲಗ್ರಾಮವು ಶ್ರೀ ಕೃಷ್ಣನನ್ನು ರುಕ್ಮಿಣಿ ದೇವಿಯು ಸ್ವಯಂ ಪೂಜಿಸುತ್ತಿದ್ದು ಯುಗಗಳ ನಂತರ ಅದು ಶ್ರೀಮನ್ಮಧ್ವಾಚಾರ್ಯರಿಗೆ ಉಡುಪಿಯ ಬಳಿ ಒಡಭಂಡೇಶ್ವರದಲ್ಲಿ ದೊಡ್ಡ ಗೋಪೀಚಂದನದಲ್ಲಿ ದೊರೆತು ಮೂರ್ತಿಯನ್ನು ಪ್ರತಿಷ್ಠಾಪಿಸಿದರೆಂದು ಐತಿಹ್ಯವಿದೆ. ಬದರಿಕಾಶ್ರಮದ ಶ್ರೀಮನ್ನಾರಣಮೂರ್ತಿಯನ್ನು ಹಿಂದೆ ಬೌದ್ಧರು ಕಿತ್ತು ದೇವಾಲಯದ ಮುಂದಿರುವ ಅಲಕಾ ನದಿಯ ಗರುಡಕುಂಡದಲ್ಲಿ ಕೆಡವಿದಾಗ ಬಹಳ ವರ್ಷಗಳ ಕಾಲ ಪೂಜೆ ಇಲ್ಲದೆ ಇದ್ದು ಜಗದ್ಗುರು ಶ್ರೀ ಆದಿ ಶಂಕರಾಚಾರ್ಯರು ಶ್ರೀಮನ್ನಾರಾಯಣಮೂರ್ತಿಯನ್ನು ಪತ್ತೆಹಚ್ಚಿ ಮತ್ತೆ ಪ್ರತಿಷ್ಠಾಪಿಸಿದರೆಂದು ಹೇಳಲಾಗುತ್ತದೆ. ಮಂತ್ರಾಲಯದ ಯತಿಶ್ರೇಷ್ಠ ಶ್ರೀ ರಾಘವೇಂದ್ರಸ್ವಾಮಿಗಳವರು ತಮ್ಮ ಪೂರ್ವ ಜನ್ಮದಲ್ಲಿ ಶ್ರೀ ವ್ಯಾಸರಾಯರಾಗಿದ್ದಾಗ ದೇವರ ಪೂಜೆ ಮಾಡುವ ಸಂದರ್ಭದಲ್ಲಿ ಶಾಲಗ್ರಾಮವನ್ನೇ ತಾಳವಾಗಿ ಬಳಸಿದ್ದರು ಎನ್ನಲಾಗಿದೆ. ಮುಂದಿನ ಅವತಾರದ ಅಂತಿಮದಲ್ಲಿ ಶ್ರೀ ಗುರುರಾಯರು ವೃಂದಾವನಸ್ಥರಾದಾಗ ಏಳುನೂರು ಶ್ರೀ ಲಕ್ಷ್ಮಿನಾರಾಯಣ ಶಾಲಗ್ರಾಮಗಳನ್ನು ಇಟ್ಟು ವೃಂದಾವನ ನಿರ್ಮಿಸಲಾಯಿತು ಎಂಬುದೇ ಮಂತ್ರಾಲಯ ಶ್ರೀ ಕ್ಷೇತ್ರದ ವೃಂದಾವನದ ವಿಶೇಷತೆ. ಶಾಲಗ್ರಾಮದ ಮೂಲ ಲಕ್ಷಣ ಪದ್ಧತಿ, ಶಾಲಗ್ರಾಮ ಶಿಲಾ ಪರೀಕ್ಷಣಾ ಪದ್ಧತಿ ಮತ್ತು ಸಂಪೂರ್ಣ ವೈಷ್ಣವೈದಿ ಪಾಠದ ಅರ್ಥವನ್ನು ತಿಳಿಸಲು ಯದುವಂಶದ ಮಹಾರಾಜ ಮೂರನೇಯ ಕೃಷ್ಣರಾಜ ಒಡೆಯರ್‌ರವರು ಸಂಸ್ಕೃತದಲ್ಲಿ ಶ್ರೀತತ್ವನಿಧಿ ಗ್ರಂಥವನ್ನು ಸವಿಸ್ತಾರವಾದ ಒಂಭತ್ತು ಅಧ್ಯಾಯಗಳಲ್ಲಿ ರಚಿಸಿದ್ದಾರೆ ಎನ್ನಲಾಗಿದೆ. ಶಾಲಗ್ರಾಮದ ನಿತ್ಯ ಪೂಜೆಯಲ್ಲಿ ಕೇವಲ ನೀರು ಅಥವಾ ಹಾಲನ್ನು ಅಭಿಷೇಕ ಮಾಡಿ ಮುಟ್ಟಿ ತುಳಸೀದಳಗಳನ್ನಿಟ್ಟು ಅದರ ನೀರನ್ನು ಸೇವನೆ ಮಾಡುವುದರಿಂದ ಆರೋಗ್ಯ, ಸಕಲ ಅಭೀಷ್ಟಗಳು ನೆರವೇರಿ, ಮೋಕ್ಷದಾಯಕವಾಗುವುದು. ಶಾಲಗ್ರಾಮದ ಬಗ್ಗೆ ಹೆಚ್ಚು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು, ತಪ್ಪು ತಿಳುವಳಿಕೆಯನ್ನು ಮನಸ್ಸಿನಿಂದ ಹೋಗಲಾಡಿಸಿ ಮೂಢನಂಬಿಕೆಯಿಂದ ಹೊರಬರಬೇಕು. ನಿರಾಸಕ್ತಿಯಿಂದ ನಾಸ್ತಿಕರಾಗಿ ತಲೆಮಾರಿನಿಂದ ಬಂದ ಈ ಅಮೂಲ್ಯ ಶ್ರೇಷ್ಠ ಸಂಪತ್ತನ್ನು ದೇವಸ್ಥಾನಗಳಿಗೆ ಒಪ್ಪಿಸಿ ಅಥವಾ ನದಿ ನೀರಿನಲ್ಲಿ ಬಿಟ್ಟು ಕಾಲನಂತರ ಪರಿತಪಿಸಿದವರೂ ಉಂಟು. ವಿದ್ವಾಂಸ ಪಡುಪೇಟೆ ಸತೀಶ್ ಕುಮಾರ್‌ರವರು ಗಂಡಕೀ ನದಿಯ ಸರಹದ್ದಿನಲ್ಲಿ ಯಾತ್ರೆ ಮಾಡಿ ಶಾಲಗ್ರಾಮದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಶಾಲಗ್ರಾಮ ಸಂಪುಟ ಎಂಬ ಅದ್ಭುತ ಗ್ರಂಥವನ್ನು ರಚಿಸಿ ಆಸ್ತಿಕರಿಗೆ ಮಾರ್ಗದರ್ಶನ ಮಾಡಿರುವುದು ಸಂತಸದ ಸಂಗತಿ.





ವಾರಭವಿಷ್ಯ

22.01.2023 ರಿಂದ 28.01.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮಕರ, ಚಂದ್ರ-ಮಕರ, ಕುಂಭ, ಮೀನ, ಮೇಷ, ಕುಜ-ವೃಷಭ, ಬುಧ-ಧನುಸ್ಸು, ಗುರು-ಮೀನ, ಶುಕ್ರ-ಮಕರ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ.



ವಿ.ಕೇಶವಮೂರ್ತಿ

ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,

ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು

ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದಾರಂಭಕ್ಕೆ ನಿಮ್ಮ ಯೋಜನೆಗಳು ಅಂದುಕೊಂಡಂತೆ ಸಾಗದೆ ಮನಸ್ಸಿಗೆ ಬೇಸರ. ವ್ಯಯಸ್ಥಿತ ಗುರುವಿನಿಂದಾಗಿ ವಿಪರೀತ ಖರ್ಚುಗಳು. ಆದರೆ ಸದ್ವಿನಿಯೋಗವಾಗುತ್ತದೆ ಎಂಬುದೇ ಸಮಾಧಾನ. ನಿಮ್ಮದಲ್ಲದ ತಪ್ಪಿಗೆ ನಿಂದನೆಗೆ ಒಳಗಾಗುವಿರಿ. ವಾರದ ಅಂತ್ಯಕ್ಕೆ ಚಂದ್ರ ಶುಭನಿದ್ದು ಉತ್ತಮ ಆಹಾರ-ವಿಹಾರಗಳು, ಮಧುರವಾದ ಮಾತಿನಿಂದ ನೆರೆಹೊರೆಯವರ ಪ್ರೀತಿ ಗಳಿಕೆ. ಆರೋಗ್ಯದಲ್ಲಿ ಸುಧಾರಣೆ.

ಶ್ರೀ ಕಾರ್ತಿಕೇಯ ದರ್ಶನ. ಶುಭ ಸಂಖ್ಯೆ-5.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಸುಖದಿಂದ ಇರುವವರು ಅದನ್ನು ಕಷ್ಟಪಟ್ಟೆ ಸಂಪಾದಿಸುತ್ತಾರೆ. 'ಕೈ ಕೆಸರಾದರೆ ಬಾಯಿ ಮೊಸರು' ಎಂಬಂತೆ. ವಾರದಾರಂಭಕ್ಕೆ ಧನ-ಧಾನ್ಯಾದಿ ಲಾಭ, ಕೃಷಿ ಹಾಗೂ ಹೈನುಗಾರಿಕೆಯಿಂದ ಹೆಚ್ಚಿನ ಆದಾಯವಾಗುವುದು. ಸ್ವಧರ್ಮಾಚರಣೆ ಹಾಗೂ ಗುರುಭಕ್ತಿ ಉಂಟಾಗುವುದು. ಮಿತ್ರರ ಸಮಾಗಮದಿಂದ ಮನಸ್ಸಿಗೆ ಹರುಷ. ರಾಜಕಾರಣಿಗಳಿಗೆ ಕಾನೂನು ತೊಡಕುಗಳು ಉಂಟಾಗುವುದು. ಅದರಿಂದ ವ್ಯಾಕುಲತೆ.

ಶ್ರೀ ಚಾಮುಂಡೀ ದರ್ಶನ. ಶುಭ ಸಂಖ್ಯೆ-1.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಸಪ್ತಾಹದ ಆರಂಭಕ್ಕೆ ನಿಮ್ಮ ಸ್ವ-ದಕ್ಷತೆಯಿಂದ ಉತ್ಕರ್ಷಕ್ಕೆ ಏರುವ ಪ್ರಯತ್ನವನ್ನು ಮಾಡುವಿರಿ. ಇದಕ್ಕೆ ಗ್ರಹ ಗೋಚರ ಸಹಕಾರಿಯಾಗಿದೆ. ಕುಶಲಕರ್ಮಿಗಳಿಗೆ, ವಿದ್ವಾಂಸರಿಗೆ ಪ್ರಶಸ್ತಿಗಳು ಅರಸಿ ಬರುವುದು. ವೃಥಾ ಸಂಚಾರಗಳನ್ನು ಅವಾಯ್ಡ್ ಮಾಡಿ. ವಾರಾಂತ್ಯಕ್ಕೆ ದುಬಾರಿ ವಸ್ತುಗಳು ಮನೆಗೆ ಬರುವುದು. ನೆರೆಹೊರೆಯವರಲ್ಲಿ ದ್ವೇಷಸಾಧನೆ ಒಳ್ಳೆಯದಲ್ಲ. ಉಷ್ಣ ಪ್ರಕೋಪ ಕಾಡಿಸುವುದು.

ಶ್ರೀ ವಿಷ್ಣು ಪ್ರಾರ್ಥನೆ. ಶುಭ ಸಂಖ್ಯೆ-2.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ನಿಮ್ಮ ಸ್ವಬುದ್ಧಿಯಿಂದ ಮತ್ತು ಪ್ರಯತ್ನಗಳಿಂದ ಕಾರ್ಯಸಿದ್ಧಿಯಾಗುವುದು. ಸ್ವಸ್ಥಳ ಪ್ರಾಪ್ತಿ ಹಾಗೂ ಸ್ತ್ರೀ ಸುಖ. ಸ್ವಂತ ಕೆಲಸ ಕಾರ್ಯಗಳಲ್ಲಿ ಅನುಕೂಲವಾಗುವುದರಿಂದ ಸಂತೋಷ. ಬಂಧುಗಳ ಮೂಲಕ ಸೌಖ್ಯ. ಶನಿದೇವ ಎಂಟನೇ ಮನೆಗೆ ಸ್ಥಾನ ಪಲ್ಲಟವಾಗಿದ್ದಾರೆ. ಇದು ಅಷ್ಟಮ ಶನಿಕಾಟದ ಪ್ರಾರಂಭ. ಪ್ರತಿ ಹೆಜ್ಜೆಯನ್ನು ತುಂಬಾ ಎಚ್ಚರಿಕೆಯಿಂದ ಇಡಬೇಕು. ಅನಾರೋಗ್ಯ, ಅಪಘಾತಗಳು ಉಂಟಾದೀತು. ಶ್ರೀ ತ್ರಿಪುರ ಸುಂದರಿ ಅರ್ಚನೆ. ಶುಭ ಸಂಖ್ಯೆ-7.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಪ್ರತಿಫಲ ಬೇಕೆಂದರೆ ಪ್ರಯತ್ನಶೀಲರಾಗಿ, ಸರ್ಕಾರಿ ನೌಕರರಿಗೆ ಮುಂಬಡ್ತಿಯ ಯೋಗವಿದೆ. ಚಿಂತಿಸಿದ ಕಾರ್ಯ ಸಫಲವಾಗುವುದು. ಶಾರೀರಿಕ ಸೌಖ್ಯ. ಕಾರ್ಮಿಕ ವರ್ಗದವರಿಗೆ ಸರ್ಕಾರದಿಂದ ಸವಲತ್ತುಗಳು ಒದಗುವುದು. ರೇಷ್ಮೆ ಬೆಳೆ ಹಾಗೂ ರೇಷ್ಮೆ ವ್ಯಾಪಾರದಿಂದ ಹೆಚ್ಚಿನ ಲಾಭ ಗಳಿಕೆ ಆಗುವುದು. ದಾಯಾದಿಗಳ ವಿರೋಧ ಎದುರಿಸಬೇಕಾಗುವುದು. ವಾತ ಸಂಬಂಧಿ ಕಾಯಿಲೆ ಕಾಡಿಸುತ್ತದೆ.

ಶ್ರೀ ಕುಲದೇವತಾ ಆರಾಧನೆ. ಶುಭ ಸಂಖ್ಯೆ-9.

ಕನ್ಯಾ (ಟೊ.ಪ.ಪಿ.ಪು.ಫ.ಣ.ಶ.ಪೆ.ಪೊ)

ಪಂಚಮ ಶನಿಕಾಟ ತಪ್ಪಿದೆ, ಗುರುಗ್ರಹವೂ ಶುಭ ಭಾವದಲ್ಲಿದ್ದಾರೆ. 'ನಾವು ಸರಿಯಿದ್ದರೆ ಅನ್ಯರಿಂದ ನಮಗೆ ತೊಂದರೆ ಇಲ್ಲ' ಎಂಬ ತತ್ವವನ್ನು ಅನುಸರಿಸಿರಿ ಒಳ್ಳೆಯದಾಗುತ್ತದೆ. ಸಹ ಧರ್ಮಿಣಿಯ ಸಲಹೆಯಿಂದ ಮಹತ್ತರ ಸಮಸ್ಯೆಗೆ ಪರಿಹಾರ ಒದಗುವುದು. ವಾರಾಂತ್ಯಕ್ಕೆ ಚಂದ್ರಗ್ರಹದ ಆಸರೆಯಿಂದ ಧನ-ಧಾನ್ಯ ಲಾಭ, ಸ್ತ್ರೀ ಸಂಗ, ಸಹವಾಸಗಳು ದೊರೆಯಲಿದೆ. ಸ್ವಧರ್ಮ ಆಚರಣೆ.

ಶ್ರೀ ಶ್ರೀನಿವಾಸ ಉಪಾಸನೆ. ಶುಭ ಸಂಖ್ಯೆ-4.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಕೈಗೊಂಡ ಕೆಲಸ ಕಾರ್ಯಗಳು ಮುನ್ನಡೆದರೂ ಬಂದ ಜನರಲ್ಲಿ ಕಲಹ, ಅಸಮಾಧಾನಗಳು ಮನಃಶಾಂತಿ ಕೆಡಿಸುತ್ತವೆ. ಸಜ್ಜನರ ಆಗ್ರಹಕ್ಕೆ ಗುರಿಯಾಗುವಂತಹ ಕೆಲಸಗಳು ನಡೆದು ಹೋಗುವುದು. ಶನಿದೇವನ ಸ್ಥಾನ ಪಲ್ಲಟವಾಗಿದ್ದು ಮಕ್ಕಳಲ್ಲಿ ವಿರೋಧ, ಜಗಳಗಳು ನಡೆದೀತು. ವಾರ ಮಧ್ಯೆ ನಂತರ ನಿಮ್ಮ ರಾಶ್ಯಾಧಿಪತಿ ಶುಕ್ರ ಶುಭ ಸಂದೇಶ ತರಲಿದ್ದಾನೆ. ನೂತನ ವ್ಯಾಪಾರ ಪ್ರಾರಂಭಿಸಲು ಓಡಾಟಗಳು ನಡೆಯಲಿದೆ. ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-3.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ)

ಸಪ್ತಾಹದ ಆದಿಗೆ ಇಷ್ಟ ಕಾರ್ಯ ಸಿದ್ಧಿಯಾಗಿ ಮನಸ್ಸಂತೋಷ. ನಿರೀಕ್ಷಿತ ಧನ ಕೈಸೇರುವುದು. ಬ್ಯಾಂಕ್ ಸಾಲದ ಪ್ರಯತ್ನ ಸಫಲವಾಗುವುದು. ಪ್ರತಿಭಾವಂತ ಕಲಾವಿದರು, ವಿದ್ವಜ್ಜನರಿಗೆ ಸಾಮಾಜಿಕ ಗೌರವ ದೊರೆಯುವುದು. ಸರ್ಕಾರಿ ಕೆಲಸ ಕಾರ್ಯಗಳು ಸುಗಮವಾಗಿ ಸಾಗುವುದು. ಸ್ಥಗಿತಗೊಂಡಿದ್ದ ಮುಖ್ಯ ಕೆಲಸಗಳು ಪುನಾರಂಭವಾಗಲು ಹಿರಿಯರ ಗೈಡೆನ್ಸ್ ದೊರೆಯುವುದು.

ಶ್ರೀ ಗಣಪತಿ ಅರ್ಚನೆ. ಶುಭ ಸಂಖ್ಯೆ-5.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಶನಿ ಭಗವಾನ್ ಮುಂದಿನ ಮನೆಗೆ ತೆರಳಿ ನಿಮ್ಮ 'ಸಾಡೇಸಾತಿ' ಅಂತ್ಯವಾಗಿದೆ. ನೂತನ ಉದ್ಯಮ ಪ್ರಾರಂಭಿಸಲು ಸರಿಕಾಲ. ಮಿತ್ರ ವೃಂದದವರಿಂದ ಸಹಕಾರ, ಗೌರವಾದರಗಳನ್ನು ಹೊಂದುವಿರಿ. ಸಿವಿಲ್ ಕಂಟ್ರಾಕ್ಟರುಗಳಿಗೆ ಒಳ್ಳೆಯ ಯೋಜನೆಗಳು ದೊರಕುವುದು. ಸಜ್ಜನರ ಸಂಪರ್ಕದಿಂದ ಸದ್ವಿಚಾರಗಳ ಅರಿವು. ಸಹೋದರರ ಸಹಾಯದಿಂದ ಕಾರ್ಯ ಸಾಧನೆ. ವಿದ್ಯುನ್ಮಾನ ವಸ್ತುಗಳಿಂದ ಜಾಗೃತರಾಗಿರಿ.

ಶ್ರೀ ಪುಣ್ಯನದಿ ಸ್ನಾನ ಮಾಡಿ. ಶುಭ ಸಂಖ್ಯೆ-8.

ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)

ಒಂದು ಪ್ರಯತ್ನ ಸೋತಾಗ ಹೊಸ ವಿಕಲ್ಪಗಳನ್ನು ಅನ್ವೇಷಿಸಬೇಕಾಗುತ್ತದೆ. 'ಜಗದಲ್ಲಿ ನಡೆಯುವುದೆಲ್ಲ ಜಗದೀಶ ನಿಚ್ಚ'. ಯಾವುದೇ ಕೆಲಸವನ್ನು ತಕ್ಷಣ ಮಾಡಿಬಿಡಬೇಡಿ. ಚಂದ್ರಗ್ರಹ ಸಂಚಾರ ಶುಭವಿದೆ. ಸಂತಸದ ಸುದ್ದಿಯ ಓಲೆ ಬರಲಿದೆ. ಸರ್ಕಾರಿ ನೌಕರರು ಹಿರಿಯ ಅಧಿಕಾರಿಗಳೊಂದಿಗೆ ಸೌಹಾರ್ದತೆಯಿಂದ ನಡೆದುಕೊಂಡರೆ ಒಳಿತಾಗುವುದು. ಪಿತ್ತ ಸಂಬಂಧಿ ಕಾಯಿಲೆ ಕಾಡಬಹುದು. ಕಾರಣವಿಲ್ಲದ ಓಡಾಟಗಳು ಬೇಡಿ. ಶ್ರೀ ಶನಿಮಂತ್ರ ಜಪಿಸಿ. ಶುಭ ಸಂಖ್ಯೆ-5.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಬಯಸಿದ್ದು ಅಯಾಚಿತವಾಗಿ ಲಭಿಸುವುದು. ಸ್ಥಾನ ಲಾಭವಾಗುವುದರಿಂದ ರಾಜಕಾರಣಿಗಳಿಗೆ ಸಂತಸ. ಅಭಿವೃದ್ಧಿಯ ಮಾತುಕತೆಗಳು ಫಲಪ್ರದವಾಗಲಿದೆ. ನಿಮ್ಮ ಆತ್ಮವಿಶ್ವಾಸ ಉತ್ತಮ ಮಟ್ಟದಲ್ಲಿರುತ್ತದೆ. ನಿಮ್ಮ ರಾಶಿಗೆ ಬಂದಿರುವ ಶನಿದೇವನಿಂದ ಕಾನೂನು ಹಾಗೂ ನ್ಯಾಯಾಲಯ ವಿಷಯಗಳು ತೊಡಕಾಗಿ ತೋರುವುದು. ರೈತಾಪಿ ಜನರಿಗೆ ಉತ್ತಮ ಫಸಲಾದರೂ ಸೂಕ್ತ ಬೆಲೆ ದೊರೆಯದೆ ನಿರಾಶೆ ಉಂಟಾಗುವುದು. ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ-2.


ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದಾರಂಭಕ್ಕೆ ಅನಿರೀಕ್ಷಿತ ಮೂಲಗಳಿಂದ ಧನ ಸಂಚಯ. ಮನೆಯಲ್ಲಿ ಹರ್ಷದ ವಾತಾವರಣ. ಬಂಧು-ಬಳಗದವರ ಸಮಾಗಮದಿಂದ ಹರ್ಷ ಚಿತ್ತರಾಗಿರುವಿರಿ. ಹೋಟೆಲ್, ಟ್ರಾವೆಲ್ ಏಜೆನ್ಸಿಯವರಿಗೆ ಉತ್ತಮ ಲಾಭವಾಗುವುದು. ಷೇರು ವ್ಯವಹಾರಗಳನ್ನು ಎಚ್ಚರಿಕೆಯಿಂದ ಮಾಡಿ ಅನ್ಯಥಾ ನಷ್ಟ ಸಂಭವಿಸಲಿದೆ. ಹಲವರಿಗೆ ವೃತ್ತಿಯಲ್ಲಿ ಬಡ್ತಿ. ವಾರದ ಮುಕ್ತಾಯಕ್ಕೆ ನೂತನ ವಸ್ತ್ರಾಭರಣ ಖರೀದಿ. ಸಂಸಾರ ದೊಡಗೂಡಿ ದೈವಸೇವೆ. ಶ್ರೀ ತ್ರಿಮೂರ್ತಿರೂಪ ದತ್ತ ಸೇವೆ. ಶುಭ ಸಂಖ್ಯೆ-2.

ಮಕ್ಕಳ ಚಿತ್ರಕಥೆ

'ಹದ್ದುಗಳಿಂದ ನಾವು ಕಲಿಯಬೇಕಾದ ಪಾಠ...!'

-ಹೆಚ್.ಜಿ.ಎನ್.ಪ್ರಸಾದ್, ಮೊ: 9845376199



ಮೈಸೂರು ಮಿತ್ರ

— ವಿಜಯ ಸಂಕಲ್ಪ ಅಭಿಯಾನ ಮೂಲಕ —

ಬಿಜೆಪಿ ವಿಜಯ ಖಾತ್ರಿ ಮಾಡಿಕೊಳ್ಳಿ: ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ

● ರಾಜ್ಯ, ಕೇಂದ್ರ ಸರ್ಕಾರಗಳ ಯೋಜನೆಗಳನ್ನು ಜನರಿಗೆ ತಲುಪಿಸಿ ● ಮತ್ತೊಮ್ಮೆ ರಾಜ್ಯದ ಚುಕ್ಕಾಣಿ ಹಿಡಿಯಲು ಕಾರ್ಯಕರ್ತರು ಶ್ರಮಿಸಿ

ತಿ.ನರಸೀಪುರ, ಜ.21– ವಿಜಯ ಸಂಕಲ್ಪ ಅಭಿಯಾನದ ಮೂಲಕ ರಾಜ್ಯದಲ್ಲಿ ಭಾರತೀಯ ಜನತಾ ಪಕ್ಷದ ವಿಜಯವನ್ನು ಖಾತ್ರಿ ಮಾಡಿಕೊಳ್ಳಬೇಕು ಹಾಗೂ ಅಧಿಕಾರದ ಚುಕ್ಕಾಣಿ ಹಿಡಿಯಲು ಬೂತ್ ಮಟ್ಟದ ಕಾರ್ಯಕರ್ತರು ನಿರಂತರವಾಗಿ ಶ್ರಮಿಸಬೇಕು ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಕರೆ ನೀಡಿದರು. ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹದಿನಾರು ಗ್ರಾಮದಲ್ಲಿ ಶನಿವಾರ ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ ನೀಡಿ, ಮನೆ ಮನೆಗೆ ಪಕ್ಷದ ಸಾಧನೆಗಳ ವಿವರವಿರುವ ಕರಪತ್ರ ಹಂಚಿ ಅವರು ಮಾತನಾಡಿದರು.

ಅಭಿಯಾನಕ್ಕೆ ಜೆ.ಪಿ.ನಡ್ಡಾ ಚಾಲನೆ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ವಿಜಾಪುರದಲ್ಲಿ ಇಂದು ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ ನೀಡುತ್ತಿದ್ದು, ಅದರಂತೆ ಪ್ರತಿ ಬೂತ್ ಮಟ್ಟದಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುತ್ತಿದೆ. ರಾಜ್ಯ ಮತ್ತು ಕೇಂದ್ರದ ಜನೋಪಯೋಗಿ ಯೋಜನೆಗಳನ್ನು ಜನರಿಗೆ ತಲುಪಿಸುವ ಸಲುವಾಗಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಈ ಅಭಿಯಾನದ ಮೂಲಕ ನಾವೆಲ್ಲರೂ ಶ್ರಮವಹಿಸಿ ನಮ್ಮ ವಿಜಯ ಖಾತ್ರಿ ಮಾಡಿಕೊಳ್ಳಬೇಕಿದೆ. ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರದ ಚುಕ್ಕಾಣಿ ಹಿಡಿಯಲು ಬೂತ್ ಮಟ್ಟದ ಕಾರ್ಯಕರ್ತರ ಶ್ರಮ ಬಹುಮುಖ್ಯ ಎಂದರು.

ದೇಶದ ಅಭಿವೃದ್ಧಿ, ರಕ್ಷಣೆಗಾಗಿ ದುಡಿಯುತ್ತಿರುವ ಮೋದಿ: ಪ್ರಧಾನಿ ಮೋದಿ ದೇಶದ ಅಭಿವೃದ್ಧಿ ಮತ್ತು ರಕ್ಷಣೆಗಾಗಿ ಹಗಲಿರುಳು ದುಡಿಯುತ್ತಿದ್ದಾರೆ.



ದಿನದ 18 ಗಂಟೆಗಳ ಕಾಲ ಕೆಲಸ ಮಾಡುವ ಪ್ರಧಾನಿ ಸಿಕ್ಕಿರುವುದು ದೇಶದ ಜನತೆಯ ಸೌಭಾಗ್ಯ. ಮೋದಿಯವರು ಇಡೀ ದೇಶ ತಿರುಗಿ ಪಕ್ಷ ಸಂಘಟಿಸುತ್ತಿದ್ದು, ದೇಶದ ಪ್ರತಿ ಬೂತ್‌ಗಳಲ್ಲಿ ಬೂತ್ ವಿಜಯ ಮಾಡಬೇಕೆಂಬ ಅಭಿಲಾಷೆ ಮೋದಿಯವರದ್ದಾಗಿದೆ. ನೀವು ಬೂತ್ ಗೆಲ್ಲಿಸಿಕೊಟ್ಟರೆ ನಾನು ದೇಶ ಗೆಲ್ಲಿಸುತ್ತೇನೆ ಎಂದು ಉತ್ತರ ಪ್ರದೇಶದಲ್ಲಿ ಕರೆ ಕೊಟ್ಟಿದ್ದ ಮೋದಿಯವರ ಮಾತನ್ನು ಸಾಕಾರಗೊಳಿಸಲು ನಾವು ಬೂತ್ ಗೆಲ್ಲುವ ಸಂಕಲ್ಪ ಮಾಡಬೇಕಿದೆ ಎಂದರು.

ಕೇಂದ್ರದ ಜನಪ್ರಿಯ ಯೋಜನೆ ತಲುಪಿಸಿ: ಪ್ರತಿ ಕ್ಷೇತ್ರದಲ್ಲಿ ಬೂತ್ ಸಮಿತಿ, ಪೇಜ್ ಪ್ರಮುಖ್ ರಚಿಸಿ ಪ್ರತಿ ಮನೆಗಳಿಗೆ ಭೇಟಿ ನೀಡಿ ಕೇಂದ್ರ ಸರ್ಕಾರದ ಜನಪ್ರಿಯ ಯೋಜನೆಗಳಾದ ಉಜ್ವಲ, ಆಯುಷ್ಮಾನ್ ಕಾರ್ಡ್, ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆ, ಕಿಸಾನ್ ಸಮ್ಮಾನ್ ಯೋಜನೆಗಳನ್ನು ಜನರಿಗೆ ತಲುಪಿಸಿ ಪಕ್ಷದತ್ತ ಅವರನ್ನು ಸೆಳೆಯುವ ಕೆಲಸ ಮಾಡಬೇಕಿದೆ. ಮುಂಬರುವ ಚುನಾವಣೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಬಿಜೆಪಿ ಧ್ವಜ ಹಾರಿಸಲು ಕಾರ್ಯಕರ್ತರು ಸಂಘಟಿತರಾಗುವಂತೆ ಕೋರಿದರು.

ಇದಕ್ಕೂ ಮೊದಲು ಅವರು ಗ್ರಾಮದ ಪ್ರತಿ ಮನೆ, ಅಂಗಡಿ, ಬಸ್ ನಿಲ್ದಾಣದಲ್ಲಿ ಸಾರ್ವಜನಿಕರನ್ನು ಭೇಟಿಯಾಗಿ ರಾಜ್ಯ ಸರ್ಕಾರದ ಸಾಧನೆಗಳ ಕುರಿತ ಕರಪತ್ರ ಹಂಚಿ ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಪಕ್ಷ ಬೆಂಬಲಿಸುವಂತೆ ಮನವಿ ಮಾಡಿದರು.

ಈ ವೇಳೆ ರಾಜ್ಯ ಪ್ರವಾಸೋದ್ಯಮ ನಿಗಮದ ಅಧ್ಯಕ್ಷ ಕಾಪು ಸಿದ್ದಲಿಂಗಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ದೇವನೂರು ಪ್ರತಾಪ್, ವರುಣಾ ಕ್ಷೇತ್ರ ಮಾಜಿ ಅಧ್ಯಕ್ಷ ತೋಟದಪ್ಪ ಬಸವರಾಜು, ಜಿಪಂ ಮಾಜಿ ಸದಸ್ಯರಾದ ಸದಾನಂದ, ಮಮತಾ ಶಿವಪ್ರಸಾದ್, ಗುರುಸ್ವಾಮಿ, ಶರತ್ ಪುಟ್ಟಬುದ್ಧಿ, ಕ್ಷೇತ್ರಾಧ್ಯಕ್ಷ ಕಲ್ಮಳ್ಳಿ ವಿಜಯಕುಮಾರ್, ಜಿಲ್ಲಾ ಕಾರ್ಯದರ್ಶಿ ರಂಗೂನಾಯಕ್, ಸಂಚಾಲಕ ವೆಂಕಟರಮಣಶೆಟ್ಟಿ, ಎಪಿಎಂಸಿ ಮಾಜಿ ಅಧ್ಯಕ್ಷ ಚಿನ್ನಂಬಳ್ಳಿ ಮಂಜು, ಹದಿನಾರು ಡೇವಣ್ಣ ಮಲ್ಲಿಕಾರ್ಜುನ, ಸತೀಶ್, ನಂಜುಂಡಸ್ವಾಮಿ, ಆಲಗೂಡು ಮಂಜು, ಗ್ರಾಪಂ ಸದಸ್ಯೆ ಪುಷ್ಪಲತಾ, ಗುರುಮೂರ್ತಿ, ಶಂಕರ್, ಶಶಾಂಕ್ ಯಡದೊರೆ, ಬೆಳಗುಂದ ಮಹೇಶ, ಮುಳ್ಳೂರು ರೇಚಣ್ಣ, ರಾಜೇಂದ್ರ, ನಾರ್ಲೆ ಮಹೇಶ ಮತ್ತಿತರರಿದ್ದರು.

> ಕ್ಷೇತ್ರದ ಪ್ರತಿ ಬೂತ್‌ನಲ್ಲೂ ಡಬಲ್ ಇಂಜಿನ್ ಸರ್ಕಾರದ ಸಾಧನೆಗಳ ಕರಪತ್ರಗಳನ್ನು ಮನೆ ಮನೆಗೆ ತಲುಪಿಸಿ, ಮತದಾರರಿಗೆ ಸಾಧನೆಗಳ ಬಗ್ಗೆ ಮನದಟ್ಟು ಮಾಡಿಸುವುದೇ ಕಾರ್ಯಕ್ರಮದ ಉದ್ದೇಶ. ಕಿಸಾನ್ ಸಮ್ಮಾನ್, ರಸ್ತೆ ಅಭಿವೃದ್ಧಿ, ವಿಮಾ ಯೋಜನೆ, ವಿದ್ಯಾಸಿರಿ ಕಾರ್ಯಕ್ರಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಲಿದ್ದಾರೆ. ಈ ಬಾರಿ ಬೂತ್ ಅಭಿಯಾನ ಕಾರ್ಯಕ್ರಮ ಕ್ಷೇತ್ರದಲ್ಲಿ ಯಶಸ್ವಿಯಾಗಿ ನಡೆದಿದೆ. ಈಗ 9 ದಿನಗಳ ಕಾಲ ನಡೆಯುವ ವಿಜಯ ಸಂಕಲ್ಪ ಅಭಿಯಾನವನ್ನು ಬೂತ್ ಮಟ್ಟದಲ್ಲಿ ಯಶಸ್ವಿಗೊಳಿಸಬೇಕು.
>
> – ಬಿ.ಎನ್.ಸದಾನಂದ, ಎಂಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ.

ಶ್ರೀಕಂಠೇಶ್ವರನ ಹುಂಡಿಯಲ್ಲಿ 1.26 ಕೋಟಿ ರೂ. ಸಂಗ್ರಹ

ನಂಜನಗೂಡು, ಜ.21– ನಗರದ ಶ್ರೀಕಂಠೇಶ್ವರ ದೇವಾಲಯದ 34 ಹುಂಡಿಗಳಲ್ಲಿ 1.26 ಕೋಟಿ ರೂ. ಸಂಗ್ರಹವಾಗಿದೆ. ದೇವಾಲಯದ ದಾಸೋಹ ಭವನದಲ್ಲಿ ಹುಂಡಿಗಳನ್ನು ತೆರೆದು ಎಣಿಕೆ ಮಾಡಲಾಯಿತು. ಈ ವೇಳೆ 1,26,82,098 ರೂ. ನಗದು, 73 ಗ್ರಾಂ ಚಿನ್ನ, 4.8 ಕೆಜಿ ಬೆಳ್ಳಿ ಹಾಗೂ 29 ವಿದೇಶಿ ಕರೆನ್ಸಿಗಳು ದೊರೆತಿವೆ. ನೂರಕ್ಕೂ ಹೆಚ್ಚಿನ ಮಹಿಳಾ ಸ್ವಸಹಾಯ ಸಂಘದ ಸದಸ್ಯರು, ಕರ್ನಾಟಕ ಗ್ರಾಮೀಣ ಬ್ಯಾಂಕ್ ಸಿಬ್ಬಂದಿ ಹಾಗೂ ದೇವಾಲಯದ ಸಿಬ್ಬಂದಿ ಹುಂಡಿ ಹಣ ಏಣಿಕೆ ಕಾರ್ಯಕ್ಕೆ ನೆರವಾದರು. ಈ ವೇಳೆ ದೇವಾಲಯದ ಎಸಿ ಕಮಲಾಬಾಯಿ, ಇಓ ಜಗದೀಶ್, ಎಇಓ ವೆಂಕಟೇಶ ಪ್ರಸಾದ್, ಲೆಕ್ಕಾಧಿಕಾರಿ ಗುರುಮಲ್ಲಯ್ಯ, ಕರ್ನಾಟಕ ಗ್ರಾಮೀಣ ಬ್ಯಾಂಕ್ ವ್ಯವಸ್ಥಾಪಕ ಗಿರೀಶ್ ಉಪಸ್ಥಿತರಿದ್ದರು.

ಶ್ರೀಶಿವಯೋಗಿ ಸಿದ್ದರಾಮೇಶ್ವರ ತತ್ವಾದರ್ಶ ಅಳವಡಿಸಿಕೊಳ್ಳಿ



ಹುಣಸೂರು, ಜ.21– ಶ್ರೀಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಆಚರಿಸುವುದರಿಂದ ಯಾವುದೇ ಪ್ರಯೋಜನವಿಲ್ಲ. ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಮಾಜ ಸುಧಾರಣೆಗೆ ಶ್ರಮಿಸಿದ ಪ್ರತಿಯೊಬ್ಬರನ್ನು ಸ್ಮರಿಸಬೇಕು ಎಂದು ಕಾಯಕ ಸಮಾಜದ ತಾಲೂಕು ಅಧ್ಯಕ್ಷ ಟಿ.ಕೆ.ಹೊನ್ನಪ್ಪ ತೊಂಡಾಳು ತಿಳಿಸಿದರು.

ತಾಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಆಯೋಜಿಸಿದ್ದ ಶ್ರೀಶಿವಯೋಗಿ ಸಿದ್ದರಾಮೇಶ್ವರ ಜಯಂತಿಯಲ್ಲಿ ಮಾತನಾಡಿದ ಅವರು, 12ನೇ ಶತಮಾನಕ್ಕೆ ಸೇರಿದ ಸಿದ್ದರಾಮೇಶ್ವರರು 1800ಕ್ಕೂ ಹೆಚ್ಚು ವಚನಗಳನ್ನು ರಚಿಸಿದ್ದಾರೆ. ನೂರಾರು ಸಾಮೂಹಿಕ ವಿವಾಹ ಮಾಡಿ, ಜನರ ಕಲ್ಯಾಣಕ್ಕಾಗಿ ನೂರಾರು ಕೆರೆ, ಬಾವಿ ತೊಡಿಸಿದ್ದಾರೆ. ಸಿದ್ದರಾಮೇಶ್ವರರು ಅಲ್ಲಮಪ್ರಭು ಅವರನ್ನು ಬಸವ ಕಲ್ಯಾಣಕ್ಕೆ ಕರೆದುಕೊಂಡು ಬಂದು ಬಸವಣ್ಣನವರ ದರ್ಶನ ಮಾಡಿಸಿ ಚೆನ್ನಬಸವಣ್ಣನಿಂದ ಲಿಂಗ ದೀಕ್ಷೆ ಕೊಡಿಸಿದರು. ವಚನ ಭಂಡಾರದ ಅಮೂಲ್ಯ ರತ್ನವಾಗಿರುವ ಇವರು ಇಂದಿಗೂ ಪ್ರಸ್ತುತ ಎಂದರು. ಕಾರ್ಯಕ್ರಮದಲ್ಲಿ ಎಸಿ ರುಚಿ ಬಿಂದಾಲ್, ತಹಸೀಲ್ದಾರ್ ಯು.ಎಸ್.ಡಾ.ಅಶೋಕ್, ತಾಪಂ ಇಓ ಮನು, ಉಪತಹಸೀಲ್ದಾರ್ ಶಕೀಲಾಬಾನು, ಎಇಇ ಭೋಜರಾಜು, ಮುಖಂಡರಾದ ನಿಂಗರಾಜ್ ಮಲ್ಲಾಡಿ, ಗಣೇಶ್, ಕೃಷ್ಣಬೋವಿ, ಜಯರಾವ್, ರಾಚಯ್ಯ, ಸುಬ್ಬರಾವ್ ಸೇರಿದಂತೆ ಇತರರಿದ್ದರು.



ಪಿರಿಯಾಪಟ್ಟಣ ತಾಲೂಕಿನ ದೊಡ್ಡಬೇಲಾಳು ಗ್ರಾಮದಲ್ಲಿ 27.5 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಮಹದೇವ್ ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ ಇನ್ನಿತರರಿದ್ದರು.

ನಾಳೆ ಪೂರ್ವಭಾವಿ ಸಭೆ

ಬೆಟ್ಟದಪುರ, ಜ.21– ಫೆ.7ರಂದು ನಡೆಯುವ ಬೆಟ್ಟದಪುರದ ಇತಿಹಾಸ ಪ್ರಸಿದ್ಧ ಶಿಡ್ಲು ಮಲ್ಲಿಕಾರ್ಜನಸ್ವಾಮಿ ಬ್ರಹ್ಮ ರಥೋತ್ಸವ ಸಂಬಂಧ ಜ.23ರಂದು ಪೂರ್ವಭಾವಿ ನಡೆಯಲಿದೆ ಎಂದು ಕಂದಾಯ ನಿರೀಕ್ಷಕ ಆನಂದ್ ತಿಳಿಸಿದ್ದಾರೆ.

ಫೆ6ರಂದು ಗಿರಿಜಾ ಕಲ್ಯಾಣ ನಡೆಯಲಿದ್ದು, 7ರಂದು ಶಿಡ್ಲು ಮಲ್ಲಿಕಾರ್ಜುನಸ್ವಾಮಿ ಬ್ರಹ್ಮ ರಥೋತ್ಸವ ನಡೆಯುವ ಹಿನ್ನಲೆಯಲ್ಲಿ ಸೋಮವಾರ ಬೆಳಗ್ಗೆ 11 ಗಂಟೆಗೆ ಹುಣಸೂರು ಎಸಿ ರುಚಿ ಜಿಂದಾಲ್ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಯಲಿದೆ ಸಭೆಯಲ್ಲಿ ತಹಸೀಲ್ದಾರ್ ಯದು ಗಿರೀಶ್, ಉಪತಹಸೀಲ್ದಾರ್ ಶಶಿಧರ್, ಕಂದಾಯ ನಿರೀಕ್ಷಕ ಆನಂದ್, ಎಸ್ಐ ಪ್ರಕಾಶ್ ಎಂ.ಎತ್ತಿನಮನಿ, ಪಿಡಿಓ ದಿವಾಕರ್, ಪಶು ಸಂಗೋಪನೆ ಇಲಾಖೆಯ ಡಾ.ಸಂದೇಶ್, ಸಾರಿಗೆ ಇಲಾಖೆಯ ದರ್ಶನ್, ಪ್ರಧಾನ ಅರ್ಚಕ ಸತೀಶ್ ಕಶ್ಯಪ ಹಾಗೂ ಇತರರು ಭಾಗವಹಿಸಲಿದ್ದು, ಸಭೆಯಲ್ಲಿ ಈ ಭಾಗದ ಮುಖಂಡರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಲಹೆ ಸೂಚನೆ ನೀಡುವಂತೆ ಮನವಿ ಮಾಡಿದ್ದಾರೆ.

ಕೋಟೆಯಲ್ಲಿ ಬಿಜೆಪಿ ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ

ಹೆಚ್.ಡಿ.ಕೋಟೆ, ಜ.21– ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನಪ್ರಿಯ ಯೋಜನೆಗಳನ್ನು ಮನೆ ಮನೆಗೆ ಭೇಟಿ ನೀಡಿ ಮತದಾರರಿಗೆ ಮನವರಿಕೆ ಮಾಡಿಕೊಡಲಾಗುವುದು ಎಂದು ಕೋಟೆ ವಿಧಾನಸಭಾ ಕ್ಷೇತ್ರದ ಬಿಜೆಪಿ ಉಸ್ತುವಾರಿ ಎಂ.ಅಪ್ಪಣ್ಣ ತಿಳಿಸಿದರು.



ಪಟ್ಟಣದ ನಗರಾಧ್ಯಕ್ಷ ನಂದೀಶ್ ಅವರ ನಿವಾಸದ ಬಳಿ ಬಿಜೆಪಿ ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳನ್ನು ಕೋಟೆ, ಸರಗೂರು ತಾಲೂಕಿನ 39 ಗ್ರಾಪಂ ಹಾಗೂ ಪಟ್ಟಣದ ಪಪಂ ವ್ಯಾಪ್ತಿಯ ಪ್ರತಿ ಮನೆಗಳಿಗೆ ಭೇಟಿ ನೀಡಿ ಸ್ಟಿಕ್ಕರ್ ಅಂಟಿಸುವ, ಗೋಡೆ ಬರಹ ಹಾಗೂ ಕರಪತ್ರ ಹಂಚುವ ಮೂಲಕ ಮನವರಿಕೆ ಮಾಡಿಕೊಡಲಾಗುತ್ತದೆ ಎಂದರು.

ಬಿಜೆಪಿ ಮುಖಂಡ ಕೃಷ್ಣಸ್ವಾಮಿ ಮಾತನಾಡಿ, ತಾಲೂಕಿನಲ್ಲಿ 50 ಸಾವಿರ ಸದಸ್ಯತ್ವ ನೋಂದಣಿ ಗುರಿ ಹೊಂದಲಾಗಿದೆ ವಿಜಯ ಸಂಕಲ್ಪ ಅಭಿಯಾನದಡಿ ಮನೆ ಮನೆಗೆ, ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನಗಳಿಗೆ ಸ್ಟಿಕ್ಕರ್ ಅಂಟಿಸಲಾಗುವುದು. 8000090009ಗೆ ಮಿಸ್‌ಕಾಲ್ ಕೊಡುವ ಮೂಲಕ ಪಕ್ಷದ ಸದಸ್ಯತ್ವ ಪಡೆಯುವಂತೆ ಮನವಿ ಮಾಡಿದರು.

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ 11.3 ಕೋಟಿ ರೈತರಿಗೆ 1.82 ಲಕ್ಷ ಕೋಟಿ ಆರ್ಥಿಕ ನೆರವು, ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆಯಡಿ 37.57 ಕೋಟಿ ರೈತರಿಗೆ ಬೆಳೆ ವಿಮೆ ಸೌಲಭ್ಯ ಕಿಸಾನ್ ಕ್ರೆಡಿಟ್ ಕಾರ್ಡ್ ಮೂಲಕ 3 ಕೋಟಿವರೆಗೂ ಅಧಿಕ ರೈತರಿಗೆ 3.4 ಲಕ್ಷ ಕೋಟಿಗಳಷ್ಟು ಸಾಲ ವಿತರಣೆ, 23ಕೋಟಿ ಆರೋಗ್ಯ ಹೆಲ್ತ್ ಕಾರ್ಡ್ ವಿತರಣೆ ಇನ್ನು ಹಲವಾರು ಯೋಜನೆಗಳ ಬಗ್ಗೆ ಮತದಾರರಿಗೆ ಅಭಿಯಾನದ ಮೂಲಕ ಮನವರಿಕೆ ಮಾಡಲಾಗುವುದು ಎಂದರು.

ಈ ವೇಳೆ ತಾಲೂಕು ಬಿಜೆಪಿ ಅಧ್ಯಕ್ಷ ಗುರುಸ್ವಾಮಿ, ನಗರಾಧ್ಯಕ್ಷ ನಂದೀಶ್, ಮಾಜಿ ಅಧ್ಯಕ್ಷ ಗಿರೀಶ್, ಮಾಜಿ ಜಿಪಂ ಸದಸ್ಯ ಎಚ್.ಸಿ. ಲಕ್ಷ್ಮಣ್, ತಾಲೂಕು ಪ್ರಧಾನ ಕಾರ್ಯದರ್ಶಿ ವಿವೇಕ್, ಚನ್ನಪ್ಪ ಸುನಂದಮ್ಮ ಮಂಜುಳಾ, ಸೋಮಾಚಾರ್, ರಾಜು, ಶಂಕರೇಗೌಡ, ಯೋಗ ನಾಗಾರಾಮ್, ಮಹದೇವಪ್ಪ ಜಿಲ್ಲಾ ಕಾರ್ಯದರ್ಶಿ ವಿನಯ್, ಶಿವರಾಜು, ಕೆಂಡಗಣ್ಣಸ್ವಾಮಿ, ನಾಗೇಶ, ಗೋಪಾಲಯ್ಯ, ಶಿವರಾಜಪ್ಪ, ದೀಪು, ಮಂಜು, ಮಹೇಶ, ಲೋಕೇಶ್, ಮಾದೇಶ್, ಚಂದ್ರಮೌಳಿ, ವಿನೋದ್, ಕೃಷ್ಣಮೂರ್ತಿ ಇತರರಿದ್ದರು.

ಕೇಂದ್ರ, ರಾಜ್ಯ ಸರ್ಕಾರದ ಸಾಧನೆಗಳನ್ನು ಮತದಾರರಿಗೆ ತಲುಪಿಸಿ

ತಿ.ನರಸೀಪುರ, ಜ.21– ಪಟ್ಟಣದ ವಿಜಯ ಭಗವಾನ್ ಚಿತ್ರಮಂದಿರದ ಎದುರು ಬಿಜೆಪಿ ವಿಜಯ ಸಂಕಲ್ಪ ಅಭಿಯಾನಕ್ಕೆ ಮಾಜಿ ವಿಧಾನ ಪರಿಷತ್ ಸದಸ್ಯ ಸಿ.ರಮೇಶ್ ಹಾಗೂ ಕಾಂಪೋಸ್ಟ್ ನಿಗಮದ ಅಧ್ಯಕ್ಷ ಮಹದೇವಯ್ಯ ಚಾಲನೆ ನೀಡಿದರು.



ನಂತರ ಬೂತ್ ಮಟ್ಟದ ಮನೆ, ಅಂಗಡಿ, ಹೋಟೆಲ್‌ಗಳಿಗೆ ಕಾರ್ಯಕರ್ತರೊಂದಿಗೆ ತೆರಳಿದ ಮುಖಂಡರು ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಾಧನೆಯುಳ್ಳ ಕರಪತ್ರಗಳನ್ನು ಹಂಚಿ ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿಸುವಂತೆ ಮನವಿ ಮಾಡಿದರು.

ಮಾಜಿ ಶಾಸಕ ಸಿ.ರಮೇಶ್ ಮಾತನಾಡಿ, ಹೈಕಮಾಂಡ್ ಆದೇಶದ ಮೇರೆಗೆ ವಿಜಯ ಸಂಕಲ್ಪ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಮನೆ ಮನೆಗೆ ಕರಪತ್ರ ಹಂಚುವ, ಗೋಡೆ ಬರಹ, ಸ್ಟಿಕ್ಕರ್ ಅಂಟಿಸುವ ಮೂಲಕ ಮತದಾರರಲ್ಲಿ ಪಕ್ಷದ ಸಾಧನೆಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ ಎಂದರು.

ಪಕ್ಷದ ಕಾರ್ಯಕರ್ತರು ಪ್ರಧಾನಿ ಮೋದಿ ಅವರ ಮಾರ್ಗದರ್ಶನದಲ್ಲಿ ಮನೆ ಮನೆಗೆ ತೆರಳಿ ಮತದಾರರನ್ನು ಭೇಟಿ ಮಾಡಿ ಜಾಗೃತಿ ಮೂಡಿಸುತ್ತಿದ್ದು, ಕಾಂಗ್ರೆಸ್‌ನಂತೆ ಡೋಂಗಿ ಹಾಗೂ ಜೆಡಿಎಸ್‌ನಂತೆ ಬೇಜವಾಬ್ದಾರಿ ಪ್ರಚಾರ ಮಾಡುತ್ತಿಲ್ಲ. ನಮ್ಮ ಕಾರ್ಯಕ್ರಮಕ್ಕೆ ಜನತೆ ಸಹಕಾರ ನೀಡಬೇಕಿದೆ ಎಂದರು.

ಕಾಂಪೋಸ್ಟ್ ನಿಗಮದ ಅಧ್ಯಕ್ಷ ಮಹದೇವಯ್ಯ ಮಾತನಾಡಿ, ರಾಜ್ಯಾದ್ಯಂತ 58,186 ಬೂತ್‌ಗಳಲ್ಲಿ ವಿಜಯ ಸಂಕಲ್ಪ ಅಭಿಯಾನ ನಡೆಯುತ್ತಿದೆ. ಪ್ರತಿ ಬೂತ್‌ನಲ್ಲಿ ಮತದಾರರನ್ನು ಭೇಟಿ ಮಾಡಿ ಪಕ್ಷದ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ. ಎಲ್ಲಿ ಪಕ್ಷದ ಮತದಾರರಿಲ್ಲವೋ ಅಲ್ಲಿ ಮತದಾರರ ಮನವೊಲಿಸಿ ಪಕ್ಷದೆಡೆಗೆ ಸೆಳೆಯುವ ಕೆಲಸ ಮಾಡಲಾಗುತ್ತಿದೆ. ಅಲ್ಲದೇ ನಮ್ಮ ಪಕ್ಷ ಬೆಂಬಲಿಸುವ ಮತದಾರರನ್ನು ಬೇರೆ ಪಕ್ಷಕ್ಕೆ ಹೋಗದಂತೆ ಹಿಡಿದಿಟ್ಟುಕೊಳ್ಳುವ ಕೆಲಸವನ್ನು ನಾವೆಲ್ಲರೂ ಸೇರಿ ಮಾಡಬೇಕಿದೆ ಎಂದರು.

ಪುರಸಭೆ ಸದಸ್ಯ ಎಸ್.ಕೆ.ಕಿರಣ್ ಮಾತನಾಡಿ, ಪಕ್ಷ ಈ ಬಾರಿ ಯಾರಿಗೆ ಟಿಕೆಟ್ ನೀಡಿದರೂ, ಎಲ್ಲರೂ ಸಂಘಟಿತರಾಗಿ ಕೆಲಸ ಮಾಡಿ ಅವರನ್ನು ಗೆಲ್ಲಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಎಂದರು.

ಅಭಿಯಾನದಲ್ಲಿ ಪುರಸಭಾ ಸದಸ್ಯರಾದ ಎನ್.ಲೋಕೇಶ್, ಕೆ.ನಂಜುಂಡಸ್ವಾಮಿ, ಕಾರ್ಯಕಾರಿಣಿ ಸದಸ್ಯ ಕರೋಹಟ್ಟಿ ಮಹದೇವಯ್ಯ, ಎಸ್ಸಿ ಮೋರ್ಚಾ ಮಾಜಿ ಅಧ್ಯಕ್ಷ ಸಿದ್ದರಾಜು, ವಿಸ್ತಾರಕ ವಿಜಯ್, ಮುಖಂಡರಾದ ಮಂಜುನಾಥ್, ಸೋಮಶಂಕರ್, ಕುಮಾರ, ವಾಟಾಳ್ ಪುಟ್ಟಸ್ವಾಮಿ, ರಮೇಶ್ ಮತ್ತಿತರರಿದ್ದರು.

ಉಪಾಧ್ಯಕ್ಷರಾಗಿ ಆಯ್ಕೆ

ಹುಣಸೂರು, ಜ.21– ತಾಲೂಕಿನ ಹೊನ್ನೇನಹಳ್ಳಿ ಪ್ರಾಥಮಿಕ ಶಾಲೆ ಶಿಕ್ಷಕ ಮಹದೇವು ಅವರನ್ನು ರಾಜ್ಯ ಪ್ರಾಥಮಿಕ ಶಾಲಾ ಎಸ್‌ಸಿ ಎಸ್‌ಟಿ ಶಿಕ್ಷಕರ ಸಂಘದ ಉಪಾಧ್ಯಕ್ಷರಾನ್ನಾಗಿ ನೇಮಕ ಮಾಡಿ ರಾಜ್ಯಾಧ್ಯಕ್ಷ ಟಿ.ಸೋಣಪ್ಪ ಆದೇಶ ಹೊರಡಿಸಿದ್ದಾರೆ.





ಕಂಪಲಾಪುರ ಸರ್ಕಾರಿ ಪ್ರೌಢಶಾಲೆಗೆ ಹೈಮಾಸ್ಟ್ ದೀಪ ಅಳವಡಿಸುವಂತೆ ಶಾಸಕ ಕೆ.ಮಹದೇವ್ ಅವರಿಗೆ ಎಸ್‌ಡಿಎಂಸಿ ಅಧ್ಯಕ್ಷ ಸದಾಶಿವ ಮನವಿ ಸಲ್ಲಿಸಿದರು.

ಸುತ್ತೂರು ಜಾತ್ರೆಯಲ್ಲಿ ಗ್ರಾಮೀಣ ಸೊಗಡಿನ ದೇಸಿ ಆಟಗಳ ಸ್ಪರ್ಧೆ

ಉತ್ಸಾಹದಿಂದ ಪಾಲ್ಗೊಂಡ ಯುವಕರು, ಸಾರ್ವಜನಿಕರ ಸಂಭ್ರಮ





ನಂಜನಗೂಡು, ಜ.21– ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಗ್ರಾಮೀಣ ಸೊಗಡು ಸಾರುವ ದೇಸಿ ಆಟಗಳ ಸ್ಪರ್ಧೆಯಲ್ಲಿ ಸಾರ್ವಜನಿಕರು ಉತ್ಸಾಹದಿಂದ ಪಾಲ್ಗೊಂಡು ಆಟವಾಡುವ ಮೂಲಕ ಸಂಭ್ರಮಿಸಿದರು.

ಹಗ್ಗ–ಜಗ್ಗಾಟ, ಜೂಟಾಟ, ಬುಗುರಿ, ಗೋಲಿಯಾಟಗಳು ಗ್ರಾಮೀಣ ಭಾಗದಲ್ಲಿ ಕಣ್ಮರೆಯಾಗುತ್ತಿದ್ದು, ಅವುಗಳ ಉತ್ತೇಜನಕ್ಕಾಗಿ ಆದಿ ಜಗದ್ಗುರು ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ದೇಸಿ ಆಟಗಳ ಸ್ಪರ್ಧೆ ಆಯೋಜಿಸಲಾಗಿದೆ ಪುರುಷರ ವಿಭಾಗದಲ್ಲಿ ಕಲ್ಲುಗುಂಡು ಎತ್ತುವುದು, 50 ಕೆಜಿ ತುಂಬಿದ ಚೀಲ ಹೊತ್ತು ಓಡುವುದು, ಬುಗುರಿ, ಕೆಸರು ಗದ್ದೆ ಓಟ, ಕೆಸರುಗದ್ದೆ ಹಗ್ಗ–ಜಗ್ಗಾಟಗಳಂತಹ ಸ್ಪರ್ಧೆ ಆಯೋಜಿಸಲಾಗಿದೆ.

ಮಹಿಳೆಯರಿಗಾಗಿ ಹಗ್ಗಜಗ್ಗಾಟ, ನಿಂಬೆ ಹಣ್ಣು ಇರುವ ಚಮಚ ಬಾಯಲ್ಲಿಟ್ಟುಕೊಂಡು ಓಡುವುದು, ಅಳಿಗುಳಿಮನೆ, ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಮಡಕೆ ಒಡೆಯುವುದು, ಅಣೆಕಲ್ಲು, ತುಂಬಿದ ಬಿಂದಿಗೆಯನ್ನು ತಲೆ ಮೇಲೆ ಹೊತ್ತುಕೊಂಡು ಓಡುವ ಸ್ಪರ್ಧೆ, ಶಾಲಾ ಮಕ್ಕಳಿಗಾಗಿ ಗೋಲಿ, ಬುಗುರಿ, ಹುಲಿ ಕುರಿ ಆಟ, ಚೌಕಾಬಾರ, ಹಾವುಏಣಿ ಆಟ, ಕುಂಟೆಬಿಲ್ಲೆ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಗುಂಡು ಎತ್ತಿದರು, ಎದ್ದುಬಿದ್ದು ಓಡಿದರು: ಗುಂಡು ಎತ್ತುವ ಸ್ಪರ್ಧೆಯಲ್ಲಿ ಯುವಕರು ನಾಮುಂದು, ತಾಮುಂದು ಎಂದು ಸ್ಪರ್ಧಿಸುವ ಮೂಲಕ ತಮ್ಮ ಶಕ್ತಿ ಪ್ರದರ್ಶನ ತೋರಿದರು. 50 ಕೆಜಿ ಚೀಲ ಹೊತ್ತು ಓಡುವ ಸ್ಪರ್ಧೆಯಲ್ಲಿ ಎದ್ದು ಬಿದ್ದು ಓಡುವ ಮೂಲಕ ಗುರಿ ಮುಟ್ಟಿದರು. ಪ್ರೇಕ್ಷಕರು ಶಿಳ್ಳೆ ಚಪ್ಪಾಳೆ ಹೊಡೆಯುವ ಮೂಲಕ ಸ್ಪರ್ಧಿಗಳನ್ನು ಪ್ರೋತ್ಸಾಹಿಸಿದರು.

ಕೆಸರು ಗದ್ದೆ ಓಟ: ಕೆಸರು ಗದ್ದೆ ಓಟದಲ್ಲಿ ಕೆಸರಿನಲ್ಲಿ ಬೀಳುವುದನ್ನು ಲೆಕ್ಕಿಸದೆ ಗುರಿ ಮುಟ್ಟಲು ಪೈಪೋಟಿ ನಡೆಸಿ ಓಟದಲ್ಲಿ ಪಾಲ್ಗೊಂಡು ಸಂಭ್ರಮಪಟ್ಟರು.

ಅಣಿಕಲ್ಲು ಅಳಿಗುಳಿಮನೆ ಆಟಗಳು ಮಹಿಳೆಯರ ಸೃಜನಶೀಲತೆ, ಬುದ್ಧಿಯನ್ನು ದ್ವಿಗುಣಗೊಳಿಸುವಂತಹ ಆಟಗಳಾಗಿದ್ದು ಗ್ರಾಮೀಣ ಮಹಿಳೆಯರು ಸಂಭ್ರಮದಿಂದ ಪಾಲ್ಗೊಂಡಿದ್ದರು.

ದೇಸಿ ಆಟಗಳ ಕ್ರೀಡಾಕೂಟದಲ್ಲಿ 13 ಪ್ರಾಥಮಿಕ ಶಾಲೆಯ 150 ಬಾಲಕರು, 125 ಬಾಲಕಿಯರು ಸೇರಿದಂತೆ 275 ವಿದ್ಯಾರ್ಥಿಗಳು, 53 ಪ್ರೌಢಶಾಲೆಗಳಿಂದ 858 ಬಾಲಕರು, 565 ಬಾಲಕಿಯರು ಸೇರಿದಂತೆ 1423 ವಿದ್ಯಾರ್ಥಿಗಳು, 8 ಪಬ್ಲಿಕ್ ಶಾಲೆಗಳಿಂದ 209 ಬಾಲಕರು, 156 ಬಾಲಕಿಯರು ಸೇರಿದಂತೆ 365 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಗ್ರಾಮೀಣ ಜನರ ಬದುಕಿನಿಂದ ದೂರವಾಗುರುವ ಇಂತಹ ದೇಸಿ ಆಟಗಳ ಪರಿಚಯವನ್ನು ಮುಂದಿನ ಪೀಳಿಗೆಗೂ ಪರಿಚಯಿಸುವಂತಹ ಕಾರ್ಯಕ್ಕೆ ಸುತ್ತೂರು ಜಾತ್ರೆ ಮುಂದಾಗಿದೆ. ಜೊತೆಗೆ ನಗರ ಪ್ರದೇಶದವರಿಗೂ ಸಹ ದೇಸಿ ಆಟಗಳ ಪರಿಚಯಿಸುವಂತಹ ಕಾರ್ಯ ನಡೆದಿದೆ.

ನಂ.ಗೂಡಲ್ಲಿ ಕಮಲ ಅರಳಿಸಲು ಶ್ರಮಿಸೋಣ



ಮಲ್ಕುಂಡಿ, ಜ.21– ಪ್ರಧಾನಿ ಮೋದಿಯವರ ಜನಪರ ಯೋಜನೆಗಳೇ ಶ್ರೀರಕ್ಷೆಯಾಗಿದ್ದು, ಈ ಬಾರಿ ಕ್ಷೇತ್ರದಲ್ಲಿ ಮತ್ತೆ ಕಮಲ ಅರಳಲು ಒಗ್ಗಟಿನಿಂದ ಶ್ರಮಿಸೋಣ ಎಂದು ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್ ತಿಳಿಸಿದರು.

ನಂಜನಗೂಡು ತಾಲೂಕಿನ ಕಸುವಿನಹಳ್ಳಿಯಲ್ಲಿ ಬಿಜೆಪಿ ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಪಂಚದಲ್ಲೇ ಅತೀ ಹೆಚ್ಚು ಸದಸ್ಯತ್ವ ಹೊಂದಿರುವ ಬಿಜೆಪಿ ನೇತೃತ್ವದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನಪರ ಯೋಜನೆಗಳನ್ನು ಕಾರ್ಯಕರ್ತರು ಮನೆ ಮನೆಗೆ ತಲುಪಿಸಬೇಕು. ಶಾಸಕ ಬಿ.ಹರ್ಷವರ್ಧನ್ ಕ್ಷೇತ್ರಕ್ಕೆ 700 ಕೋಟಿ ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಬೂತ್ ಮಟ್ಟದಲ್ಲಿ ಪಕ್ಷದ ಬಾವುಟ ಕಟ್ಟಿ ವಿಜಯ ಪತಾಕೆ ಹರಿಸಿ ಕ್ಷೇತ್ರದಲ್ಲಿ ಮತ್ತೆ ಬಿಜೆಪಿ ಅರಳಿಸಲು ಒಗ್ಗಟಿನಿಂದ ಕಾರ್ಯಕರ್ತರು ಶ್ರಮಿಸಬೇಕಿದೆ ಎಂದರು.

ಜಿಪಂ ಮಾಜಿ ಸದಸ್ಯ ಎಸ್.ಎಂ.ಕೆಂಪಣ್ಣ ಮಾತನಾಡಿ, ಪ್ರಧಾನಿ ಮೋದಿ ನಾಯಕತ್ವದಲ್ಲಿ ಬಿಜೆಪಿಯನ್ನು ಬೂತ್ ಮಟ್ಟದಲ್ಲಿ ಸಂಘಟಿಸುವ ಕೆಲಸವನ್ನು ಪ್ರತಿಯೊಬ್ಬ ಕಾರ್ಯಕರ್ತರು ಮಾಡಬೇಕಾಗಿದೆ ಎಂದರು. ಕಾರ್ಯಕ್ರಮದಲ್ಲಿ ಬಿಜೆಪಿ ಕಾರ್ಯಕಾರಿಣಿ ಸದಸ್ಯ ಸುಬ್ಬಣ್ಣ, ಶಕ್ತಿ ಕೇಂದ್ರದ ಅಧ್ಯಕ್ಷ ಮಲ್ಲಿಕಾರ್ಜುನ, ಗ್ರಾಪಂ ಅಧ್ಯಕ್ಷ ಸ್ವಾಮಿ, ಉಪಾಧ್ಯಕ್ಷೆ ವನಜಾಕ್ಷಮ್ಮ, ಮುಖಂಡರಾದ ಸವಿತಾ, ಗಿರೀಶ್, ಮಂಜುನಾಥ್, ನವೀನ, ಗ್ರಾಪಂ ಮಾಜಿ ಅಧ್ಯಕ್ಷ ಕುಮಾರ್, ಶಿವನಂಜಪ್ಪ, ರಾಜಪ್ಪ, ಸೇರಿದಂತೆ ಪ್ರಮುಖರಿದ್ದರು.

ಸಗಾಯ ಮೇರಿ ನಿಧನ



ಹೆಚ್.ಡಿ.ಕೋಟೆ, ಜ.21– ಪಟ್ಟಣದ ಹೌಸಿಂಗ್ ಬೋರ್ಡ್ ನಿವಾಸಿ, ಜೈಭೀಮ್ ಆಟೋ ಚಾಲಕರ ಸಂಘದ ಅಧ್ಯಕ್ಷ ಚೆಲುವರಾಜು ಅವರ ಪತ್ನಿ ಸಗಾಯ ಮೇರಿ (45) ಶನಿವಾರ ನಿಧನರಾದರು.

ಸರಗೂರು ತಾಲೂಕಿನ ಸಾಗರೆ ಗ್ರಾಮದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಗಾಯ ಮೇರಿ ತಾಯಿ, ಪತಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕೊಳ್ಳೇಗಾಲ ತಾಲೂಕಿನ ಜಾಗೇರಿ ಗ್ರಾಮದಲ್ಲಿ ಭಾನುವಾರ ನಡೆಯಲಿದೆ ಎಂದು ಕುಟುಂಬ ವರ್ಗ ತಿಳಿಸಿದೆ.


ಶ್ರೀ ಹೆಚ್.ಎಸ್. ಸುಜಿತ್‌ಕುಮಾರ್ (ಅಣ್ಣ) ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ದಿನಾಂಕ : 22-01-2023
MN CREATERS MYSORE
9886817683